

# ಜನಾರೋಗ್ಯ ಕಲಾಜಾಥಾ



- ವಿಶ್ವದ ಎಂಬತ್ತು ರಾಷ್ಟ್ರಗಳಲ್ಲಿ 'ಜನಾರೋಗ್ಯ ಆಂದೋಲನ' ಅಸ್ತಿತ್ವದಲ್ಲಿದೆ. ಇವುಗಳನ್ನು ಹದಿಮೂರು ವಲಯಗಳನ್ನಾಗಿ ವಿಂಗಡಿಸಿದೆ.

- ಇದರಲ್ಲಿ ಭಾರತವೂ ಒಂದು ಪ್ರತ್ಯೇಕ ವಲಯವಾಗಿದ್ದು ಭಾರತದ ಹದಿನೇಳು ರಾಜ್ಯಗಳು ಭಾಗವಹಿಸುತ್ತಿವೆ.

- ೨೦೦೫ರಲ್ಲಿ ಬಿಡುಗಡೆಯಾಗಲಿರುವ 'ವಿಶ್ವ ಆರೋಗ್ಯ ಪರಿವೀಕ್ಷಣೆ' (Global Health Watch) ಎಂಬ ಶೀರ್ಷಿಕೆಯಡಿ ಪರ್ಯಾಯ ವಿಶ್ವ ಆರೋಗ್ಯ ವರದಿಯ (World Health Report) ಕಾರ್ಯವು ಪ್ರಾರಂಭವಾಗಿದೆ.

- ಮುಂದಿನ ಜನಾರೋಗ್ಯ ಸಭೆ - ಕ್ಯೂಯೆಂಕಾ, ಈಕ್ವೆಡಾರ್, ದಕ್ಷಿಣ ಅಮೆರಿಕ, ೨೦೦೫ನೇ ಜುಲೈ ೧೮ ರಿಂದ ೨೩ರವರೆಗೆ.



# ಜನಾರೋಗ್ಯ ಕಲಾಜಾಥಾ


*ಪ್ರಕಟಣೆ*

**ಜನಾರೋಗ್ಯ ಸಭೆ, ಕರ್ನಾಟಕ**

C/o ಸಮುದಾಯ ಆರೋಗ್ಯ ಕೋಶ

ನಂ. [illegible] ಶ್ರೀನಿವಾಸ ನಿಲಯ, ಜಕ್ಕಸಂದ್ರ, ಮೊದಲ ಮುಖ್ಯರಸ್ತೆ

ಮೊದಲನೇ ಬ್ಲಾಕ್, ಕೋರಮಂಗಲ, ಬೆಂಗಳೂರು - [illegible]

*JANAROGYA KALAJATHA*, a book prepared by Janarogya Andolana, Karnataka

First Impression : 2000
Second Impression : 2004 (Revised)

Pages : viii + 152

**Published by**
**Janarogya Andolana**, Karnataka
Convener, Samudaya Arogya Kosha
# 367, Srinivasa Nilaya, Jakkasandra, First Main
First Block, Koramangala, Bangalore - 560 034

*Cartoons Courtesy :*
Deccan Herald, Bangalore
NEPED & IIRR. 1999
Voluntary Health Association of India
Shirdi Prasad Tekur

*Published with the Financial Assistance from*
WHO - SEARO, New Delhi
FEVORD-K, Bangalore
VHA-K, Bangalore
INSA, Bangalore
Janodaya, Bangalore
Indian Social Institute (Women's Desk) Bangalore
Community Health Cell, Bangalore

*Layout & Design*
Dr. B.S. Paresh Kumar

*Printed at*
ILA PRINTERS
Bangalore - 560 026
Ph : 26757159 / 30615773

# ಮೊದಲ ಆವೃತ್ತಿಯ ಮುನ್ನುಡಿಯಿಂದ

"೨೦೦೦ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ" ಎಂಬ ಗುರಿಯನ್ನು ಸರಕಾರಗಳು ಮರೆತಂತಿದೆ. ಐವತ್ತುಮೂರು ವರ್ಷಗಳ ಸ್ವಾತಂತ್ರ್ಯದ ನಂತರವೂ, ಆರೋಗ್ಯ ಪರಿಸ್ಥಿತಿ ಸಮರ್ಪಕವಾಗಿಲ್ಲ. ತಡೆಗಟ್ಟಬಹುದಾದ ರೋಗಗಳು ಇಂದಿಗೂ ಕಂಡುಬರುತ್ತವೆ. ಪ್ರಾಥಮಿಕ ಆರೋಗ್ಯ ಪಾಲನೆಯ ವ್ಯವಸ್ಥೆಯನ್ನು ಸುಧಾರಿಸದೇ ಇರುವುದು ಆರೋಗ್ಯ ಕಾರ್ಯಕ್ರಮಗಳಲ್ಲಿ ಜನರ ಸಹಭಾಗಿತ್ವ ಇಲ್ಲದಿರುವುದು ಹಾಗೂ ಇತ್ತೀಚೆಗಿನ ಹೊಸ ಧಾಳಿಯಾದ ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣ ನೀತಿಯಿಂದಾಗಿ, ಆರೋಗ್ಯ ಪರಿಸ್ಥಿತಿ ಸುಧಾರಿಸಿಲ್ಲ. ಜನಾರೋಗ್ಯ ಸುಧಾರಣೆ ಜನರಿಗೆ ಹಾಗೂ ಸರಕಾರಕ್ಕೆ ಒಂದು ಆದ್ಯತೆಯ ವಿಷಯ....

ಜನಾರೋಗ್ಯ ಸುಧಾರಣೆಗೆ ಅಗತ್ಯವಿರುವ ಜನಾಂದೋಲನದ ಮುಂದಾಳತ್ವವನ್ನು ಜನಾರೋಗ್ಯ ಸಭೆಗಳು ತೆಗೆದುಕೊಂಡಿವೆ. ಭಾರತವಷ್ಟೇ ಏಕೆ, ಇಡೀ ಜಗತ್ತಿನಾದ್ಯಂತ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನಾವು ಅದರ ಭಾಗವಾಗಿ ಹೋರಾಟ ಮಾಡಬೇಕಾಗಿದೆ..... ಜನಾರೋಗ್ಯದ ಪರಿಸ್ಥಿತಿಯನ್ನು ಸಾಮಾನ್ಯ ಜನರಿಗೆ ನಾಟಕ, ಹಾಡುಗಳ ಮೂಲಕ ವಿವರಿಸಲು ಈ ಪುಸ್ತಕ ಸಹಾಯಕವಾಗುತ್ತದೆ ಎಂದು ನಾವು ನಂಬಿದ್ದೇವೆ.....

❑

# ಜನಾರೋಗ್ಯ ಸಭೆ - ಕರ್ನಾಟಕ

*ಎಲ್ಲರಿಗೂ ಆರೋಗ್ಯ - ಈಗ ಇದಕ್ಕಾಗಿ ಜನಾಂದೋಲನ*

## ಸಂಘಟನಾ ಸಮಿತಿ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (AIDWA)
ಭಾರತ ಜ್ಞಾನ ವಿಜ್ಞಾನ ಸಮಿತಿ (BGVS)
ಸಮುದಾಯ ಆರೋಗ್ಯ ಕೋಶ (CHC)
ಕ್ಯಾಥೋಲಿಕ್ ಹೆಲ್ತ್ ಅಸೋಸಿಯೇಷನ್ ಆಫ್ ಇಂಡಿಯಾ (CHAI-KA) ಕರ್ನಾಟಕ
ಕ್ಯಾಂಪೇನ್ ಎಗೆನೆಸ್ಟ್ ಚೈಲ್ಡ್ ಲೇಬರ್ (CACL)
ಕ್ರಿಶ್ಚಿಯನ್ ಮೆಡಿಕಲ್ ಅಸೋಸಿಯೇಷನ್ ಆಫ್ ಇಂಡಿಯಾ (CMAI) ಕರ್ನಾಟಕ
ಔಷಧಿ ಕ್ರಿಯಾ ವೇದಿಕೆ (DAF-K) ಕರ್ನಾಟಕ
ದಲಿತ ಸಂಘರ್ಷ ಸಮಿತಿ (DSS)
ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (DYFI)
ಫೋರಮ್ ಫಾರ್ ಸ್ಟ್ರೀಟ್ ಚಿಲ್ಡ್ರನ್
ಭಾರತೀಯ ಕುಟುಂಬ ಯೋಜನಾ ಸಂಘ (FPAI)
ಕರ್ನಾಟಕ ಗ್ರಾಮಾಭ್ಯುದಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ (FEVORD-K) ಕರ್ನಾಟಕ
ಸ್ಥಳೀಯ ಆರೋಗ್ಯ ಪರಂಪರೆಗಳ ಪುನರುತ್ಥಾನ ಪ್ರತಿಷ್ಠಾನ (FRLHT)
ಜಾಯಿಂಟ್ ವುಮೆನ್ಸ್ ಪ್ರೋಗ್ರಾಂ (JWP) ಕರ್ನಾಟಕ
ಕರ್ನಾಟಕ ರಾಜ್ಯ ಔಷಧಿ ಮತ್ತು ಮಾರಾಟ ಪ್ರತಿನಿಧಿಗಳ ಸಂಘ (KSMSRA)
ಕರ್ನಾಟಕ ರಾಜ್ಯ ರೈತ ಸಂಘ (KRRS)
ಕರ್ನಾಟಕ ಪ್ರಾಂತ ರೈತ ಸಂಘ (AIKS)
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ (KRVP)
ಕರ್ನಾಟಕ ಆರೋಗ್ಯ ಸ್ವಯಂ ಸೇವಾ ಸಂಸ್ಥೆ (VHAK)
ಮಹಿಳಾ ಸಾಮಖ್ಯ-ಕರ್ನಾಟಕ (MS-K)
ನ್ಯಾಷನಲ್ ಅಲಿಯೆನ್ಸ್ ಫಾರ್ ಪೀಪಲ್ಸ್ ಮೂವ್‌ಮೆಂಟ್ (NAPM) ಕರ್ನಾಟಕ
ನ್ಯೂ ಎಂಟಿಟಿ ಫಾರ್ ಸೋಶಿಯಲ್ ಆಕ್ಷನ್ (NESA)
ಸೊಸೈಟಿ ಫಾರ್ ಸರ್ವಿಸಸ್ ಟು ವಾಲಂಟರಿ ಏಜೆನ್ಸೀಸ್ (SOSVA)
ಜನೋದಯ, ಬೆಂಗಳೂರು
ಕರ್ನಾಟಕ ಕೊಳೆಗೇರಿ ನಿವಾಸಿಗಳ ಸಂಯುಕ್ತ ಸಂಘಟನೆ (KKNS)

### ಭಾಗವಹಿಸುವ ಇತರ ಸಂಸ್ಥೆಗಳು

ಆರೋಗ್ಯಪಾಲನೆ ಮತ್ತು ಆರೋಗ್ಯ ನೀತಿಯ ಬಗ್ಗೆ ಕಳಕಳಿಯುಳ್ಳ ಮೇಲಿನ ಸಂಘಟನೆಗಳ ಜಾಲದಲ್ಲಿರುವ ಮತ್ತು ಹೊರಗಿರುವ ಅನೇಕ ಸಂಸ್ಥೆಗಳು ಜನಾರೋಗ್ಯ ಸಭೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ.

*ಸಂಪರ್ಕ ವಿಳಾಸ :*

ಸಮುದಾಯ ಆರೋಗ್ಯ ಕೋಶ, ಸಂ. ೩೬೭, ಶ್ರೀನಿವಾಸ ನಿಲಯ, ಜಕ್ಕಸಂದ್ರ ಮೊದಲ ಮುಖ್ಯರಸ್ತೆ
ಮೊದಲನೇ ಬ್ಲಾಕ್, ಕೋರಮಂಗಲ, ಬೆಂಗಳೂರು - ೫೬೦ ೦೩೪
ದೂರವಾಣಿ : ೨೫೫೩೧೫೧೮, ಫ್ಯಾಕ್ಸ್ : ೨೫೫೨೫೩೭೨ ಇ-ಮೇಲ್ : sochara@vsnl.com
ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಮಂದಿರದ ಆವರಣ, ಬೆಂಗಳೂರು - ೫೬೦ ೦೧೨
ದೂರವಾಣಿ : ೨೩೬೦೦೩೬೮೪, ಇ-ಮೇಲ್ : bgvs_kar@hotmail.com

# ಪರಿಚಯ

೨೦೦೦ ಇಸವಿಯಲ್ಲಿ ಕೋಲ್ಕತ್ತಾದಲ್ಲಿ ಜನತಾ ಆರೋಗ್ಯ ಸಂಸದಿನ ಎದುರು ನಡೆದ ಜಿಲ್ಲಾ ಮಟ್ಟದ ಕಾರ್ಯಾಗಾರಗಳಲ್ಲಿ (ಶಿಬಿರಗಳಲ್ಲಿ) ಕನ್ನಡದಲ್ಲಿ ತಯಾರಿಸಲಾದ ಹಾಡು ಮತ್ತು ನಾಟಕಗಳ ಸಂಗ್ರಹವಾದ 'ಕಲಾಜಾಥ'ವನ್ನು ಪರಿಚಯಿಸಲು ನನಗೆ ಅತ್ಯಂತ ಹರ್ಷವಾಗುತ್ತಿದೆ.

ಡಿಸೆಂಬರ್ ೨೦೦೦ದಲ್ಲಿ ಬಾಂಗ್ಲಾದೇಶದ ಢಾಕಾದಲ್ಲಿ ಏರ್ಪಡಿಸಲಾಗಿದ್ದ ಚಾರಿತ್ರಿಕ ಜನತಾ ಆರೋಗ್ಯ ಸಭೆ ನಡೆದ ನಂತರ ಭಾರತ ಹಾಗೂ ಪ್ರಪಂಚದ ಇತರ ಭಾಗಗಳಲ್ಲಿ ಜನತಾ ಆರೋಗ್ಯ ಆಂದೋಲನಕ್ಕೆ ಚಾಲನೆ ದೊರಕಿತು. ಆ ಸಭೆಯಲ್ಲಿ ೭೫ ರಾಷ್ಟ್ರಗಳಿಂದ ಬಂದಿದ್ದ ಸುಮಾರು ೨೦೦೦ ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರಪಂಚದ ಎಲ್ಲೆಡೆಯಲ್ಲಿ ಸಾಮಾನ್ಯ ಜನರು ಎದುರಿಸುತ್ತಿದ್ದ ವಿವಿಧ ಬಗೆಯ ಆರೋಗ್ಯ ಸಂಬಂಧಿತ ಸಮಸ್ಯೆಗಳನ್ನು ಕುರಿತು ಮೂರು ದಿನಗಳ ಕಾಲ ವಿಚಾರ ವಿನಿಮಯಗಳ ನಂತರ, ಈ ಸಭೆಯು ಪ್ರಜಾ ಆರೋಗ್ಯ ಸನ್ನದನ್ನು ಅಂಗೀಕರಿಸಿತು. ಜನತಾ ಆರೋಗ್ಯ ಸಭೆಗೂ ಮುನ್ನ ಜನತಾ ಆರೋಗ್ಯ ಸಂಸದನ್ನು ಕೋಲ್ಕತ್ತಾದಲ್ಲಿ ಏರ್ಪಡಿಸಲಾಗಿತ್ತು. ಆ ಸಂಸದಿನಲ್ಲಿ ಭಾರತದ ವಿವಿಧ ರಾಜ್ಯಗಳಿಂದ ಬಂದಿದ್ದ ಸುಮಾರು ೨೫೦೦ ಆಂದೋಲನಕಾರರು ಭಾಗವಹಿಸಿದ್ದು, ಆನಂತರದಲ್ಲಿ ಭಾರತ ಜನ ಸ್ವಾಸ್ಥ್ಯ ಅಭಿಯಾನ - ಜೆ.ಎಸ್.ಎ. (ಪಿ.ಹೆಚ್.ಎಮ್.) ರೂಪುಗೊಂಡಿತು. ಆ ಸಂಸದಿನಲ್ಲಿ ಭಾರತೀಯ ಪ್ರಜಾ ಆರೋಗ್ಯ ಸನ್ನದನ್ನು ಸ್ವೀಕರಿಸಲಾಯಿತು. ಜೆ.ಎಸ್.ಎ. ರೂಪಿಸಲು ಸುಮಾರು ಒಂದು ಸಾವಿರ ಬುಡಮಟ್ಟದ ಸಂಸ್ಥೆಗಳನ್ನು ಪ್ರತಿನಿಧಿಸುತ್ತಿದ್ದ ೧೮ ಆರೋಗ್ಯ ಜಾಲಗಳು ಒಟ್ಟಾಗಿ ಸೇರಿದವು. ಪ್ರಸ್ತುತ ಜೆ.ಎಸ್.ಎ. ಭಾರತದಲ್ಲಿ ಸುಮಾರು ೧೮ ರಾಜ್ಯಗಳಲ್ಲಿ ತನ್ನ ಘಟಕಗಳನ್ನು ಹೊಂದಿದೆ. ಆರೋಗ್ಯ ಶುಶ್ರೂಷೆ ಸಂಬಂಧಿತ ವಿಷಯಗಳ ಬಗ್ಗೆ ಹಕ್ಕು ಪ್ರತಿಪಾದನೆ ಕುರಿತು ಜೆ.ಎಸ್.ಎ. ಪ್ರಸ್ತುತ ವಿವಿಧ ರಾಜ್ಯಗಳಲ್ಲಿ ಆಂದೋಲನ ನಡೆಸುತ್ತಿದೆ.

ಕರ್ನಾಟಕದಲ್ಲಿನ ಆರೋಗ್ಯ ಚಳವಳಿಕಾರರಿಂದ ತಯಾರಿಸಲಾದ ಜನತಾ ಆರೋಗ್ಯ ಆಂದೋಲನ ಹೊತ್ತಿಗೆಗಳ ಫಲಶ್ರುತಿಯೆ ಈ ಪುಸ್ತಕ. ಈ ಹಾಡುಗಳು ಹಾಗೂ ನಾಟಕಗಳ ಮೂಲಕ, ನಮ್ಮ ದೇಶದಲ್ಲಿರುವ ಲಕ್ಷಾಂತರ ಬಡಜನರ ಹಾಗೂ ಅಲಕ್ಷ್ಯಕ್ಕೆ ಗುರಿಯಾದ ಜನರ ಆರೋಗ್ಯ ಅಗತ್ಯಗಳಿಗೆ ಸಂಬಂಧಿಸಿದ ನೀತಿ ರೂಪಿಸುವವರ,

ರಾಜಕೀಯ ಮುಖಂಡರ ಹಾಗೂ ಮುಖ್ಯವಾಗಿ ಜನರ ಗಮನಕ್ಕೆ ತರಲಾಯಿತು. ಕರ್ನಾಟಕದಲ್ಲಷ್ಟೇ ಅಲ್ಲದೆ ಭಾರತದ ಇತರ ಭಾಗಗಳಲ್ಲೂ ಈ ಹಾಡುಗಳು ಮತ್ತು ನಾಟಕಗಳು ಸಾವಿರಾರು ಚಳವಳಿಗಾರರಿಗೆ ಉತ್ಸಾಹ ತುಂಬಿ ಸ್ಫೂರ್ತಿ ನೀಡಿದೆ.

ಈ ಪುಸ್ತಕದಲ್ಲಿ ಬಹಳ ಚೆನ್ನಾಗಿ ಪ್ರಸ್ತುತ ಪಡಿಸಲಾದ ಸಂದೇಶಗಳು ಭಾರತದ ಇತರ ಭಾಗಗಳಲ್ಲಿರುವ ಜನರನ್ನು ತಲುಪುವಂತೆ ಅನುಕೂಲವಾಗಲು, ಈ ಪುಸ್ತಕವು ಇತರ ಭಾರತೀಯ ಭಾಷೆಗಳಿಗೆ ಭಾಷಾಂತರಗೊಳ್ಳುತ್ತದೆಂದು ನಾನು ಆಶಿಸುತ್ತೇನೆ.

ಈ ಪುಸ್ತಕದಲ್ಲಿ ಸೇರಿಸಲಾದ ಹಾಡುಗಳನ್ನು ಮತ್ತು ನಾಟಕಗಳನ್ನು ಸಿದ್ಧಪಡಿಸಿ ಪ್ರದರ್ಶಿಸಲು ಅವಿರತವಾಗಿ ದುಡಿದ ಜನಾರೋಗ್ಯ ಆಂದೋಲನ ಕರ್ನಾಟಕ (ಜೆ.ಎ.ಎ.-ಕೆ) ಮತ್ತು ಇದಕ್ಕಾಗಿ ಶ್ರಮಿಸಿದ ಎಲ್ಲರನ್ನು ನಾನು ಅಭಿನಂದಿಸುತ್ತೇನೆ. ಭವಿಷ್ಯದಲ್ಲಿಯೂ ಆರೋಗ್ಯ ಸ್ಥಿತಿಯನ್ನು ಪ್ರತಿಬಿಂಬಿಸಲು ಇತರ ಕಲಾಮಾಧ್ಯಮಗಳನ್ನು ಜೆ.ಎ.ಎ.-ಕೆ. ಬಳಸಿಕೊಳ್ಳುತ್ತದೆಂದು ನಾನು ಆಶಿಸುತ್ತೇನೆ.

ಈ ಪುಸ್ತಕವನ್ನು ಮುದ್ರಿಸಲು ಆರ್ಥಿಕ ನೆರವು ನೀಡಿದ ವಿಶ್ವ ಆರೋಗ್ಯ ಸಂಸ್ಥೆ - ಸಿಯಾರೊ (WHO-SEARO) ಹಾಗೂ ಇತರ ಸ್ವಯಂ ಸೇವಾ ಸಂಸ್ಥೆಗಳಿಗೆ ಹೃತ್ಪೂರ್ವಕ ಧನ್ಯವಾದಗಳು.

ಡಾ. ಬಿ. ಎಕ್ಬಾಲ್

ಆಗಸ್ಟ್ ೨೦೦೪ ರಾಷ್ಟ್ರೀಯ ಸಂಚಾಲಕರು, ಜನಸ್ವಾಸ್ಥ್ಯ ಅಭಿಯಾನ

# ಪರಿವಿಡಿ

ಹಾಡುಗಳು


| | | | |
|---|---|---|---|
| ೧. | ಜನಾರೋಗ್ಯ ಕಲಾಜಾಥಾ | ... | ೩ |
| ೨. | ಒಂದು ಗೀಗಿ ಪದ | ... | ೪ |
| ೩. | ಕನಸಿನ ಸ್ವರ್ಗ | ... | ೬ |
| ೪. | ಆರೋಗ್ಯಕ್ಕೆ ಕಂಟಕ ಜಾಗತೀಕರಣ | ... | ೭ |
| ೫. | ಗಾಣ | ... | ೮ |
| ೬. | ಏಡ್ಸ್ | ... | ೯ |
| ೭. | ಮರಣದ ಗಂಟೆ | ... | ೧೦ |
| ೮. | ಗಿಗಿ ಪದ | ... | ೧೨ |
| ೯. | ಲಾವಣಿ | ... | ೧೪ |
| ೧೦. | ನೆಲೆಯಿಲ್ಲದ ಬದುಕು | ... | ೧೬ |
| ೧೧. | ರೋಗ ಬಂದಾತೂ ಜೋಪಾನ | ... | ೧೭ |
| ೧೨. | ಹಾಕ್ಸಮ್ಮ ಲಸಿಕೆಯಾ | ... | ೧೯ |
| ೧೩. | ಎಚ್ಚರ | ... | ೨೦ |
| ೧೪. | ಮುಟ್ಟು ಮೈಲಿಗೆ ಅಲ್ಲ | ... | ೨೨ |
| ೧೫. | ಪ್ರಸವ ಕಾಲದ ಆರೈಕೆ | ... | ೨೩ |
| ೧೬. | ಎಳೆಮನಕೆ - ಭಾರ ಬೇಕೆ | ... | ೨೫ |
| ೧೭. | ವಿಷ ಶತಮಾನ | ... | ೨೬ |
| ೧೮. | ಮಾರ್ಗದರ್ಶಿ | ... | ೨೭ |
| ೧೯. | ಸೃಷ್ಟಿ | ... | ೨೮ |
| ೨೦. | ಮತ್ತೆ ಬಂತು ನೋಡಿರೋ | ... | ೨೯ |
| ೨೧. | ಬನ್ನಿರಿ ಗೆಳೆಯರೆ, ಬನ್ನಿರಿ ಗೆಳತಿಯರೇ | ... | ೩೦ |
| ೨೨. | ಆರೋಗ್ಯ ಬೇಕಣ್ಣಾ | ... | ೩೧ |
| ೨೩. | ಸಾಂಕ್ರಾಮಿಕ ರೋಗ | ... | ೩೨ |
| ೨೪. | ನೀರು | ... | ೩೩ |

**ಕಿರು ನಾಟಕಗಳು**


| | | | |
|---|---|---|---|
| ೧. | ಆರೋಗ್ಯ ಭಾಗ್ಯ | ... | ೩೭ |
| ೨. | ಬಾಡಿದ ಬದುಕು | ... | ೫೩ |
| ೩. | ಹಳ್ಳಿ ಆರೋಗ್ಯ | ... | ೬೦ |
| ೪. | ಸಂದೇಶ | ... | ೭೫ |
| ೫. | ಏಡ್ಸೆಂಬ ಮಹಾಮಾರಿ | ... | ೮೧ |
| ೬. | ವಿಸರ್ಜನೆ | ... | ೯೬ |
| ೭. | ಕಾಲರಾ | ... | ೧೦೯ |
| ೮. | ರಕ್ತದಾನ | ... | ೧೧೩ |
| ೯. | ಪೀಡೆ | ... | ೧೧೯ |
| ೧೦. | ಜವಾಬ್ದಾರಿ | ... | ೧೨೬ |
| ೧೧. | ಒಂದು ರೋಗದ ಕಥೆ | ... | ೧೩೪ |



# ಹಾಡುಗಳು



## ಜನಾರೋಗ್ಯ ಕಲಾಜಾಥಾ

*- ಗ್ಯಾರಂಟಿ ರಾಮಣ್ಣ*

ಜನಾರೋಗ್ಯ ಕಲಾಜಾಥಾ ಬಂತು ನಮ್ಮೂರಿಗೆ
ಆರೋಗ್ಯದ ಸಂದೇಶ ತಂದಿತು ಎಲ್ಲ ಜನರಿಗೆ
ಬನ್ನಿರೀ.... ಅಕ್ಕ ಬನ್ನಿರಿ, ಬನ್ನಿರಿ.... ಅಣ್ಣಾ ಬನ್ನಿರಿ...

ಕರ್ನಾಟಕ ರಾಜ್ಯ ಜನಾರೋಗ್ಯ ಸಮಿತಿಯಡಿಯಲಿ
ವಿವಿಧ ಸಂಘಟನೆಗಳು ಸೇರಿವೆ ಜೊತೆಯಲಿ
ಉತ್ತಮ ಆರೋಗ್ಯ, ಅನುಷ್ಠಾನಗೊಳಿಸಬೇಕು
ಇದಕಾಗಿ ನಿಮ್ಮೆಲ್ಲರ ಸಹಕಾರ ಬೇಕೆ ಬೇಕು
ಆರೋಗ್ಯದ ಹೋರಾಟಕೆ ಮುನ್ನುಗ್ಗಬೇಕು ॥ಜ॥

ಕುಡಿವ ನೀರು ತಿನ್ನೋ ಅನ್ನ ಎಲ್ಲರಿಗೂ ಬೇಕು
ಸುತ್ತಮುತ್ತ ಪರಿಸರವು ಸ್ವಚ್ಛವಾಗಿರಬೇಕು
ನಿಮ್ಮ ಆರೋಗ್ಯ, ಅದು ನಿಮ್ಮ ಕೈಯಲ್ಲಿ
ಈ ಅರಿವಿನಾ ಪ್ರಜ್ಞೆ, ಬರಬೇಕು ನಮ್ಮಲ್ಲಿ
ಇದ ತಿಳಿದಾಗಲೇ ಸುಧಾರಣೆ ಈ ದೇಶದಲ್ಲಿ ॥ಜ॥

ಅಣ್ಣ ತಮ್ಮ, ಅಕ್ಕ ತಂಗಿ ಎಲ್ಲ ಒಂದುಗೂಡಿರಿ
ಜನಾರೋಗ್ಯಕ್ಕಾಗಿ ಎಲ್ಲ ಮುನ್ನುಗ್ಗಿ ಸಾಗಿರಿ
ಎಲ್ಲರಿಗೂ ಆರೋಗ್ಯ, ನಮ್ಮೆಲ್ಲರ ಸೌಭಾಗ್ಯ
ಸುಖಿ ಜೀವನ ಎಲ್ಲರಾ ಬದುಕಿನ ಭಾಗ



## ಒಂದು ಗೀಗಿ ಪದ

*- ಗ್ಯಾರಂಟಿ ರಾಮಣ್ಣ*

ಕುಂತ ನಿಂತ ಸಭಾದಾಗ, ಕೂಡಿವಂತ ಮಂದ್ಯಾಗ
ಕೈ ಮುಗಿದು ಹೇಳತೀನಿ ಕೇಳಿರಣ್ಣಾ....
ಮತ್ತೆ ಒಂದು ಹೇಳತೀನಿ ಹುಟ್ಟಿದಂತ ಮಂದಿಗೆಲ್ಲ
ಆರೋಗ್ಯ ಭಾಗ್ಯ ಇದ ತಿಳಿಯಿರಣ್ಣಾ

ಗೀಯಗಾ.. ಗಾಗಿಯಗಾ ... ಗೀಯಗಾ....ಗಾಗಿಯಗಾ
ಗೀಯಗಾ.. ಗಾಗಿಯಗಾ...ಗೀಯಗೀಯ ಗೀಯಗೀಯ ಗಾಗಿಯಗಾ..

ಕುಡಿಯಲು ನಮಗೆ ನೀರಿರಬೇಕು
ಸೇವಿಸಲು ಶುದ್ಧ ಗಾಳಿಯು ಬೇಕು
ಇರಲಿಕ್ಕೆ ಮನೆ ಬೇಕು, ಹೊಟ್ಟೆ ತುಂಬ ಅನ್ನ ಬೇಕು
ಇಲ್ಲದಿದ್ರೆ ಸಾಪ್ಯಾಕೆ ಬದುಕಬೇಕು

ಮನೆ ಮುಂದೆ ನೀನು ಮಾಡ್ತೀಯ ತಿಪ್ಪೆ
ಸೊಳ್ಳೆಯು ಸೇರ್ತಾವೆ ತಿಳಕೊಳ್ಳೋ ಬೆಪ್ಪೆ
ಆ ಸೊಳ್ಳೆ ಕಡಿತೈತೆ ಮಲೇರಿಯಾ ಬರುತೈತೆ
ಮುಂದಿನ ಊರಿಗೆ ಕಳುಸುತೈತೆ

ಗೀಯಗಾ.. ಗಾಗಿಯಗಾ ... ಗೀಯಗಾ....ಗಾಗಿಯಗಾ
ಗೀಯಗಾ.. ಗಾಗಿಯಗಾ...ಗೀಯಗೀಯ ಗೀಯಗೀಯ ಗಾಗಿಯಗಾ..

ಊರ ಮುಂದೆ ಬೋರ್ ಒಂದೈತೆ
ಒತ್ತಿ ಒತ್ತಿ ಅದು ಮರುದೋಗ್ಯೆತೆ
ಮಾಡ್ಸೋರು ಮೊದಲಿಲ್ಲ ಕೇಳೋರು ದಿಕ್ಕಿಲ್ಲ
ಕೆರೆ ನೀರ ಕುಡಿಯೋದು ತಪ್ಪಲಿಲ್ಲ

ಚಂದ್ರಣ್ಣನ ಮಗುವಿಗೆ ಚಳಿ ಜ್ವರ ಬಂತು
ಮನೆಮಂದಿಗೆಲ್ಲ ಗಾಬರಿಯಾಯ್ತು
ಔಷಧ ಮರೆತುಬಿಟ್ರು ಐನೋರ ಕರೆಸಿಬಿಟ್ರು
ಮಗು ಸತ್ತೋದ ಮೇಲೆ ಕಣ್ ಕಣ್ ಬಿಟ್ರು

ಗೀಯಗಾ.. ಗಾಗಿಯಗಾ ... ಗೀಯಗಾ....ಗಾಗಿಯಗಾ
ಗೀಯಗಾ.. ಗಾಗಿಯಗಾ...ಗೀಯಗೀಯ ಗೀಯಗೀಯ ಗಾಗಿಯಗಾ..

ಕಾಯಿಲೆ ಬಂದಾಗ ಕಣ್ಮುಚ್ಚಬೇಡಿ
ಔಷಧ ಕೊಡಿಸೋದ ನೀವ್ ಮರಿಬ್ಯಾಡಿ
ಕಂಡೋರ ಮಾತ್ಕೇಳಿ ಕಣ್ಣೀರ ಹಾಕ್ಬೇಡಿ
ಬದುಕುವವರ ಜೀವಂತ ಸುಡಬೇಡಿ

ಗೀಯಗಾ.. ಗಾಗಿಯಗಾ ... ಗೀಯಗಾ....ಗಾಗಿಯಗಾ
ಗೀಯಗಾ.. ಗಾಗಿಯಗಾ...ಗೀಯಗೀಯ ಗೀಯಗೀಯ ಗಾಗಿಯಗಾ..



## ಕನಸಿನ ಸ್ವರ್ಗ

*- ಗ್ಯಾರಂಟಿ ರಾಮಣ್ಣ*

ಕಂಡೆ ಕಂಡೆ ನಾ ಸ್ವರ್ಗವ ಕಂಡೆ ರಾತ್ರಿ ಕನಸಲ್ಲೀ
ಎಲ್ಲವ ಮರೆತು ಮಲಗಿದ್ದೆ ಆನಂದ ಲೋಕದಲ್ಲಿ

ದೊಡ್ಡದೊಂದು ಮನೆಯಿತ್ತು । ಮನೆ ಮುಂದೆ
ಹೂವಿನ ತೋಟವಿತ್ತು
ಗಾಳಿ, ಬೆಳಕು ಕುಡಿಯುವ ನೀರಿನ ವ್ಯವಸ್ಥೆಯಾಗಿತ್ತು
ಪಕ್ಕದಲ್ಲಿ ಶೌಚಾಲಯವಿತ್ತು ||ಕ||

ಕೈಯಲಿ ಕೆಲಸಿತ್ತು । ದುಡಿಯಲು
ಜಮೀನು ಬಹಳಿತ್ತು
ಬೆಳೆದಾ ಬೆಳೆಯ ಲಾಭದಿ ಕೈ ತುಂಬ ಹಣವು ಬಂದಿತ್ತು
ಸ್ವರ್ಗವು ಒಂದೇ ಗೇಣಿತ್ತು ||ಕ||

ಮದುವೆ ಆಗಿತ್ತು । ಮುತ್ತಿನಂತ
ಒಂದೇ ಮಗುವಿತ್ತು
ಓದಲು ಶಾಲೆ, ಉಡಲು ಬಟ್ಟೆ, ಅನುಕೂಲವಾಗಿತ್ತು
ನಮಗೆ ನೆಮ್ಮದಿ ತಂದಿತ್ತು ||ಕ||

ಕೋಳಿಯು ಕೂಗಿತ್ತು । ನನಗೊಂದು
ಸೊಳ್ಳೆಯು ಕುಟುಕಿತ್ತು
ತಟ್ಟನೆದ್ರೆ ಮಳೆ ಬಂದು ನಮ್ಮ ಹಳೆ ಗುಡಿಸಲು ಸೋರಿತ್ತು
ಸ್ವರ್ಗವು ತಲೆಕೆಳಗಾಗಿತ್ತು ||ಕ||

ಇದು ಯಾಕೆ ಇಂಗಾತು, ನನಗೀಗ ಗೊತ್ತಾಯ್ತು
ಪ್ರತಿಯೊಬ್ಬರಿಗೆ ಮೂಲಭೂತ ಸೌಲಭ್ಯವಿರಬೇಕು
ಅದಕಾಗಿ ಹೋರಾಟ ಮಾಡಬೇಕು

## ಆರೋಗ್ಯಕ್ಕೆ ಕಂಟಕ ಜಾಗತೀಕರಣ

- *ಗ್ಯಾರಂಟಿ ರಾಮಣ್ಣ*


ಜಗತ್ತನ್ನೇ ಜಗ್ಗಿಸುತಿದೆ ಜಾಗತೀಕರಣ
ಉಳ್ಳವರ ಕೊಳ್ಳೆಯಿಂದ ಭಾರತದ ಪಹಸ

ಬಂಡವಾಳಶಾಹಿಗಳು ಬದುಕಿ ಹೋಗಿಹರು
ಭಾರತದ ಬಡವರಿಗೆ ಬೆಂಕಿ ಹಚ್ಚಿಹರು
ಕೂಲಿಕಾರರ ದುಡಿಮೆ ಕಿತ್ತುಕೊಂಡಿಹರು
ಅಸಮಾನತೆ ಬೀಜವನ್ನು ಬಿತ್ತುತಲಿಹರು ॥ಜ॥

ವಿಶ್ವಬ್ಯಾಂಕ್ ಐಎಂಎಫ್ ಮುಂತಾದ ಭೂತಗಳು
ಸಾಲ ಕೊಡುವ ನೆಪದಲ್ಲಿ ದೇಶವನ್ನೇ ನುಂಗಿಹವು
ಲಂಗಿಲ್ಲ, ಲಗಾಮಿಲ್ಲ, ಅಡೆತಡೆಗಳು ಇವಕಿಲ್ಲ
ಭಾರತದ ಬಾಗಿಲನು ತೆರೆದುಕೊಟ್ಟಿಹರಲ್ಲ ॥ಜ॥

ನಿರುದ್ಯೋಗ, ನಿರಕ್ಷರತೆ, ಬಡತನವು ಹೆಚ್ಚಾಯ್ತು
ಅನಾರೋಗ್ಯ, ಆಪತ್ತು, ಎಲ್ಲೆಲ್ಲೂ ಬಲವಾಯ್ತು
ಕುಶಲ ಕೈಗಾರಿಕೆಯು ನೆಲಸಮವಾಗೋಯ್ತು
ಬಹುರಾಷ್ಟ್ರೀಯ ಕಂಪೆನಿಗೆ ತಲೆತಗ್ಗಿಸಿ ನಿಂತಾಯ್ತು ॥ಜ॥

ಭಾರತದ ಬಂಧುಗಳೆ ಭುಗಿಲೆದ್ದು ಮೇಲೇಳಿ
ಜಾಗತಿಕ ಜಂತುಗಳ ದೇಶದಿಂದ ಹೊರದೂಡಿ
ಅಡ್ಡಬರುವ ಅಡ್ಡಿಗಳ ಎದುರಿಸಲು ಒಂದಾಗಿ
ಮನುಕುಲದ ಬಲಿಯ ಮುಂದೆ ತಡೆಯಲು ಸಜ್ಜಾಗಿ ॥ಜ॥



## ಗಾಣ

*- ಗ್ಯಾರಂಟಿ ರಾಮಣ್ಣ*

ಹಾಕುತಿಹರು ಗಾಣಾ । ಹೆಣ್ಣೆ । ಹಾಕುತಿಹರು ಗಾಣ
ಪುರುಷ ಪ್ರಧಾನ ಸಮಾಜದಲ್ಲಿ ನಿನಗೆಲ್ಲಿದೆ ಸ್ಥಾನ

ಗಂಡು ನಾನೆಂದು ಹೇಳುವರು ಭಂಡತನದಲಿ ಬದುಕುವರು
ಕೊಡಬಾರದ ಹಿಂಸೆಗಳನು ಕೊಟ್ಟು ಮೂಗುದಾರವ ಹಾಕುವರು ।।ಹಾ।।

ದಿನವೂ ನಮ್ಮನು ದುಡಿಸುವರು, ಶಿಕ್ಷಣ ಕೊಡದೆ ದೂಡುವರು
ಚಿಕ್ಕವಯಸ್ಸಿನಲ್ಲಿ ಮದುವೆ ಮಾಡಿಸಿ ಹೆಣ್ಣಿನ ಜೀವವ ಹಿಂಡುವರು ।।ಹಾ।।

ಒಳಗೂ ಹೊರಗು ದುಡಿಯುವೆವು, ಹೊಟ್ಟೆಗಿಲ್ಲದೆ ಬಳಲುವೆವು
ಕುಡಕು ಗಂಡನ ಹಿಂಸೆಗೆ ನಾವು ಕಂದಿಕುಂದಿ ಹೋಗುವೆವು ।।ಹಾ।।

ಮುಂಜಾನೆ ಬೇಗನೆ ಏಳುವೆವು, ಮನೆಯನು ಸ್ವಚ್ಛ ಮಾಡುವೆವು
ತೊಳೆದು ಬಳಿದು ಅಡಿಗೆ ಮಾಡಿ ಕೊನೆಗೆ ಉಳಿದದ್ದು ಉಂಡು ಮಲಗುವೆವು ।।ಹಾ।।

ಊಟನಿದ್ರೆ ಸರಿಯಾಗಿಲ್ಲ ನಿತ್ಯ ದುಡಿಮೆಯು ತಪ್ಪಲೇ ಇಲ್ಲ
ಮನೆಯವರ ಕಾಟಕೆ ಮಕ್ಕಳ ಹಡೆದು ನಿಶ್ಯಕ್ತಿಯಾಗಿ ಹೋದೆವಲ್ಲಾ ।।ಹಾ।।

ಈ ಗುಲಾಮಗಿರಿಯ ಅಳಿಸಲೇಬೇಕು ನಮ್ಮ ಹಕ್ಕನ್ನು ಪಡೆಯಲೇಬೇಕು
ಉತ್ತಮ ಶಿಕ್ಷಣ ಆರೋಗ್ಯಕ್ಕಾಗಿ ಧೈರ್ಯದಿಂದ ಮುನ್ನುಗ್ಗಬೇಕು ।।ಹಾ।।

❑

## ಏಡ್ಸ್

- *ಗ್ಯಾರಂಟಿ ರಾಮಣ್ಣ*

ಏಡ್ಸ್ ರೋಗ ಬಂದೀತು ಎಚ್ಚರವಿರಲಣ್ಣಾ
ಜೀವವನ್ನು ತೆಗೆಯುವುದು ತಿಳಿದು ಬಾಳಣ್ಣಾ

ಗಂಡಾಗಲಿ ಹೆಣ್ಣಾಗಲಿ ಬಿಡುವುದೇ ಇಲ್ಲ
ನಮ್ಮೊಳಗೆ ಬಂದದು ಗೊತ್ತಾಗುವುದೇ ಇಲ್ಲ
ರಕ್ತದಾ ಮೂಲಕ ಹರಡುವ ಈ ರೋಗ
ಔಷಧವೇ ಇಲ್ಲ ಇದಕೆ ಸಾವೇ ನಿನಗೆ ಬೇಗ ||ಏ||

ಇಂಜಕ್ಷನ್ ಪಡೆಯುವಾಗ ಜಾಗರೂಕರಾಗಿರಿ
ಹೊಸದಾದ ಸಿರೆಂಜನ್ನು ಬಳಸುವಂತೆ ಕೇಳಿರಿ
ಗಂಡನಿಂದ ಹೆಂಡತಿಗೆ ಬರುವುದು ಅತಿ ಬೇಗ
ಗರ್ಭದೊಳಗೆ ಇರುವ ಮಗೂನು ಬಿಡದು ಈ ರೋಗ ||ಏ||

ಹೆಚ್ಚು ಹೆಚ್ಚು ಜನರೊಡನೆ ಲೈಂಗಿಕತೆಯು ಅಪಾಯ
ಸಹಜವಾದ ದಾಂಪತ್ಯವೇ ಇದಕೆ ಉಪಾಯ
ಎಚ್‌ಐವಿ ರೋಗಾಣು ಹರಡುವ ಈ ಮಾರಕ
ಕಂಡು ಕಂಡು ಗುಂಡಿಗೆ ನೀ ಬೀಳುತೀಯ ಯಾತಕ ||ಏ||

ಅಣ್ಣಾ ತಂಗಿ, ಅಕ್ಕ ತಮ್ಮ ಗಮನವಿಟ್ಟು ಕೇಳಿರಿ
ಈ ಏಡ್ಸನ್ನು ಬಡಿದೋಡಿಸಲು ನೀವೆಲ್ಲ ಗಮನ ಹರಿಸಿರಿ
ಎಚ್ಚರಿಕೆ ನೀವೆಲ್ಲರು ಜಾಗರೂಕರಾಗಿರಿ
ಈ ದೇಶದ ಮನುಕುಲವ ಮುಕ್ತರಾಗಿ ಮಾಡಿರಿ ||ಏ||

❑

## ಮರಣದ ಗಂಟೆ

-ಎಚ್. ದುಂಡಿರಾಜ್

ಬರುತಿವೆ ಎಲ್ಲೆಡೆ ಭೀಕರ ರೋಗ
ಬರುತಿದೆ ಎಲ್ಲೆಡೆ ಭೀಕರ ರೋಗ
ಏಡ್ಸ್ ಏಡ್ಸ್ ಏಡ್ಸ್
ನಮ್ಮ ವೈರಿಗೂ ಬಾರದಿರಲಿ ಅದು
ಓಡ್ಸ್ ಓಡ್ಸ್ ಓಡ್ಸ್ ॥ಪ॥

ಕಣ್ಣಿಗೆ ಕಾಣದ ವೈರಸ್‌ನಿಂದ
ಹರಡುವ ಮಾರಕ ಪಿಡುಗು
ಏಡ್ಸ್ ಎಂದರೆ ರೋಗಿಯ ಪಾಲಿಗೆ
ಮರಣದ ಗಂಟೆಯ ಮೊಳಗು ॥ಪ॥

ನಾಶ ಮಾಡುವುದು ಮಾನವ ದೇಹದ
ಸಹಜ ರಕ್ಷಣೆಯ ಕೋಟೆ
ಹಲವು ರೋಗಗಳ ಕರೆದು ನಡೆಸುವುದು
ದುರ್ಬಲ ದೇಹದ ಬೇಟೆ ॥ಪ॥

ರಕ್ತದ ಮೂಲಕ ಹಬ್ಬುವ ರೋಗ
ವಿಜ್ಞಾನಕ್ಕೆ ಸವಾಲು
ಸದ್ಯಕ್ಕಂತೂ ಮದ್ದೇ ಇಲ್ಲ
ಏಡ್ಸ್ ಅಂದರೆ ಸಾವು ॥ಪ॥

ಪರೀಕ್ಷೆ ಮಾಡದೆ ರಕ್ತವ ಪಡೆದರೆ
ಏಡ್ಸ್ ಹರಡಬಹುದು
ಗಂಡನಿಗಿದ್ದರೆ ಬರುವುದು ಮಡದಿಗೆ
ಗರ್ಭದ ಮಗುವನೂ ಬಿಡದು ॥ಪ॥

ಎಚ್ಚರ! ಎಚ್ಚರ! ಚುಚ್ಚುಮದ್ದನ್ನು
ತೆಗೆದುಕೊಳ್ಳುವಾಗ
ಸ್ವಚ್ಛವಿಲ್ಲದಿರೆ ಸೂಜಿ ರಕ್ತಕ್ಕೆ
ತಗಲಬಹುದು ರೋಗ ॥ಪ॥

ನೀತಿ ಮೀರಿದ ಲೈಂಗಿಕತೆಯು ಸಹಾ
ಏಡ್ಸ್ ವ್ಯಾಧಿಗೆ ಮೂಲ
ಸಹಜ ದಾಂಪತ್ಯವೊಂದೇ ಪಥ್ಯ
ಬೇರೆ ದಾರಿಯೇ ಇಲ್ಲ ॥ಪ॥



## ಗಿಗಿ ಪದ

*- ಆರ್. ಕೆ. ಹುಡಗಿ*

ಕುಂತ ನಿಂತಿ ಮಂದಿಗೆಲ್ಲ
ಕೈ ಮುಗಿದು ಹೇಳುತೀನಿ ಹಾ ಹಾ ಹಾ .. .. ..

ಅಂಥ ಇಂಥ ಮಾತಿದು ಅಲ್ಲವೆ ಅಲ್ಲ
ನಿಂತವರೆಲ್ಲಾ ಕುಂತುಕೊಂಡು
ಸ್ವಂತ ಕಿವಿಲಿ ಕೇಳಿದಮ್ಯಾಲಾ
ಅಂತ ಹತ್ತದ ಮಾತಿಗೆ ಅರ್ಥ ಹೇಳ್ತಿವಿ ಖಿಲ್ಲಾ

ಗಿಯಾ ಗಾ ಗಾಗಿಯಾ ಗಿಯ್ಯೋ
ಗಿಯಾ ಗಾ ಗಾಗಿಯಾ ಅಯ್ಯೋ ॥

ಸಂತ ಸಾಧು ಕಂತಹರನ
ಕಥೆಯಂತೂ ಮೊದ್ಲೆ ಅಲ್ಲವೇ ಅಲ್ಲ
ಬಂತೂ ಮಾನವನ ಸತ್ಯ ಬರುವುದು ಹೋಗುವ ಕಾಲ
ಇಂಥ ಘೋರ ಪಾಪಿ ನಾವು ಸ್ವಂತ ಸಾವು ತಂದೆವಲ್ಲ
ಅಂಥ ಹತ್ತದ ಮಾತಿಗೆ ಅರ್ಥ ಹೇಳ್ತೇವಿ ಖಿಲ್ಲಾ ॥ಗಿಯಾ ಗಾ॥

ಸೃಷ್ಟಿ ಮಾಡೋ ಪುಷ್ಟಿಗೆಲ್ಲಾ, ಸೃಷ್ಟಿ ಕೊಡೋ ರತಿರಾಗ
ಚಾಷ್ಟೆಯಾಗಿ ಬಿಟ್ಟಿತ್ತಲ್ಲಾ ಮಾನವಭೋಗ,
ಇಂಥ ಘೋರ ಪಾಪಿ ಸಾವು ಸ್ವಂತ ಸಾವು ತಂದೆವಲ್ಲ
ಅಂತ ಹತ್ತದ ಮಾತಿಗೆ ಅರ್ಥ ಹೇಳ್ತಿನಿ ಖಿಲ್ಲಾ ॥ಗಿಯಾ ಗಾ॥

ಮಿತಿ ಮಿರಿ ರತೀಭೋಗ ಅತೀಯಾಗ ಬಂತ್ರಪ್ಪ
ಗುಣಗೆಡಸಿ ಬಿಡೋರೋಗ ಮಹಾ ಮಾರಿ
ಕಣ್ಣಿಗೆ ಕಾಣದ ವಿರ್‍ಯಾಣು ಸಣ್ಣಾಗಿ ರಕ್ತಸೇರಿ
ಹಣ್ಣು ಮಾಡಿ ಬಿಡ್ತದಪ್ಪ ಹಿಪ್ಪೆಹೀರಿ ॥ಗಿಯಾ ಗಾ॥

ಒಂದು ಗಂಡು ಒಂದು ಹೆಣ್ಣು
ಮತ್ತೊಬ್ಬರ ಜೊತೆಯಲ್ಲಿ
ಸಂಭೋಗ ಮಾಡುವುದು ಸರಿಯಲ್ಲ
ಮಾಡಿದ್ರ್ಯಾಕಿ ಮಾಡವಲ್ರಿ, ಮತ್ತೊಂದು ಹೇಳುತ್ತೀನಿ
ನಿರೋಧ ಬಳಸುವುದು ಮರಿಬ್ಯಾಡ್ರಿ ॥ಗಿಯಾ ಗಾ॥



## ಲಾವಣಿ

*- ಗ್ಯಾರಂಟಿ ರಾಮಣ್ಣ*

ಭಾರತ ದೇಶದ ಬಂಧುಗಳೇ ನೀವೆಲ್ಲರೂ ಕೇಳಿರಿ ಗಮನದಲಿ
ಹುಟ್ಟಿ ಬೆಳೆದ ನಮ್ಮ ವಿಶಾಲ ನಾಡಲಿ ಹೊಟ್ಟೆ ಬಟ್ಟೆಗಿಲ್ಲ ದೇಶದಲಿ

ಹುಟ್ಸಿದ ದೇವರು ಹುಲ್ಲು ಮೇಯ್ಸಲ್ಲಂತ ಮಾಡ್ತಾರೆ ಮಕ್ಕಳ ಐದಾರ
ತಿರುಗುತಾರ ಅವರು ಊರೂರ
ಆರು ಮಕ್ಕಳಿಗೆ ಸರದಾರ
ಸಾಕಲು ಮಾತ್ರ ಬಲುಭಾರ
ಹೊಟ್ಟೆ ಬಟ್ಟೆಗಿಲ್ಲ ಮಕ್ಕಳಿಗೆ ವಿದ್ಯೆ ಇಲ್ಲ, ಯಾಕಪ್ಪ ಇಂತ ಸಂಸಾರ


ಹೆಣ್ಣು ಹುಟ್ಟಿತಂತ ಗಂಡಗೆ ತಿಳಿದರೆ ಕೆಂಡದಂತ ಕೋಪ ಬಂದೋಯ್ತು
ಮುಖದಲಿ ದೆವ್ವ ಕುಣಿದಿತ್ತು
ಏಳು ವರ್ಷಗಳು ಕಳೆದೋಯ್ತು
ಮತ್ತೈದು ಹೆಣ್ಗಳು ಹುಟ್ಟಾಯ್ತು
ಒಂದರಿಂದ ಒಂದು ಮದುವೆಗೆ ಬಂದು ಅಪ್ಪನ ಹೊಟ್ಟೆ ಹುರ್ರೆಂತು

ಮಕ್ಕಳಿಗಾಗಿ ಮದುವೆಯಾಗಬೇಕು ಎಂದು ಕೆಲವರು ಹೇಳುವರು
ಎಲ್ಲಾ ಕೆಲಸವ ಮರೆಯುವರು
ಹೆಂಡತಿ ಜೀವವ ಹಿಂಡುವರು
ವರ್ಷಕ್ಕೊಂದು ನೀಡುವರು
ಅಂತರವಿಲ್ಲದ ಮಕ್ಕಳ ಸ್ಥಿತಿ ನೋಡಿ ಇಬ್ಬರು ಕಣ್ ಕಣ್ ಬಿಡುತಿಹರು

ಅಪ್ಪ ಮಾಡಿದ ಆಸ್ತಿ ಏಕೆಂತ ಹತ್ತಾರ್ ಮಕ್ಕಳ ಹಡಿತಾರೆ
ಹತ್ತು ಭಾಗವ ಮಾಡ್ತಾರೆ
ಮೊಮ್ಮಕ್ಕಳನು ಕಾಣ್ತಾರೆ
ಅವರಿಗೆ ಆಸ್ತಿ ಹಂಚ್ತಾರೆ
ಬಾಲಕೆ ಬಾಲ ತುದಿಬಾಲಗಳಾಗಿ ದಿವಾಳಿಯಾಗಿ ಹೋಗ್ತಾರೆ

ಮಕ್ಕಳು ಕಡಿಮೆ ಇರುವ ಸಂಸಾರ ನೋಡಿರಿ ಎಷ್ಟು ಚಂದೈತಿ
ಜೀವನವೆಷ್ಟು ಸುಖಿಷ್ಟೈತೆ
ಶಿಕ್ಷಣ ಆರೋಗ್ಯ ಸಿಗತ್ತೈತೆ
ಇಂಗ್ ಮಾಡಕೆ ನಿನಗೇನಾಗ್ತೈತೆ
ಈ ಮೂಲಕ ನೀನು ಸಾಗಿದರೆ ಮುಂದೆ ಸುಖಿ ಜೀವನದ ಬೆಳಕೈತೆ

❑



## ನೆಲೆಯಿಲ್ಲದ ಬದುಕು

*- ಗ್ಯಾರಂಟಿ ರಾಮಣ್ಣ*

ನೆಲೆಯಿಲ್ಲದ ಬದುಕು ನಮ್ಮದು
ನಗರಗಳ ಸ್ಲಂನಲ್ಲಿ ದುರ್ವಾಸನೆ ಜಾಗದಲಿ
ಜೀವಿಸುವ ಗತಿಯು ನಮ್ಮದು
ಕಸದ ರಾಶಿ ಮನೆಯ ಮುಂದೆ, ಕೊಳಚೆ ನೀರು ಮನೆಯ ಮುಂದೆ
ಕೂಲಿ ಕೆಲಸಕಾಗಿ ನಿತ್ಯ ಅಲೆಯಬೇಕು ಎಲ್ಲರಿಂದೆ ||ನೆ||

ಮನೆಗೆ ಭದ್ರತೆಯಿಲ್ಲ ಹೊರಗಿನವರ ಬಲವಿಲ್ಲ
ವಿದ್ಯೆ ಇಲ್ಲದೆ ಮಕ್ಕಳೆಲ್ಲ ಕೂಲಿ ಮಾಡಿ ಸೋತವಲ್ಲ ||ನೆ||

ಮಹಿಳೆಯರ ಪಾಡಂತು ಹೇಳತೀರದಾಯಿತಲ್ಲ
ಕಡಿಮೆ ಕೂಲಿಗೆ ಕೈಚಾಚಿ ಮನೆಗೆಲಸಕೆ ಹೋಗ್ತಾರಲ್ಲ ||ನೆ||

ಹಾದಿಬೀದಿಯಲ್ಲಿ ಮಕ್ಳು ಚಿಂದಿಯನ್ನು ಆಯುವರು
ದುರಾಭ್ಯಾಸಕ್ಕೊಳಗಾಗಿ ಕಳ್ಳತನವ ಕಲಿಯುವರು ||ನೆ||

ನಿಂತಲ್ಲೇ ಬಂದು ನಮ್ಮ ನಿಂತು ಒಕ್ಕಲೆಬ್ಬಿಸುವರು
ಬುಲ್ಡೋಜರ್ ತಂದು ಎಲ್ಲ ಧ್ವಂಸ ಮಾಡಿ ಹೋಗುವರು ||ನೆ||

ನಮ್ಮ ಕಷ್ಟ ಕೇಳೋರಿಲ್ಲ ಸರ್ಕಾರಕೆ ಬೇಕಿಲ್ಲ
ಎಲ್ಲರಂತೆ ಬದುಕಲಿಕ್ಕೆ ನಮಗೆ ಯಾಕೆ ಹಕ್ಕಿಲ್ಲ ||ನೆ||

ಬನ್ನಿ ಬನ್ನಿ ಎಲ್ಲಾ ಬನ್ನಿ ಧೈರ್ಯದಿಂದ ನುಗ್ಗೋಣ
ಈ ನ್ಯಾಯವ ಮೆಟ್ಟಿ ನಿಂತು ನಮ್ಮ ಹಕ್ಕು ಪಡೆಯೋಣ ||ನೆ||

ಅಲೆಮಾರಿ ಜನರು ನಾವು ಅಲೆದು ಅಲೆದು ಸಾಕಾಗಿ
ನೆಲೆಗಾಗಿ ಬಂದು ಕೂತ್ರೆ ಬೆಲೆಯೇ ಇಲ್ಲದಾಯ್ತಲ್ಲ ||ನೆ||

❑

# ರೋಗ ಬಂದಾತೂ ಜೋಪಾನ

*- ಗ್ಯಾರಂಟಿ ರಾಮಣ್ಣ*

ರೋಗಾ ಬಂದಾತು ಜೋಪಾನ
ಓ ರಂಗಣ್ಣಾ.... ಓ ತಿಮ್ಮಣ್ಣಾ... ಓ ನಿಂಗಣ್ಣಾ
ರೋಗ ಬಂದಾತು ಜೋಪಾನ ॥ಪ॥

ಮನೆಯ ಒಳಗೆ ಕಿಟಕಿ ಇಲ್ಲ, ಗಾಳಿ ಬೆಳಕು ಬೀಳಂಗಿಲ್ಲ
ವಾಸದ ಮನೆಯ ಕೊಟ್ಟಿಗೆ ಮಾಡಿ ಸೊಳ್ಳೆ ತಿಗಣೆ ಎಲ್ಲಾ ಸೇರಿ
ತಿನ್ನುವ ಅನ್ನಕೆ ಸೇರಿಕೊಂಡು
ನಿನಗೇ ಕಾಯಿಲೆ ತರ್ತಾವಲ್ಲೋ ॥ಪ॥

ಹೊಲದ ಕೆಲಸ ಮಾಡುತ್ತೀಯಾ
ಕೈಯ್ಯಾ ಕೆಸರು ಮಾಡ್ಕೋತೀಯಾ
ಹೊತ್ತು ಮೀರಿ ಮನೆಗೆ ಬಂದು
ಕೈಯಾ ತೊಳೆಯದೆ ಉಣ್ಣುತ್ತೀಯಾ
ಮೈಕೈ ಗಾಯ ಆದ್ರೆ ನೀನು ಅಮ್ಮ ಅಂತ ಪೂಜಿಸ್ತೀಯಾ ॥ಪ॥


ಬಾಣ್ತಿ ಹೆಂಗಸ್ರು ಬಿಂಕ ಮಾಡಿ
ಹಸು ಮಕ್ಕಳನ್ನು ಮರೆಯುತಾರೆ
ಎದೆಯ ಹಾಲು ಕುಡಿಸೋದು ಬಿಟ್ಟು
ಬಾಯಿಗೆ ಬಾಟ್ಲಿ ತುರುಕುತ್ತಾರೆ
ಅಮೂಲು, ಫೆರೆಕ್ಸು, ಬೂಸ್ಟ್ ಅಂತ
ವೇಸ್ಟ್ ಮಾಡಿ ಕಳೆಯುತ್ತಾರೆ ॥ಪ॥

ಕಾಲರಾ ರೋಗ ಬಂದ್ರೆ ನೀನು
ಕಂಡ ಕಂಡ ದೇವರಿಗೆ ಹರಕೆ ಹೊತ್ತೆ
ಡಾಕ್ಟರಿಗೆ ತೋರ್ಸಿ ಕೇಳೋದ ಬಿಟ್ಟು
ಮೂಢನಂಬಿಕೆಯಿಂದ ಸಾಯುತ್ತೀಯಾ

ಕಾಯಿಸಿ ಆರಿಸಿದ ನೀರು ಕುಡ್ದು
ಕಾಯ್ಲೆ ಕಳೆಯೋದ್ ಮರೆಯುತ್ತೀಯ ॥ಪ॥

ಊರ ಸುತ್ತಾ ಸ್ವಚ್ಛ ಬೇಕು
ಮನೆ ಮುಂದೆ ಗಿಡವ ನೆಡಲೇಬೇಕು
ಶುದ್ಧ ನೀರ ಕುಡಿಯಬೇಕು
ವಿದ್ಯೆ ಬುದ್ಧಿ ಕಲಿಯಬೇಕು
ನಿಮ್ಮ ಆರೋಗ್ಯ ನೀವೇ ನೋಡ್‌ಕೊಂಡ್
ಆನಂದದಿಂದ ಬಾಳಬೇಕು

❑



## ಹಾಕ್ಸಮ್ಮ ಲಸಿಕೆಯಾ

*- ಗ್ಯಾರಂಟಿ ರಾಮಣ್ಣ*

ಹಾಕ್ಸಮ್ಮ ಲಸಿಕೆಯಾ ಮುದ್ದಾದ ಮಗುವಿಗೆ
ಅಂದಾದ ಚೆಂದಾದ ಮುದ್ದಾದ ಮಗುವಿಗೆ
ಹಾಕ್ಸಮ್ಮ ಲಸಿಕೆಯಾ ॥

ಹುಟ್ಟಿದ ವಾರ್ದೊಳಗೆ
ಬಿಸಿಜಿ ಹಾಕ್ಸದಿದ್ರೆ
ಬಾಲಕ್ಷಯ ಬರ್‍ತೈತೆ ಕಂದಮ್ಮ ನರಳ್ತೈತೆ
ಹಾಕ್ಸಮ್ಮ ಲಸಿಕೆಯ ॥

ಮೂರ್ತಿಂಗ್ಳು ತುಂಬೊದ್ರೊಳ್ಗೆ
ಹಾಕ್ಸಮ್ಮ ಡಿಪಿಟಿ
ಗಂಟಲ್ಮಾರಿ ನಾಯ್ಕೆಮ್ಮು ರೋಗಾವಾ ತಡೆಯಾಲು
ಹಾಕ್ಸಮ್ಮ ಲಸಿಕೆಯಾ ॥

ಆರು ತಿಂಗ್ಳು ತುಂಬಿದಂತಾ
ಊರ್‌ತುಂಬಾ ತೋರುಸ್ತೀಯಾ
ನಿನ್ಕಂದ ಹೆಳವ ಆಗಾದೆ ಇರಲು
ಹಾಕ್ಸಮ್ಮ ಪೋಲಿಯೋ ॥

ನವಮಾಸ ತುಂಬಿದಾಗ
ಹರುಷದಿ ನಗುತೀಯಾ
ದಡಾರ ರೋಗವು ಬರದಂತೆ ಇರಲು
ಹಾಕ್ಸಮ್ಮ ಮೀಸಲ್ಸ್ ॥

## ಎಚ್ಚರ

(ಸುರಕ್ಷಿತ ಗರ್ಭಪಾತ)

ಎಚ್ಚರ! ಎಚ್ಚರ! ಎಚ್ಚರ! !
ಬೇಡವಾದ ಗರ್ಭ ತೆಗೆಸುವಾಗ ಬೇಕು ಎಚ್ಚರ ! !
ಹೆಣ್ಣು ಜೀವಕೆ ಕುತ್ತು ಇದೆ ಎಚ್ಚರ ! ! !

ಸೋತ ದೇಹಕೆ ಆದ ಬಸಿರು ಕಷ್ಟ!
ಮೈ ಮರೆತು ಆದ ಬಸಿರು ಬಾಳಿಗೇ ನಷ್ಟ
ಒಂದರಿಂದ ಒಂದು ಬಸಿರು
ತರುವುದು ಹೆರಿಗೆಯ ಕಷ್ಟ!
ಮಗುವಿನ ಬೆಳವಣಿಗೆಗೂ ನಷ್ಟ
ಆಗುವುದು ಕುಟುಂಬಕ್ಕೆ ನಷ್ಟ ! ಎಚ್ಚರ!

ಹೋಗಬೇಡಿ ಎಂದೂ - ನಕಲಿ ವೈದ್ಯರ ಹತ್ತಿರ
ಕೇಳಿಕೊಮ್ಮೆ ತಾಯಿ ಕಡೆಯ ಎತ್ತರ !
ಮಾಡಬೇಡಿ ಹೆಣ್ಣು ಭ್ರೂಣ ಹತ್ಯೆಯ
ತಿಳಿಯಿರೇಲ್ಲ ಇದು ಪಾಪ ಕೃತ್ಯವು
ಇದಕಿರುವುದು ಕಠಿಣ ಶಿಕ್ಷೆಯು
ಇದುವೇ ನಿಮಗೇ ಕಟ್ಟೇಚ್ಚರ ! ಎಚ್ಚರ!
ತಿಳಿಯಿರಿ

ಅಕ್ರಮ ಗರ್ಭಪಾತ ಹಲವು ಸೋಂಕಿಗೆ ದಾರಿ! !
ತಾಯ ಬಂಜೆತನಗೂ ಇದುವೇ ಹಾದಿ!
ಆಗಬಹುದು ತಾಯಿ ಜೀವಕೂ ಅಪಾಯ
ನುರಿತ ವೈದ್ಯರಿಂದ ಗರ್ಭಪಾತ! ಇದಕಿರುವ ಉಪಾಯ
ವಹಿಸಿ ನೀವು ಬಹು ಎಚ್ಚರ ! ಎಚ್ಚರ!

ಸುರಕ್ಷಿತ ಗರ್ಭಪಾತಕಿರುವ ಸಮಯ
ಬಸಿರಾದ ಹತ್ತು ವಾರ
ಬೇಡವೇ ಬೇಡ ಗರ್ಭಪಾತ
ಹತ್ತು ವಾರದ ನಂತರ! ನಂತರ! ನಂತರ! ಎಚ್ಚರ!
ನಿಮಗಿದು ತಿಳಿಯದೇನು?
ಗರ್ಭಪಾತ ನೀಗಿಸಲು ನಿಮಗಿದೆ ಸ್ವಾತಂತ್ರ್ಯ
ಕಾನೂನು ಪ್ರಕಾರ!

ತಾಯಿ ಜೀವಕೆ ಅಪಾಯ ಇದ್ದಾಗ ..
ಅತ್ಯಾಚಾರದಿಂದ ಗರ್ಭಿಣಿ ಆದಾಗ ..
ಹುಟ್ಟುವ ಮಗುವಿಗೆ ಹುದುಗಿಟ್ಟ ಅಂಗವಿಕಲತೆ ..
ತಾಯಿಯ ಮಾನಸಿಕ ಸ್ಥಿತಿ ಸರಿ ಇರದಿದ್ದಾಗ ..
ಕುಟುಂಬ ಯೋಜನೆ ವಿಫಲತೆ ಕಂಡಾಗ ..

ಸಮಯದಲ್ಲಿ ಬೇಕು ಎಚ್ಚರ! ವಹಿಸಬೇಕು ಎಚ್ಚರ!
ಎಚ್ಚರ! ಎಚ್ಚರ! ಎಚ್ಚರ! ಎಚ್ಚರ! !

❑



## ಮುಟ್ಟು ಮೈಲಿಗೆ ಅಲ್ಲ

- *ಕಂಪಾಲಿ ತಿಪ್ಪೇಸ್ವಾಮಿ*

ಹೆಣ್ಣು ಜೀವವೊಂದು ಹುಟ್ಟಿದ ಮ್ಯಾಲ
ಮುಟ್ಟಾಗಲೇಬೇಕಾ
ಸ್ವಚ್ಛತೆ ಇಲ್ಲದೆ ಇದ್ದರೆ ಆಗಲೆ
ಹತ್ತುವುದು ಸೋಂಕ

ಮುಟ್ಟಿನ ಕಾಲದ ಬಟ್ಟೆಗಳ, ಸ್ವಚ್ಛ ಇಡಬೇಕ
ಬಿಸಿಲಲಿ ಒಣಗಿಸಿ ಇಡಬೇಕ
ಒಂದೇ ದಿನದಲಿ ಬಾರಿ ಬಾರಿಗೂ
ಬದಲು ಮಾಡಬೇಡಾ
ಇದು ಆರೋಗ್ಯದ ಮಾತ

ಮುಟ್ಟಾದವರ ಹಟ್ಟಿಯ ಹೊರಗೆ
ಇಡುವುದು ಯಾತಕ್ಕ?
ಮುಟ್ಟಾದವರ ಹಟ್ಟಿಯ ಹೊರಗೆ
ಇಡುವುದು ಬಲು ತಪ್ಪ
ಪ್ರೀತಿ ಮಾತು ಬೇಕ, ಅವರಲಿ
ಪ್ರೀತಿ ತೋರಬೇಕ

ಮುಟ್ಟು ಎಂಬುದು ಮೈಲಿಗೆಯಲ್ಲ
ಸೃಷ್ಟಿ ಸಹಜ ನೋಡ
ಮುಟ್ಟಾಗಿದ್ದರು ಮಾನವಳವಳು
ಸಹಜವಾಗಿ ನೋಡ



❑

## ಪ್ರಸವ ಕಾಲದ ಆರೈಕೆ

*- ಸಾಂಬಶಿವ ದಳವಾಯಿ*

ಕಂದ ನೀ ಬರುವಾಗ
ಚಂದದ ಕೊಠಡಿಗೆ, ಶುಭ್ರತೆಯ ಹಾಸಿಗೆ,
ಸ್ವಚ್ಛತೆ ಕೈಯಿಂದ ಹೆರಿಗೆಯ ಮಾಡಿಸುವೆ,
ಪಂಚಸೂತ್ರದ ನಿಗವಹಿಸಿ ಪಾಲಿಸುವೆ,
ಅದರ ಚಿಂತೆ ನಿನಗೇಕೆ ಬೇಕೆಂದೆ.

ಮಗು ಹೆರುವುದು ಖಂಡಿತವೆಂದು
ಅಮ್ಮನ ಕರೆಸಿ ಆರೈಕೆ ಮಾಡಿಸುವೆ,
ಬಯಕೆಯ ತಿಂಡಿ ನಾನಾಗಲೇ ತಂದಿರುವೆ
ಕೊಡು ಎಂದರೆ ಕೊಟ್ಟೇ ಬಿಡುವೆ ।।ಚಂದದ।।

ಇಲ್ಲಸಲ್ಲದ ಮಾತೇಕೆ ಈಗ
ಹೆದರುವ ಮನಸ್ಸು ನಿನಗೇಕೆ ಬೇಕು,
ಈಗಾಗಲೇ ತಂದಿರುವೆ ಸುರಕ್ಷಿತ ಚೀಲವ
ತರಬೇತಿ ಹೊಂದಿದ ಆಯಾನ ಕರೆಸಿರುವೆ
ಬೇಕು ಎಂದರೆ ಅಮ್ಮಾನ ಜೊತೆ ಕಳುಸುವೆ ।।ಚಂದದ।।

ಎಲ್ಲದಕೂ ನಾನು ಇಲ್ಲಿರುವಾಗ,
ಪಟ್ಟಣದ ವಾಹನ ತರಿಸಿಬಿಡುವೆ
ಎಚ್ಚರದಿಂದ ಹೊಕ್ಕಳ ಬಳ್ಳಿ ಕೊಯ್ಯಲು
ಕಾವಲಿನಂತೆ ಬಾಗಿಲಲ್ಲೆ ಕಾದಿರುವೆ,
ಕಂದನ ಮೊದಲ ಅಳು ಕೇಳಲೆಂದೆ,
ಅತ್ತ ನಂತರ ಸಂತೈಸಬೇಕು,
ಹಾಲುಣಿಸಿ ತಣಿಸಬೇಕು ।।ಚಂದದ।।

ನಂಬಿಕೆ, ಮೂಢನಂಬಿಕೆ, ನಿನಗೇಕೆ ಈಗ
ಪಟ್ಟಣದಿಂದ ವಾಹನ ತರಿಸಿಬಿಡುವೆ,
ಚಂದದ ಕೊಠಡಿಗೆ ಶುಭ್ರತೆಯ ಹಾಸಿಗೆ.

❑



## ಎಳೆಮನಕೆ - ಭಾರ ಬೇಕೆ

- *ಹೆಗ್ಗೆರೆ ರಂಗಪ್ಪ*

ಓಡಿ ಆಡೋ ಹೆಣ್ಣು ಮನ ಮುಖ
ಬಾಡಿ ಮುದುಡಿ ಸೊರಗಿಹುದು
ಕಲಿತು ಕಲಿಸೋ ಸಮಯದಿ
ಹಲಭಾರಗಳ ಹೊತ್ತಿಹುದು ॥ಪ॥

ಈ ಎಳೆ ವಯಸ್ಸಿನ ಮೇಲೆ
ಹೆಣಭಾರದ ಸರಮಾಲೆ
ಇದ ನೆನೆದು ನೆನೆದು ಕೊರಗಿ ಕೊರಗಿ
ಮನಸು ಕತ್ತಲ ಮೂಲೆ ॥ಪ॥

ವರನನು ನೋಡದೆ, ತಾಳಿ ಧರಿಸಬೇಕಂತೆ
ಗಂಡು ಮಾತ್ರ ಹೆಣ್ಣುಗಳ, ಬೇಟೆಯಾಡಬೇಕಂತೆ
ಹೆಣ್ಣಾದ್ರೆ ವಧುಪರೀಕ್ಷೆ, ಗಂಡಿಗೇಕೆ ದಕ್ಷಿಣೆ ರಕ್ಷೆ
ಹೆಣ್ಣು ಗಂಡುಗಳ ಆಯ್ಕೆಯಲಿ (ಸಮ ಮನಸಿಗ) ಬೇಡ ಶಿಕ್ಷೆ ॥ಈ ಎಳೆ॥

ಹಿರಿಯ ಆಸೆಗಳಿಗೆ ಮುಗುದೆಯ ಬಲಿ ಏಕೆ
ತಾಯಿಯಾಗೂ ಬಲಬರಲಿ ಅವಸರದ ಹೆರಿಗೆ ಏಕೆ
ಅಂತರವು ಹೆಣ್ಣಿಗೆ ಒಳಿತು. ಮಗುವು ಸಾಕಷ್ಟು ಬಲಿತು
ಸುಖದೊಲವಿನ ಜೀವನಕ್ಕೆ ಒಮ್ಮನಸು ಬಲು ಸೊಗಸು ॥ಈ ಎಳೆ॥

ಹೊರ ಜಗದ ಸುದ್ದಿಗಳು ಪುರಷರಿಗಷ್ಟೆ ಬೇಕೇನು
ಮಹಿಳೆ ತಾ ಕೋಣೆಗಳ ಬಂಧಿಯಾಗಬೇಕೇನು
ಅಕ್ಷರ ಆರೋಗ್ಯಗೊಡವೆ, ಲಸಿಕೆ ಗುಳಿಗೆ ಚುಚ್ಚುಮದ್ದು
ಬಳಕೆ ವಿಷಯ ತಿಳಿದ ಹೆಣ್ಣು ಮನೆತನವ ನಡಸಳೇನು ॥ಈ ಎಳೆ॥

❑

## ವಿಷ ಶತಮಾನ

- ಕೆ. ತಿಪ್ಪೇರುದ್ರ ಬಿನ್ ಕೆ. ಪ್ರಭಣ್ಣ


ಹೊರಟಿಹೆವು ಪಯಣಕೆ
ವಿಷಲೋಕದತ್ತ ವಿಷಶತಮಾನದತ್ತ

ಗಿಡ ಮರ ಕಡಿದು, ಶುದ್ಧ ಹವೆಯನ್ನು
ಹಾಳು ಮಾಡಿ, ಕಾರ್ಖಾನೆ ಗಾಡಿ-ಗಿಡಗಳ
ಇಂಗಾಲವನ್ನು ಸೇವಿಸುತ್ತಾ, ಹೊರಟಿಹೆವು
ಚಟ್ಟದತ್ತಿರದತ್ತ, ವಿಷ ಶತಮಾನದತ್ತ

ಗಂಗೆ, ಯಮುನೆ, ಸಿಂಧು ಕಾವೇರಿಯರ
ತಿಳಿಯಾದ ಹಾಲನ್ನು ಕುಡಿದು
ಆ ತಿಳಿಯಾದ ಹಾಲನ್ನು ಕಲಕಿ
ಕೊಳಕು ನೀರನ್ನೆ ಕುಡಿಯುತ್ತಾ ಹೊರಟಿಹೆವು
ಮರಣಶಯ್ಯದತ್ತ, ವಿಷಶತಮಾನದತ್ತ ॥ಪ॥

ಮಳೆ ಬಂದು ಅತಿವೃಷ್ಟಿ, ಮಳೆ ಬರದೇ ಅನಾವೃಷ್ಟಿ
ಓ ಮನುಜ,ಇದಕೆ ಕಾರಣ ಹಸಿರು ತಾಯಿಯಲ್ಲ,
ಅವಳಿದ್ದರೆ ವಾಯು, ಅವಳಿದ್ದರೆ ವರುಣ
ಇಲ್ಲದಿದ್ದರೆ, ವಸ್ತುಗಳ ಬೆಳೆ ಗಗನಕೆ, ನೀ ಪಾತಾಳಕೆ ॥ಪ॥

ಮನೆಗೊಂದು ಮರದಂತೆ ಬೆಳೆಸಿರಿ ನೀವು
ಕೊಡುವಳು ಭೂ-ತಾಯಿ ನಿಮಗೆ ಅನ್ನ
ಇಲ್ಲದಿದ್ದರೆ ಈ ಜಗಕ್ಕೆಲ್ಲ ತುಂಬುವುದು
ಇಂಗಾಲ ಕನ್ನೀರು ಕಲಬೆರಕೆ



ಹೊರಟಿಹೆವು ಪಯಣಕೆ
ವಿಷಲೋಕದತ್ತ - ವಿಷ ಶತಮಾನದತ್ತ
ಮನುಕುಲದ ಸರ್ವನಾಶದತ್ತ

❑

## ಮಾರ್ಗದರ್ಶಿ

- ಆಂಜನಪ್ಪ

ಮಾರ್ಗದರ್ಶಿಯಾಗಿ ಬಾರಮ್ಮ । ನಮ್ಮಮ್ಮಾ।
ನೀನೂ ಜನಾರೋಗ್ಯದ ಗುರಿಯನು ತಿಳಿಸಮ್ಮ ॥ಪ॥


ನಮ್ಮ ಹಳ್ಳಿಯ ಮುಗ್ದ ಜನರಿಗೆ
ಖಾಸಗೀಕರಣದ ವಿಷಯವ ತಿಳಿಸಲು
ನಮ್ಮ ಹಳ್ಳಿಯ ಮುಗ್ದ ಜನರಿಗೆ
ಜಾಗತೀಕರಣದ ನೀತಿಯ ತಿಳಿಸಲೂ । ನಮ್ಮಮ್ಮಾ । ॥ಪ॥

ಮೂಢನಂಬಿಕೆಯ ಬಲೆಯಲಿ ಇರುವೆ
ನಮ್ಮ ಹಳ್ಳಿಯ ಮುಗ್ದ ಜನರಿಗೆ
ವಿಜ್ಞಾನದ ನೀ ಅರಿವನು ತಿಳಿಸಿ ಜ್ಞಾನದ ಬೆಳಕಿನ ದಾರಿಯ ತೋರಿಸು ॥ಪ॥

ರಾಜಕಾರಣಿಗಳ ದಬ್ಬಾಳಿಕೆಗೆ
ಒಳಗಾಗುತಿಹರು ನಮ್ಮೀ ಜನರು
ಮೋಸ ವಂಚನೆಯಿಂದ ಬರಲು ಅವರಿಗೆ ನೀನು ಜ್ಞಾನವ ತೋರಿಸು ॥ಪ॥

ಹೆಚ್ಚಿನ ಜೀವವ ನುಂಗುತಲಿರುವ
ದುಷ್ಟ ಜನರ ನೀ ಮೆಟ್ಟಿ ನಿಲ್ಲಲು
ಪಣತೊಟ್ಟು ಬಾರೆ ॥ಪ॥ ಪಣ ತೊಟ್ಟು ಬಾರಮ್ಮ ॥ಪ॥

ಅಲ್ಮಾ ಆಟನ ಘೋಷಣೆಯಂತೆ
ಎಲ್ಲರಿಗೂ ಆರೋಗ್ಯ ಬೇಕೆಂದು
ಹೋರಾಟ ಮಾಡುವ ಜನರನು ಎಬ್ಬಿಸು ! ನಮ್ಮಮ್ಮಾ !



❑

## ಸೃಷ್ಟಿ

- ಶಾಂಬಶಿವ ದಳವಾಯಿ

ಸೃಷ್ಟಿಯ ಚಲನ ಜೀವನ ಮರಣ
ಜೀವ ಜೀವದ ಈ ಮಣ್ಣಾ
ಮೂರು ದಿನದ ಸಂತೆಯ ಮುಗಿಸಿ
ಸೇರುವರೆಲ್ಲಾ ಈ ಮಣ್ಣಾ ॥ ಸೃಷ್ಟಿಯ ॥

ಕಾಡಲಿ ಹುಟ್ಟಿದ ಕೋಗಿಲೆಯ
ಧ್ವನಿಯೇ ಮಿಗಿಲೆಂದಾಡುವರು
ಕೆಸರಲಿ ಹುಟ್ಟಿದ ತಾವರೆಯ
ದೇವರ ಮುಡಿಯಲ್ಲಿ ಮುಡಿಸುವರು
ಎಲ್ಲಿದೆಯಣ್ಣಾ ಮಡಿಮೈಲಿಗೆಯು
ಸೃಷ್ಟಿಯ ಮೂಲ ಈ ಮಣ್ಣಾ ॥ ಸೃಷ್ಟಿಯ ॥

ಜಾತಿಧರ್ಮ ಮಡಿ ಮೈಲಿಗೆಯ
ಭೇದಭಾವ ಈ ಮಣ್ಣಿಗಿಲ್ಲ
ಬಡವ ಬಲ್ಲಿದ ದಲಿತನೆಂಬ
ಸ್ಪರ್ಷ ಅಸ್ಪೃಶ್ಯತೆ ಈ ಮಣ್ಣಿಗಿಲ್ಲ
ಯಾರು ಬಿತ್ತಿದರು ಫಲವನು ಕೊಡುವ
ಪಾವನವಾದ ಈ ಮಣ್ಣಾ ॥ ಸೃಷ್ಟಿಯ ॥

❑

## ಮತ್ತೆ ಬಂತು ನೋಡಿರೋ

*ಗ್ಯಾರಂಟಿ ರಾಮಣ್ಣ*

ಮತ್ತೆ ಬಂತು ನೋಡಿರೋ ಮಾಯದಂತ ಮಲೇರಿಯಾ
ಸುತ್ತಮುತ್ತ ನೋಡಿರೋ ಸಾವು ತರುವ ಮಲೇರಿಯಾ

ಹಿಂದೆ ಒಂದು ಕಾಲದಲ್ಲಿ ಈ ಹೆಸರು ಕೇಳಿದ್ವೋ
ಡಿ.ಡಿ.ಟಿ. ಸಿಂಪಡಿಸಿ ಈ ರೋಗ ಕಳೆದಿದ್ವೋ
ಈಗ ಮತ್ತೆ ಬಂದು ಮನೆ ಮನೆಗೆ ಸುಗ್ತೈತೆ ಕಾಣಿರೋ ॥ಮ॥

ಮೂರು ಹಂತದಲ್ಲಿ ಈ ಮಲೇರಿಯಾ ಬರುತ್ತೈತೆ
ಚಳಿಯ ಹಂತ, ಬಿಸಿಲು ಹಂತ, ಬೆವರುವಿಕೆಯು ಇನ್ನೊಂದಂತ
ಈ ಮೂರು ಹಂತ ಮರೆತು ಬಿಟ್ರೆ ಮನುಷ್ಯ ಮ್ಯಾಲೋದ ಅಂತ ॥ಮ॥

ಗರ್ಭಿಣಿಯರು, ಮಕ್ಕಳು ಕಂಡ್ರೆ ಈ ರೋಗಕೆ ಬಲು ಪ್ರೀತಿ
ಭ್ರೂಣ ಹತ್ಯೆಗೆ ಈ ರೋಗ ಬಲು ಹೊಂಚು ಹಾಕುತ್ತೈತೆ
ಇದ ತಿಳಿಯದಿದ್ರೆ ನಮ್ಮ ಜೀವ ಮೇಲೆ ಹಾರಿ ಹೋಗುತ್ತೈತೆ

ಮಾತು : ಈ ಮಲೇರಿಯ ಬಂದು ಇಷ್ಟೆಲ್ಲ ತೊಂದರೆ ಕೊಡುತ್ತೈತಲ್ಲ. ಅದು ಬಂದಿದ್ದು ಎಂಗೆ ಗೊತ್ತಾಗಬೇಕು ವಸಿ ಹೇಳಣ್ಣ ?

ಹಾಡುಗಾರ : ಹೌದಲ್ವಾ...ಹೇಳ್ತಿನೀ ಕೇಳು?
ವಿಪರೀತ ಜ್ವರದಿಂದ ಪ್ರಾರಂಭವಾಗುತ್ತೈತೆ
ಮೈಯೆಲ್ಲ ಬೆವರಾಗಿ ಬಟ್ಟೆ ಒದ್ದೆಯಾಗುತ್ತೈತೆ
ಕಾಮಾಲೆ ರೋಗ, ಮತ್ತು ಕಣ್ಣು ಹಳದಿಯಾಗುತ್ತೈತೆ
ಮೂತ್ರದಲ್ಲಿ ರಕ್ತಸ್ರಾವ ಆಗಾಗ ಕಾಣುತ್ತೈತೆ
ಇದ ತಿಳಿದು ಚಿಕಿತ್ಸೆ ಪಡೆದರೆ ನಿನ್ನ ಬಾಳು ಬೆಳಕಾಗುತ್ತೈತೆ ॥ಮ॥



## ಬನ್ನಿರಿ ಗೆಳೆಯರೆ, ಬನ್ನಿರಿ ಗೆಳತಿಯರೇ

*- ಗ್ಯಾರಂಟಿ ರಾಮಣ್ಣ*

ಬನ್ನಿರಿ ಗೆಳೆಯರೆ, ಬನ್ನಿರಿ ಗೆಳತಿಯರೇ
ಆರೋಗ್ಯ ಚಳವಳಿಯಲಿ ಮುಂದಾಗೋಣ
ಈ ಮಲೇರಿಯಾದಿಂದ ನಾವು ಮುಕ್ತರಾಗೋಣ ॥ಬ॥

ಅನಾಫಿಲೀಸ್ ಹೆಣ್ಣು ಸೊಳ್ಳೆಯಿಂದ ಇದು ಹರಡುವುದ
ಮೂರು ತಿಂಗಳಿಗೊಮ್ಮೆ ಇದು ಮತ್ತೆ ಮತ್ತೆ ಬರುವುದು
ನಡುಕದಿಂದ ಬೆವರು ಬಂದು ಸುಸ್ತು ಜ್ವರ ಹರಿವುದು
ಡಾಕ್ಟರಿಗೆ ತೋರಿಸದಿದ್ರೆ ನಿನಗೆ ಸಾವು ತರುವುದು ॥ಬ॥

ಕಾಡು ನಾಶವಾದ ಮೇಲೆ ಸೊಳ್ಳೆ ಹೊರಗೆ ಬಂದವು
ಊರಲಿರುವ ಜನಗಳಿಗೆ ಹಾಸೆಯ ಕೊಡತಿಹವು
ಹೆಣ್ಣು ಸೊಳ್ಳೆ ಕಚ್ಚಿದಾಗ ಮಾತ್ರ ಈ ರೋಗ ಬರುವುದು
ಗರ್ಭಿಣಿಯರು, ಮುದುಕರು, ಮಕ್ಕಳು ಮೊದಲು ಬಲಿಯಾಗುವರು ॥ಬ॥

ಅಣ್ಣ ತಮ್ಮ ಅಕ್ಕ ತಂಗಿ ಎಲ್ಲ ನೀವು ಕೇಳಿರಿ
ಊರಲಿರುವ ಟ್ಯಾಂಕುಗಳ ವಾರಕ್ಕೊಮ್ಮೆ ತೊಳೆಯಿರಿ
ಮನೆಯ ಮುಂದಿನ ಕೊಳಚೆ ನೀರು ಊರ ಹೊರಗೆ ಕಳಿಸಿರಿ
ಸಾಂಕ್ರಾಮಿಕ ರೋಗದಿಂದ ಮುಕ್ತರಾಗಿರಿ ॥ಬ॥

❑



## ಆರೋಗ್ಯ ಬೇಕಣ್ಣ

*- ಗ್ಯಾರಂಟಿ ರಾಮಣ್ಣ*

ಆರೋಗ್ಯ ಬೇಕಣ್ಣ, ನಮಗೆ ಆರೋಗ್ಯ ಬೇಕಣ್ಣ
ಆರೋಗ್ಯ ಭಾಗ್ಯ ಎಂಬುವ ವಿಷಯವ ಮೊದಲು ತಿಳಿಯಣ್ಣ
ತಿಳಿದು ಅದರಂತೆ ನಡೆಯಣ್ಣ

ಮನೆಯ ಮುಂದೆ ಕೈಕಾಲು ತೊಳೆದು ನೀ ಕೊಚ್ಚೆ ಮಾಡಬೇಡ
ಆ ಕೊಚ್ಚೆಯಿಂದ ಸೊಳ್ಳೆಗಳು ಹೆಚ್ಚಿ ಪರದಾಡಿ ಸಾಯಬೇಡ
ನೀರು ನಿಲ್ಲದಂತೆ ಕಾಲುವೆ ಮಾಡಿ ದೂರ ಹರಿಸಬೇಕು
ಸುತ್ತಮುತ್ತಲು ಸ್ವಚ್ಛತೆಯ ಕಾಪಾಡಿಕೊಳ್ಳಬೇಕು ॥ಆ॥

ಚಳಿ, ಜರ್‍ವ ಬಂದರೆ ನೀನು ಡಾಕ್ಟರನು ನೋಡು
ತಕ್ಷಣ ಹೋಗಿ ರಕ್ತ ಪರೀಕ್ಷಿಸಿ ಸಲಹೆಯ ನೀ ಕೇಳು
ಕೊಟ್ಟ ಮಾತ್ರೆಗಳ ತುಂಬಿದ ಹೊಟ್ಟೆಗೆ ನೀನು ನುಂಗಬೇಕು
ಔಷಧಿ, ಉಪಚಾರ ಸರಿಯಾದ ವೇಳೆಗೆ ತೆಗೆದುಕೊಳ್ಳಬೇಕು ॥ಆ॥

ಕಾಯಿಲೆಯಿಂದ ನರಳುತಿರುವವಗೆ ಮಂತ್ರ ಹಾಕಬೇಡ
ಆ ಮಂತ್ರವೆಂಬ ಕುತಂತ್ರದಿಂದ ಪ್ರಾಣ ತೆಗೆಯಬೇಡ
ಮೂಢ ನಂಬಿಕೆಗೆ ಜೋತು ಬಿದ್ದು ಹಾಳಾಗಿ ಹೋಗಬೇಡ
ಡಾಕ್ಟರಿಗೆ ತೋರ್ಸಿ ಔಷಧಿಯ ಕೊಡಿಸಿ ಬದುಕುವುದ ಮರೆಯಬೇಡ ॥ಆ॥

ಮಲೇರಿಯ ಬಂದಾಗ ಗ್ಲೂಕೋಸ್, ಟಾನಿಕ್, ನೀನು ಮುಟ್ಟಬೇಡ
ಬೇರೆ ಮಾತ್ರೆಗಳನ್ನು ನೀನು ಮರೆತು ನುಂಗಬೇಡ
ಪಥ್ಯವಿಲ್ಲದೆ ಮಾಮೂಲಾಗಿ ಎಲ್ಲ ಊಟ ಮಾಡು
ಖರ್ಚು ಇಲ್ಲದೆ, ಸೂಜಿಯನು ಹಾಕದೆ ನೀ ಬೇಗ ವಾಸಿಯಾಗು ॥ಆ॥

ಎಲ್ಲರ ದೇಹದ ಕಾಯಿಲೆ ಕಳೆಯಲು ಸ್ವಚ್ಛತೆ ಇರಬೇಕು
ಕೆಟ್ಟ ಕ್ರಿಮಿಗಳ ಮುಷ್ಠಿಯಿಂದ ನಾವು ಬಿಟ್ಟು ಬರಬೇಕು
ಆಗಿಂದಾಗ್ಗೆ ಡಾಕ್ಟರ ಸಲಹೆಯ ಪಡೆಯುತಲಿರಬೇಕು
ಆರೋಗ್ಯಕ್ಕೆ ಗಮನವ ಕೊಡುವ ಜ್ಞಾನವನರಿಬೇಕು ॥ಆ॥ ❑

## ಸಾಂಕ್ರಾಮಿಕ ರೋಗ

*- ಗ್ಯಾರಂಟಿ ರಾಮಣ್ಣ*

ಸಾಂಕ್ರಾಮಿಕ ರೋಗ ಬರುತ್ತೈತೆಚ್ಚರವಿರಲಣ್ಣಾ
ಅದರ ತಂಟೆಯಿಂದ ದೂರ ನೀನು ಇರಲೇ ಬೇಕಣ್ಣಾ

ಸಂಜೆ ಮಾಡಿಕೊಂಡ್ ಸೊಳ್ಳೆಯು ಮನೆಗೆ ನುಗ್ಗುತೈತಣ್ಣಾ
ನಿನ್ನ ಮೈಯ ಮೇಲೆ ಕುಳಿತುಕೊಂಡು ಕಚ್ಚುತೈತಣ್ಣಾ
ಮುಂಗೈ, ಮೊಳಕೈ, ಕಿವಿ ಹಿಂಭಾಗ, ಅದು ಕಡಿಯುವ ಜಾಗ
ಏಕೆ ಗೊತ್ತೇನು.....ಅದು ಬೆವರಿರುವ ಜಾಗ ॥ಸಾಂ॥

ಮಲೇರಿಯದಿಂದ ಮೆದುಳು ಜ್ವರವು ಬರುವುದು ಕೇಳಣ್ಣಾ
ಅದು ಬಂದರೆ ನೀನು ಉಳಿಯುವುದು ಬಲು ಕಷ್ಟ ಕಾಣಣ್ಣಾ
ಒಬ್ಬರಿಂದ ಒಬ್ಬರಿಗೆ, ಅವರಿಂದ ಇನ್ನೊಬ್ಬರಿಗೆ
ಗರ್ಭದೊಳಗೆ ಇರುವ ಮಗುವನು ಬಿಡದು ಈ ರೋಗ ॥ಸಾಂ॥

ಸಂಜೆಯಾದ ಮೇಲೆ ಕಿಟಕಿ ಬಾಗಿಲು ಮುಚ್ಚಣ್ಣಾ
ಸೊಳ್ಳೆ ಪರದೆ ಹಾಕುವದ ನೀ ಮರೆಯಬೇಡಣ್ಣಾ
ಕೈಕಾಲ್ ತುಂಬ ಮುಚ್ಚಿಕೋ....ಗುಡ್ ನೈಟನ್ನು ಹಚ್ಚಿಕೋ
ಸಾಧ್ಯವಾದರೆ ಬೇವಿನ ಸೊಪ್ಪಿನ ಹೊಗೆಯ ನೀ ಹಾಕು ॥ಸಾಂ॥

ಬಾಳಿನಲ್ಲಿ ಎಲ್ಲರಿಗೂ ಸುಖ ಜೀವನವಿರಬೇಕು
ಮಲೇರಿಯಾ....ಮಾರಿಯಿಂದ ದೂರವಿರಬೇಕು
ಮನೆಯವರೆಲ್ಲರೂ ನಗುನಗುತಿರಬೇಕೂ....
ಎಲ್ಲರೂ ಒಂದಾಗಿ ಈ ರೋಗ ಬಡಿದೋಡಿಸಬೇಕು ॥ಸಾಂ॥

❑

# ನೀರು


- ಎ. ಮಲ್ಲಪ್ಪ

ಕುಡಿಯಬೇಕಣ್ಣಾ ಕುಡಿಯಬೇಕಣ್ಣಾ
ಶುದ್ಧವಾದ ನೀರು ಕುಡಿಯಬೇಕಣ್ಣಾ ॥ಪ॥

ಕಲುಷಿತ ನೀರು ಕುಡಿಯೋದರಿಂದ
ಬರುವುದು ನಮಗೆ ಹಲವು ರೋಗಗಳು ಆಗ
ವೈರಿಯು ಹೆಚ್ಚು ಇರುವ ನೀರು ಕುಡಿದರೆ
ಬರುವುದು ನಮಗೆ ರೋಗ ॥ಪ॥

ಬಚ್ಚಲು ನೀರು ಬೀದಿಗೆ ಹರಿದಾಗ
ಆ ನೀರು ಅಲ್ಲೆ ನಿಂತಾಗ
ಅಲ್ಲಿ ಬೆಳೆವವು ಸೊಳ್ಳೆಗಳ ಆಗರ
ಆಗ ನಮಗೆ ರೋಗ ಬರುವುದು ಗ್ಯಾರಂಟಿ ॥ಪ॥

ನೀರೇ ಎಲ್ಲರ ಜೀವನದ ಅರ್ಥ
ನೀರೇ ಎಲ್ಲರ ಆಧಾರ
ಕುಡಿಯುವ ನೀರಲಿ ಕ್ರಿಮಿಗಳು ಇದ್ದರೆ
ಅಪಾಯ ಕಾದಿದೆ ನಿರಂತರ ॥ಪ॥





ಎಲ್ಲಿಂದ ಬಂದೀರೆಂದು ಕೇಳಬಹುದು ನೀವು
ಎಲ್ಲಿಂದ ಬಂದೀರೆಂದು ಕೇಳಬಹುದು ನೀವು ॥ ಎಲ್ಲಿಂದ ॥

ಜನರ ನಡುವಿನಿಂದ ಎಂದು ಹೇಳುತ್ತೇವೆ ನಾವು
ಜನರ ನಡುವಿನಿಂದ ಎಂದು ಹೇಳುತ್ತೇವೆ ನಾವು ॥ಎಲ್ಲಿಂದ ॥

ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದು ನೀವು
ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದು ನೀವು ॥ ಎಲ್ಲಿಂದ ॥

ತಿರುಗಿ ಮತ್ತೆ ಜನರ ನಡುವೆ ಹೋಗುತ್ತೇವೆ ನಾವು
ತಿರುಗಿ ಮತ್ತೆ ಜನರ ನಡುವೆ ಹೋಗುತ್ತೇವೆ ನಾವು ॥ ಎಲ್ಲಿಂದ ॥



# ಕಿರು ನಾಟಕಗಳು

## ಆರೋಗ್ಯ ಭಾಗ್ಯ

*- ಪ್ರೇಂಕುಮಾರ್ ಬಂಡಿಗಡಿ*
ಹೊನ್ನಾಳಿ

ಮೇಳ ೧ : ಗೀಯಾ ಗೀಯಾ ಗಾಗಿಯಾ ಗೀಯ
ಗೀಯಾ ಗೀಯಾ ಗಾಗಿಯ ಗೀಯ
ಬಂದೇವ ನಾವು ಬಂದೇವ
ನಾವು ಬಂದೇವ ನಿಮ್ಮೂರ ನೋಡಲಿಕ್ಕಾ
ನಿಮ್ಮ ಸೇವಾ ಮಾಡಿ ಮುಂದ ಹೋಗಲಿಕ್ಕಾ ॥ಪ॥

ಮೇಳ ೨ : ಹೊಟ್ಟೆ ತಂಬಾ ಅನ್ನ ಇದ್ರು
ಮೈಮುಚ್ಚು ಬಟ್ಟೆ ಇದ್ರು
ತಲೆ ತುಂಬಾ ಬುದ್ಧಿ ಇದ್ರು
ಈ ಕಾಯಿಲೆ ಯಾಕೆ ಬಂತಾ - ಹೇಳಪ್ಪಾ
ಈ ಮನುಷ್ಯರಿಗೆ ಕಾಯಿಲೆ ಯಾಕೆ ಬಂತಾ - ತಾ ತಾ ॥ಪ॥

ಮೇಳ ೧ : ಯಾಕಾ ಅಂದ್ರೆ - ಹೇಳ್ತೀನಿ ಕೇಳಪ್ಪ
ಮನುಷ್ಯನ ಚಟ - ಅದನ್ನ ಬಿಡಲನ್ನೋ ಹಟಾ
ಚಟಾ ಅಂದ್ರೆ ಚಟಾ - ಒಂದಾ ಎರಡಾ
ಕುಡಿಯೋ ಚಟಾ, ಸೇದೋ ಚಟಾ
ಹಾಕೋ ಚಟಾ ನೂಕೋ ಚಟಾ
ಚಟದಿಂದಲೇ ಚಟ್ಟಾ
ಇದರಿಂದಲೇ ಮನುಷ್ಯ ಕೆಟ್ಟಾ ಟಾಟಾ ॥ಪ॥

ಮೇಳ ೨ : ಊರಾಗೆಲ್ಲ ದವಾಖಾನೆ ಇದ್ರು
ದವಾಖಾನೆ ತುಂಬಾ ಡಾಕ್ಟ್ರು ಇದ್ರು
ಬೀದಿಗೊಂದು ಔಷ್ಧಿ ಅಂಗಡಿ ಇದ್ರು
ಈ ಜನಕ್ಕೆ ರೋಗ ಯಾಕಾ ಬಂತಾ ಹೇಳಣ್ಣಾ!
ವಿಚಿತ್ರ ರೋಗ ಯಾಕಾ ಬಂತಾ ತಾ ತಾ ॥ಪ॥

ಮೇಳ ೧ : ಹೌದಾ - ಯಾಕಾ ಅಂದ್ರ
ಡಾಕ್ಟ್ರು ಔಷ್ಧಿಗಿಂತ -
ಎಕ್ಸ್‌ರೇ ಆಪರೇಷನ್‌ಗಿಂತಾ
ನಿಮ್ಮ ತಲೆಯೊಳಗೆ ಆರೋಗ್ಯದ ಬಗ್ಗೆ
ಸ್ವಲ್ಪಾನು ಜ್ಞಾನ ಇಲ್ಲಾಂತ
ಆರೋಗ್ಯದ ಬಗ್ಗೆ ಜ್ಞಾನ ಇಲ್ಲಾ ಅಂತಾ ತಾ ತಾ ॥ಪ॥

ಎಲ್ಲರೂ : ಈಗ ಅದಕ್ಕೆ ನಾವು ಏನು ಮಾಡಬೇಕಪ್ಪ

ಮೇಳ : ಅದನ್ನೆ ನಿಮಗೆ ಹೇಳಾಕ ಬಂದೀವ್ರಿ ಯಪ್ಪಾ
ಡಾಕ್ಟ್ರು ಔಷ್ಧಿ ಎಕ್ಸ್‌ರೇ ಆಪರೇಷನ್ ಅಂತಾ ಓಡದೆ
ಹಾಳು ಬೀಡಿ, ಸಿಗರೇಟು, ತಂಬಾಕು, ಸರಾಯಿ ಕುಡಿದು
ಹಾರಾಡದೆ ನಿಮ್ಮ ಆರೋಗ್ಯದ ಬಗ್ಗೆ
ನಮ್ಮ ಆರೋಗ್ಯದ ಬಗ್ಗೆ ಎಲ್ಲರೂ ಆರೋಗ್ಯದ ಬಗ್ಗೆ
ಸ್ವಲ್ಪ ಯೋಚ್ನೆ ಮಾಡ್ರೀ ಅಂತಾ
ಇನ್ನಾದ್ರೂ ಯೋಚ್ನೆ ಮಾಡಿ ಅಂತಾ ತಾ ತಾ ॥ಪ॥
(ಹಾಡು ಮುಗಿಯುತ್ತಿದ್ದಂತೆ ಮೇಳದವರು ಮರೆಯಾಗುತ್ತಾರೆ. ಮೇಳ ಮರೆಯಾಗುತ್ತಿದ್ದಂತೆ ಯಮಧರ್ಮ-ಚಿತ್ರಗುಪ್ತರ ಪ್ರವೇಶ)
(ಯಮನ ಬಗಲಿಗೊಂದು ಹಗ್ಗದ ಸುರಳಿ, ಕೈಯಲ್ಲಿ ಗದೆ ಹಿಡಿದು ಸೈಕಲ್ ಹಿಡಿದು ಬರುತ್ತಾನೆ. ಅವನ ಹಿಂದೆ ಚಿತ್ರಗುಪ್ತನ ಕೈಯಲ್ಲಿ ಹೊರಲಾರದ ಪುಸ್ತಕದ ಹೊತ್ತಿಗೆ, ಕೈಯಲ್ಲಿ ದೊಡ್ಡದೊಂದು ಲೇಖನಿ)
(ರಂಗ ಪ್ರವೇಶಿಸುತ್ತಿದ್ದಂತೆ ಅತ್ತ-ಇತ್ತ ನೋಡಿದ ಯಮಧರ್ಮ ಚಿತ್ರಗುಪ್ತನನ್ನು ಉದ್ದೇಶಿಸಿ)

ಯಮ : ಅಂತೂ ಬಹಳ ಪ್ರಯಾಸದಿಂದ ಈ ಭೂಲೋಕ ತಲುಪಿದ್ದಾಯಿತು.
ಇನ್ನೂ ನಾವು ಇಲ್ಲಿಗೆ ಬಂದ ಉದ್ದೇಶದ ಬಗ್ಗೆ ಯೋಚಿಸೋಣ.

ಚಿತ್ರಗುಪ್ತ : ಅದೇ ನನಗೂ ಅರ್ಥವಾಗುತ್ತಿಲ್ಲ ಮಹಾಪ್ರಭು.
ನೀವು ಅವಸರ ಅವಸರವಾಗಿ ಹೊರಟಿರಿ. ನಾನೂ ಅಷ್ಟೇ ಅವಸರದಿಂದ ನಿಮ್ಮನ್ನು ಹಿಂಬಾಲಿಸಿದೆ. ನಾವು ಇಲ್ಲಿಗೆ ಬಂದ ಉದ್ದೇಶ ಶ ಶ ಶಾ.

ಯಮ : ಮೂರ್ಖ.. ಇತ್ತೀಚೆಗೆ ನಿನ್ನ ನೆನಪಿನ ಶಕ್ತಿಗೆ ಏನಾಗಿದೆ. ಮೊನ್ನೆ

ನಮ್ಮ ಯಮಲೋಕದ ಮಹಾಸಭೆಯಲ್ಲಿ ಈ ಭೂಲೋಕದವರ ಸಾವಿನ ಸಂಖ್ಯೆ ಇಳಿಮುಖವಾದದ್ದರ ಬಗ್ಗೆ ಚರ್ಚಿಸಲಿಲ್ಲವೇ?

ಚಿತ್ರಗುಪ್ತ : ಹೌದು, ಹೌದು.
ಇತ್ತೀಚೆಗೆ ಭೂಲೋಕದಲ್ಲಿ ಮರಣ ಹೊಂದುವವರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿದೆ ನಿಜ. ಅದಕ್ಕೂ ನಾವು ಇಲ್ಲಿಗೆ ಬರುವುದಕ್ಕೂ ಏನು ಸಂಬಂಧ? ಅಲ್ಲದೆ ಭೂಲೋಕದ ಜನರ ಸಾವಿನ ಸಂಖ್ಯೆಯನ್ನು ಹೆಚ್ಚಿಸಲು ನಮ್ಮ ಏಜೆಂಟರಾಗಿ ಸಾಕಷ್ಟು ಜನ ಡಾಕ್ಟರ್ ಇದ್ದಾರೆ.

ಯಮ : ಅಲ್ಲೆ ಬಂದಿರೋದು ಸಮಸ್ಯೆ.
ನನಗೆ ಅವರುಗಳ ಮೇಲೆ ಅನುಮಾನ.
ಜನ ಈಗ ಅವರ ಮಾತುಗಳನ್ನು ನಂಬುತ್ತಿಲ್ಲ. ಜನರೇ ತಮ್ಮ ಆರೋಗ್ಯದ ಬಗ್ಗೆ ವಿಶೇಷವಾಗಿ ಯೋಚಿಸಲು ಪ್ರಾರಂಭಿಸಿದ್ದಾರೆ. ಇತ್ತೀಚೆಗೆ ಕೆಲವು ಸಂಘ-ಸಂಸ್ಥೆಗಳು ಜನರಿಗೆ ಆರೋಗ್ಯದ ಬಗ್ಗೆ ವಿಶೇಷ ತಿಳುವಳಿಕೆ ನೀಡುತ್ತಿದ್ದಾರಂತೆ. ಅದನ್ನ ಖುದ್ದಾಗಿ ಪರಿಶೀಲಿಸಲು ನಾವು ಇಲ್ಲಿಗೆ ಬಂದದ್ದು.

ಚಿತ್ರಗುಪ್ತ : ಅದು ಸರಿಯೇ. ನಮ್ಮ ಈ ಡಾಕ್ಟರುಗಳು ನಮ್ಮ ಈ ಔಷಧಿ ಅಂಗಡಿಗಳು, ಕ್ಲಿನಿಕ್‌ಗಳು ನರ್ಸಿಂಗ್ ಹೋಂಗಳು ಜನರನ್ನು ಕೊಲ್ಲುವುದರಲ್ಲಿ ಯಶಸ್ವಿಯಾಗಿಲ್ಲ, ಈ ಜನ ಸತ್ತು ನಮ್ಮಲ್ಲಿಗೆ ಬರದೆ ನಮಗೆ ಕೆಲಸವಿಲ್ಲ.

ಯಮ : ಸಧ್ಯ ಈಗಾಲಾದರೂ ತಿಳಿಯಿತಲ್ಲ. ಸುಮ್ಮನೆ ಕಾಲಹರಣ ಮಾಡುವುದು ಬೇಡ. ಇಲ್ಲಿ ಯಾರಾದರೂ ಬುದ್ಧಿವಂತ ನರನಿದ್ದರೆ ಅವನೊಂದಿಗೆ ಈ ಬಗ್ಗೆ ಚರ್ಚಿಸೋಣ. ನೋಡಿ ಬಾ.

ಚಿತ್ರಗುಪ್ತ : ಅಪ್ಪಣೆ ಮಹಾಪ್ರಭು.
ತಮ್ಮ ಇಚ್ಛೆಯಂತೆಯೇ ಆಗಲಿ. ಈ ಭೂಲೋಕದಲ್ಲಿ ನೀವು ಹೇಳಿದ ಬುದ್ಧಿವಂತ ನರರು ಸಿಗುವುದು ಕಷ್ಟ. ಪ್ರಯತ್ನಿಸುತ್ತೇನೆ.
(ಚಿತ್ರಗುಪ್ತ ಹಣೆ ಮೇಲೆ ಕೈಯಿಟ್ಟು ಆ ಕಡೆ - ಈ ಕಡೆ ಹುಡುಕುತ್ತಾ ರಂಗದ ಒಂದು ಭಾಗದಲ್ಲಿ ಯಾರನ್ನೋ ದಿಟ್ಟಿಸಿ ನೋಡಿ)
ಓಹ್, ಆತನನ್ನು ನೋಡಿದರೆ ಬುದ್ಧಿವಂತನಂತೆ ಕಾಣುತ್ತಾನೆ.

ಆದರೆ, ಅತೀ ಬುದ್ಧಿವಂತನಾದರೆ ಅಪಾಯ, ಏನ್ ಮಾಡ್ಲಿ,
ಇರ್ಲಿ, ಅವನನ್ನೇ ಕರೆಯೋಣ.
ಅಯ್ಯ ಮಾನವ ಶ್ರೇಷ್ಠ ನರೋತ್ತಮ
ಬಾರಯ್ಯ ಇಲ್ಲಿ.
(ರಂಗದ ಬದಿಯಿಂದ ಸೂತ್ರಧಾರ ಪ್ರವೇಶಿಸುತ್ತಾ)

ಸೂತ್ರಧಾರ : ಸ್ವಾಮಿ, ತಾವು ಯಾರು.
ತಮ್ಮನ್ನು ನೋಡಿದ್ರೆ ಈ ದೇಶದವರಲ್ಲ ಪರದೇಶಿ ಅಂತ ಕಾಣುತ್ತೀರಿ. ತಾವೂ.....

ಚಿತ್ರಗುಪ್ತ : ನಾನೂ.... ಹೌದು .... ನಾನು ಯಾರು.
ಮರೆತೆ ಬಿಟ್ಟೆನಲ್ಲಾ
ಅಯ್ಯಾ ನರೋತ್ತಮ, ಮಾನವ ಶ್ರೇಷ್ಠ

ಸೂತ್ರಧಾರ : ಸ್ವಾಮಿ ನಾವು ಯಾರಾದ್ರೂ ಆಗಿರಿ.
ನಾನು ನರೋತ್ತಮನು ಅಲ್ಲಾ, ಮಾನವ ಶ್ರೇಷ್ಠನೂ ಅಲ್ಲ, ನಾನು ಸೂತ್ರಧಾರ, ಈ ನಾಟಕದ ಸೂತ್ರಧಾರ.

ಚಿತ್ರಗುಪ್ತ : ಆ.. ನೆನಪಾಯಿತು.
ನಾನು ಚಿತ್ರಗುಪ್ತ, ಯಮಲೋಕದಿಂದ ಬಂದಿದ್ದೇನೆ.
ನಮ್ಮ ಯಮಧರ್ಮರಾಜರು ಬಂದಿದ್ದಾರೆ. ಅಗೋ... ಅಲ್ಲಿ ವಿರಮಿಸಿದ್ದಾರೆ.

ಸೂತ್ರಧಾರ : ನಿಮ್ಮ ಭಾಷೆ, ವೇಷ ನೋಡೇ ಅನ್ನಿಸ್ತು
ನೀವು ಯಾರೋ ಪರದೇಶಿಯರಿರಬೇಕೆಂದು. ಆದರೆ ಇನ್ನೂ ವಿಚಿತ್ರ, ನೀವೂ ಪರಲೋಕದವರು.
ಅಲ್ಲದೆ ಚಿತ್ರಗುಪ್ತರು, ಅಲ್ಲದೆ ಯಮನ ಜೊತೆಗೆ ಬಂದವರು.
ನನಗೇನು ಆಶ್ಚರ್ಯವಿಲ್ಲ ಬಿಡಿ. ಹಾಗೂ ಈ ಲೋಕಕ್ಕೆ ಯಾರ್ಯಾರೋ ಬಂದು ಹೋಗ್ತಾರೆ. ಹಾಗೆಯೇ ನೀವು.

ಚಿತ್ರಗುಪ್ತ : ಯಮ ಬಂದರು ಭಯವಿಲ್ಲವೇ?

ಸೂತ್ರಧಾರ : (ನಕ್ಕು) ನಮ್ಮ ಡಾಕ್ಟರುಗಳಿಗಿಂತ ನಿಮ್ಮ ಯಮ ದೊಡ್ಡವನೋ.
ನಾವು ಹೆದರುವುದೇನಿದ್ದರೂ ಡಾಕ್ಟರುಗಳಿಗೆ ಮಾತ್ರ.
ಆದಿರಲಿ. ನಮ್ಮ ಪ್ರೇಕ್ಷಕರು ಕಾಯುತ್ತಿದ್ದಾರೆ. ನನ್ನಿಂದೇನಾಗ ಬೇಕು. ನನ್ನನ್ನು ಇಲ್ಲಿಗೆ ಕರೆದ ಕಾರಣ.

ಚಿತ್ರಗುಪ್ತ : (ಮತ್ತೆ ತಲೆಯನ್ನು ಕೆರೆಯುತ್ತ)
ನಿಮ್ಮನ್ನು ಕರೆದ ಕಾರಣ ಮರೆತೆ ಹೋಯಿತಲ್ಲಾ.

ಸೂತ್ರಧಾರ : ನೀವೂ ಜ್ಞಾಪಿಸಿಕೊಳ್ಳುತ್ತಿರಿ. ನಾನು ಬರುತ್ತೇನೆ.

ಚಿತ್ರಗುಪ್ತ : ಅರೇರೇ... ನಿಲ್ಲಯ್ಯ
ಅದ್ರೆ ಭೂಲೋಕದ ಜನ ತುಂಬಾ ಅವಸರದವರು ಕಣಯ್ಯ.
ನಮ್ಮ ಯಮಧರ್ಮರಾಜರು ನಿನ್ನಿಂದ ಕೆಲ ವಿಷಯಗಳನ್ನು ತಿಳಿದುಕೊಳ್ಳಬೇಕಂತೆ. ಅವರನ್ನು ಕಂಡು ನೀನು ಹೋಗುವಿಯಂತೆ.

ಸೂತ್ರಧಾರ : ನಿಮಗೇನು ಸ್ವಾಮಿ ಆರಾಮವಾಗಿದ್ದೀರಿ. ನಾವು ಹೊಟ್ಟೆಪಾಡಿಗೆ ಏನಾದ್ರೂ ಮಾಡಬೇಕಲ್ಲ. ಬಾಳ ಹೊತ್ತು ಕೊರೀಬೇಡಿ. ಏನಿದ್ರೂ ಶಾರ್ಟ್ ಆಗಿ ಹೇಳಿ.

ಚಿತ್ರಗುಪ್ತ : ಆಯ್ತು, ಆಯ್ತು. ನೀನು ಕೇಳಿದಾಗೆ. (ಸ್ವಲ್ಪ ಮುಂದೆ, ಸ್ವಲ್ಪ ಹಿಂದೆ. ರಂಗವನ್ನು ಒಮ್ಮೆ ಸುತ್ತಿ ಯಮನತ್ರ ಹೋಗುವರು).
(ಮಲಗಿದ್ದ ಯಮಧರ್ಮನಿಗೆ)
ಮಹಾಪ್ರಭು... ಇಗೋ ಇಲ್ಲಿ ನೋಡಿ
ನೀವು ಹೇಳಿದಂತೆ ಈ ನರೋತ್ತಮ
ಮಾನವ ಶ್ರೇಷ್ಠನನ್ನು ಕರೆತಂದಿದ್ದೇನೆ. ವಿಚಾರಿಸಿ.

ಸೂತ್ರಧಾರ : ಮತ್ತು ಅದೇ ನಾನು ನರೋತ್ತಮನು ಅಲ್ಲ ಮಾನವ ಶ್ರೇಷ್ಠನೂ ಅಲ್ಲ. ಕೇವಲ ಸೂತ್ರಧಾರ. ಸೂತ್ರಧಾರ ಅನ್ನಿ.

ಚಿತ್ರಗುಪ್ತ : ಅದೇ, ಅದೇ ಈ ಸೂತ್ರಧಾರನನ್ನು ಕರೆತಂದಿದ್ದೇನೆ.

ಯಮ : (ಎದ್ದು ಒಮ್ಮೆ ಅವನನ್ನು ದೃಷ್ಟಿಸಿ)
ಸೂತ್ರಧಾರ ಜನ ನಾಟಕ ಸೂತ್ರಧಾರ ಆ ವಿಷ್ಣು. ನೀನು ಯಾವ ಸೂತ್ರಧಾರ?

ಸೂತ್ರಧಾರ : ಜನಾರೋಗ್ಯದ ನಾಟಕ ಸೂತ್ರಧಾರ.

ಯಮ : ಯಾವುದು ಈ ಜನಾರೋಗ್ಯ? ಏಕೆ ಆ ಜನಾರೋಗ್ಯ ನಾಟಕ?

ಸೂತ್ರಧಾರ : ತಾವು ಯಮಧರ್ಮ. ಆದರೂ ಪರವಾಗಿಲ್ಲ, ನೀವು ಕೇಳಿದ ಆ ಜನಾರೋಗ್ಯ. ಜನರ ಆರೋಗ್ಯದ ಬಗ್ಗೆ ನೀಡುವ ತಿಳುವಳಿಕೆ

ಆಂದೋಲನ. ಆರೋಗ್ಯದ ಬಗ್ಗೆ ಜನರಿಗೆ ತಿಳಿ ಹೇಳುವ ನಾಟಕವೇ ಜನಾರೋಗ್ಯ ನಾಟಕ.

ಯಮ : ಭಲೆ ಭಲೇ ತಡವಾದರೂ ಬಹಳ ಬುದ್ಧಿವಂತನನ್ನೇ ಕರೆ ತಂದಿದ್ದೀಯಾ.
ನಮ್ಮ ಸಮಸ್ಯೆಗಳಿಗೆ ಸರಿಯಾದ ಉತ್ತರ ನೀಡಬಲ್ಲವನೆಂದು ಕಾಣುತ್ತದೆ.

ಚಿತ್ರಗುಪ್ತ : ಸ್ವಾಮಿ, ಬರಿ ಬುದ್ಧಿವಂತನಾದ್ರೆ ತೊಂದ್ರೆ ಇಲ್ಲ. ಅತೀ ಬುದ್ಧಿವಂತನಾದ್ರೆ ಅಪಾಯ, ಸ್ವಲ್ಪ ಎಚ್ಚರಿಕೆಯಿಂದ ಪ್ರಶ್ನಿಸಿ.

ಯಮ : ಎಲೋ ನರೋತ್ತಮ...

ಚಿತ್ರಗುಪ್ತ : ಅಲ್ಲ, ಅಲ್ಲ, ಬರೀ ಸೂತ್ರಧಾರ.

ಯಮ : ಅಯ್ಯಾ ಸೂತ್ರಧಾರ, ನನ್ನ ಕೆಲವು ಸಮಸ್ಯೆಗಳಿವೆ. ಅದಕ್ಕೆ ನಾನು ಭೂಲೋಕಕ್ಕೆ ಬಂದದ್ದು. ಪರಿಹರಿಸಬಲ್ಲೆಯಾ ನೀನು?

ಸೂತ್ರಧಾರ : ಅದೇನು ಹೇಳಬೇಕೋ ಬೇಗ ಹೇಳಿ. ನಿಮ್ಮ ಪೀಠಿಕೆಗಳು ಸಾಕು.

ಯಮ : ಸರಿ, ಸರಿ, ಈ ಭೂಲೋಕದಲ್ಲಿ ನರರು ಸಾಯುವ ಸಂಖ್ಯೆ ಕಡಿಮೆಯಾಗಿದೆಯಲ್ಲಾ. ಏಕೆ?

ಚಿತ್ರಗುಪ್ತ : ನಮ್ಮ ಡಾಕ್ಟರುಗಳು, ಹಕೀಮರು, ಪಂಡಿತರು, ಬಹಳ ಸಂಖ್ಯೆಯಲ್ಲಿ ಇದ್ದರೂ ಸಹ, ಮರಣದ ಸಂಖ್ಯೆ ಇಳಿಯುತ್ತಿದೆ. ಸಾವಿನ ಸಂಖ್ಯೆ ಹೆಚ್ಚಾಗಲೆಂದೇ ಏಡ್ಸ್‌ನಂತ ಮಹಾಮಾರಿ ಕಳುಹಿಸಿದ್ದೇವೆ. ಚಿತ್ರ ವಿಚಿತ್ರ ಚಟಗಳು ಹುಟ್ಟಿವೆ. ಹಾಗಿದ್ದರೂ..

ಸೂತ್ರಧಾರ : (ನಕ್ಕು) ಓಹೋ... ಅದಾ ನಿಮ್ಮ ಸಮಸ್ಯೆ. ಈಗ ಸರಿಯಾಯ್ತು. ನಾವು ಆಡ ಹೊರಟಿದ್ದನ್ನೇ ನೀವೂ ಪ್ರಶ್ನೆಯಾಗಿ ಕೇಳುತ್ತಿದ್ದೀರಿ.

ಯಮ : ಹಾಗಂದರೆ.

ಸೂತ್ರಧಾರ : ನೋಡಿ ಸ್ವಾಮಿ
ಜನಗಳಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಹಲವಾರು ಸಂಘ-ಸಂಸ್ಥೆಗಳು ಶ್ರಮಿಸುತ್ತಿವೆ. ಅದರಲ್ಲಿ ನಮ್ಮ ಪ್ರಯತ್ನವು ಒಂದು. ಜನಾರೋಗ್ಯ ಆಂದೋಲನ ಅಂತಾ. ಜನಗಳಿಗೆ ಆರೋಗ್ಯದ ಬಗ್ಗೆ ದುಶ್ಚಟಗಳ ಬಗ್ಗೆ ನಗರ ನೈರ್ಮಲ್ಯದ ಬಗ್ಗೆ

ತಿಳಿ ಹೇಳಿ. ಅದಕ್ಕೆ ಪರಿಹಾರ ಕಂಡುಕೊಳ್ಳುವ ಪ್ರಯತ್ನವೇ ಈ ನಾಟಕ.

ಈ ನಾಟಕ ನೋಡಿ, ನಮ್ಮ ಪ್ರಯತ್ನ ನಿಮ್ಮ ಪ್ರಶ್ನೆಗಳಿಗೆ ಉತ್ತರ ಎರಡೂ ತಿಳಿಯಬಹುದು.

ಯಮ : ಖಂಡಿತವಾಗಿ.

ಸೂತ್ರಧಾರ : ಹಾಗಾದ್ರೆ - ಹೀಗೆ ದಯಮಾಡಿಸಿ - ಹೀಗೆ ಬನ್ನಿ.. ...

(ಎಂದು ರಂಗದ ಒಂದು ಬದಿಗೆ ಕರೆದೊಯ್ಯುತ್ತಾನೆ.

ಸೂತ್ರಧಾರ ರಂಗದಿಂದ ಮರೆಯಾಗುತ್ತಿದ್ದಂತೆ ಒಂದು ದವಾಖಾನೆ (ಕ್ಲಿನಿಕ್) ರೂಪುಗೊಳ್ಳುವುದು. ಡಾಕ್ಟರ್, ಕಾಂಪೌಂಡರ್, ರೋಗಿಯ ತಪಾಸಣೆಯಲ್ಲಿ ಮಗ್ನರಾಗಿದ್ದಾರೆ)

(ರಂಗದ ಮೇಲೆ ಶ್ರೀ ಮಹಾಲಕ್ಷ್ಮಿ ಕ್ಲಿನಿಕ್, ಕೆಳಗೆ ಡಾ॥ ಲಕ್ಷ್ಮೀಪತಿ, ಎಫ್‌ಆರ್‌ಸಿಎ ಲಂಡನ್ ಎಂಬ ನಾಮಫಲಕ ತೂಗುಹಾಕಿದೆ. ಒಂದು ಟೇಬಲ್, ಡಾಕ್ಟರ್ ಕೊರಳಲ್ಲಿ ದೊಡ್ಡ ಸ್ಟೆತಾಸ್ಕೋಪ್, ಕಾಂಪೌಂಡರ್ ಕೈಯಲ್ಲಿ ದೊಡ್ಡ ಸಿರಿಂಜ್)

(ರೋಗಿಗಳು ಕ್ಯೂನಲ್ಲಿ ನಿಂತಿದ್ದಾರೆ. ಹೊರಗಿಂದ ಒಬ್ಬ ರೋಗಿ ನರಳುತ್ತಾ ಕ್ಯೂನೊಳಕ್ಕೆ ಹೋದಾಗ ಕ್ಯೂನಲ್ಲಿದ್ದವರು ಹೊರಕ್ಕೆ ತಳ್ಳುತ್ತಾರೆ. ಬಂದ ವ್ಯಕ್ತಿ ತನಗೆ ಅತಿಯಾದ ಭೇದಿ ಎಂದು ತಿಳಿಸಿದಾಗ ಮೂಗು ಮುಚ್ಚಿಕೊಂಡು ಅಸಹ್ಯ ವಾಗಿ ಡಾಕ್ಟರ್ ಬಳಿ ಹೋಗಲು ಬಿಡುತ್ತಾರೆ)

ಡಾಕ್ಟರ್ : (ಮೂಗು ಮುಚ್ಚಿಕೊಂಡು)

ಏನಯ್ಯ ನಿನ್ನ ಕರ್ಮ, ಯಾಕಿಂಗ್ ಒದ್ದಾಡ್ತಿದ್ದೀಯಾ?

ರೋಗಿ : ಸ್ವಾಮಿ - ಹೊಟ್ಟೆನೋವು ಅಂದ್ರೆ ಹೊಟ್ಟೆನೋವು.

ಭೇದಿ ಅಂದ್ರೆ ಭೇದಿ

ಏನ್ ಮಾಡಿದ್ರೂ ನಿಲ್ತಾಯಿಲ್ಲ. ಕೆರೆಕಡೆ ಹೋಗಿ ಹೋಗಿ ಸುಸ್ತಾಗಿದ್ದೀನಿ. ಸತ್‌ಹೋಗ್ತೀನಿ. ನನ್ನ ಸ್ವಲ್ಪ ನೋಡಿ ಸಾ.

ಡಾಕ್ಟರ್ : ನಿನ್ನ ನೋಡಿದ್ರೆ ಗೊತ್ತಾಗಲ್ವೆ. ಸತ್ತೇ ಹೋಗ್ತೀಯಾ ಅಂತಾ ಬಾ ಇಲ್ಲಿ ಕೂತ್ಕೋ.

ಬಾಯಿ ತೆಗಿ, ಕೈ ಕೊಡು. (ನಾಡಿ ಹೊಟ್ಟೆ ಪರೀಕ್ಷೆ ಗಾಬರಿಯಿಂದ) ಇದೂ ಬಹಳ ಸೀರಿಯಸ್ ಕೇಸು. ಮೊದಲು ಲ್ಯಾಬಿಗೆ ಹೋಗಿ, ಬ್ಲಡ್‌ಟೆಸ್ಟ್, ಯೂರಿನ್ ಟೆಸ್ಟ್, ಸ್ಕ್ಯಾನಿಂಗ್ ಮಾಡಿಸ್ಕೊಂಡು ರಿಪೋರ್ಟ್ ತಗೊಂಡು ಬಾ. ನಾನು ಸ್ಪೆಷಲಿಸ್ಟ್ ಹತ್ರ ಡಿಸ್ಕರ್ಸನ್ ಮಾಡಿ ಟ್ರೀಟ್‌ಮೆಂಟ್ ಕೊಡ್ತೀನಿ.

ರೋಗಿ : ಬಾಳ ದೊಡ್ಡ ಕಾಯಿಲೇನಾ ಬುದ್ದೀ. ದುಡ್ಡು ಎಷ್ಟು ಖರ್ಚಾಗುತ್ತೆ ಬುದ್ದಿ.

ಡಾಕ್ಟರ್ : ದುಡ್ಡೇನಯ್ಯ, ನನ್ನತ್ರ ಬಂದಿದ್ದೀಯಾ. ಚೀಪಾಗಿ ಮಾಡೋಣ ಒಂದು ೫೦೦೦ ಖರ್ಚಾಗಬಹುದು.

(ಈ ಮಾತನ್ನ ಕೇಳಿ ರೋಗಿ ನಿಂತಲ್ಲೇ ೫೦೦೦ನಾ ಎಂದು ಸೆಟೆದುಕೊಳ್ಳುವನು)

ಏ ಕರಿಯಪ್ಪ ಇವನಿಗೇನಾಯ್ತಯ್ಯ, ಸೆಟಗಂಡ್ಬುಟ್ಟ. ಸ್ವಲ್ಪ ನೀರು ಹಾಕು. ಇಲ್ಲೇ ಎಲ್ಲಾದ್ರೂ ಹೋದಾನು. ಎಲ್ಲಾ ಕರ್ಮ. ಇಲ್ಲೇ ಎಲ್ಲಾದ್ರೂ ಹೋದಾನು. ಎಲ್ಲಾ ಕರ್ಮ.

(ರೋಗಿಗೆ ಕಾಂಪೌಂಡರ್ ಮೂಗು ಹಿಡಿದು ನೀರನ್ನು ಹಾಕುವನು. ರೋಗಿ ಎಚ್ಚೆತ್ತು ಕ್ಲಿನಿಕ್‌ನಿಂದ ಹೊರಬಂದು ರಂಗವನ್ನು ಒಂದು ಬಾರಿ ನರಳುತ್ತಾ ಸುತ್ತು ಹಾಕುತ್ತಾನೆ. ಆ ಊರಿನ ಅನುಭವಿ ಮುದುಕಿ ಮರಿಯಮ್ಮ ಎದುರಾಗುವಳು.)

ಮರಿಯಮ್ಮ : (ರೋಗಿಯನ್ನು ನೋಡಿ) ಯಾಕೋ ಸಿದ್ದಣ್ಣ ಭಾಳ ನರಳುತ್ತೀಯಾ. ಏನಾಗುತ್ತಪ್ಪ ಮೈಗೆ.

ಸಿದ್ದಣ್ಣ : ಅದ್ಯಾಕೋ ನಿನ್ನೆಯಿಂದ ಹೊಟ್ಟೆನೋವು ಅಂದ್ರೆ ಹೊಟ್ಟೆನೋವು. ಭೇದಿ ಅಂದ್ರೆ ಭೇದಿ.
ಆ ಡಾಕ್ಟರ್‌ತಾವ ಹೋದ್ರೆ ಅದೇನೇನೋ ಹೇಳಿ ಹೆದರಿಸಿಬಿಟ್ಟ ಕಣವ್ವ.

ಮರಿಯಮ್ಮ : ಹೊಟ್ಟೆನೋವು ಭೇದಿನಾ. ನಿನ್ನೆ ಎಲ್ಲಿ ಊಟ ಮಾಡಿದ್ದಿ. ಏನ್ ಊಟ ಮಾಡಿದ್ದಿ ತಮ್ಮ.

ಸಿದ್ದಣ್ಣ : (ಜ್ಞಾಪಿಸಿಕೊಂಡು) ಹ್ಞಾಂ... ಮಠದಾಗೆ ಮದುವಿ ಇತ್ತು. ಮೂಲ್ಜಿ ಚೆನ್ನಾಗಿದೆ ಅಂತಾ ಸ್ವಲ್ಪ ಜಾಸ್ತೀನೇ ತಿಂದೆ ಕಣವ್ವ.

ಮರಿಯಮ್ಮ : (ನಕ್ಕು) ಹಂಗ್ ಹೇಳು ಮತ್ತೆ. ಅಡರ್-ಬಡರ್ ತಿಂದ್ರೆ ಅಜೀರ್ಣಾಗದೆ ಏನಾಗುತ್ತೆ. ಬಾ ನಮ್ಮನಿಗೆ ಒಳ್ಳೆ ಕಷಾಯ ಮಾಡಿ ಕೊಡ್ತೀನಿ. ಗಫ್ ಅಂತಾ ನಿಂತ್‌ಕಂತತಿ ನೋಡು. ನಿನ್ನ ಭೇದಿ

ಸಿದ್ದಣ್ಣ : ಅಷ್ಟು ಮಾಡು ಮಾರಾಯಗಿತ್ತಿ. ನಿನ್ಗೆ ಪುಣ್ಯ ಬರ್ತದೆ. (ಅವರು ತೆರಳುತ್ತಿದ್ದಂತೆ ರಂಗದಲ್ಲಿ (ಕ್ಲಿನಿಕ್) ದವಾಖಾನೆ ದೃಶ್ಯ. ಮತ್ತೆ ಮೂಡಿ ಬರುವುದು. ಮೂಳೆ ತಜ್ಞ ಡಾ॥ ಮಂಜಪ್ಪ ಎಂಬ ನಾಮಫಲಕ ಕಾಣುತ್ತದೆ. ಕುತ್ತಿಗೆಯನ್ನ ಉಳುಕಿಸಿಕೊಂಡು ವ್ಯಕ್ತಿ ವಿಚಿತ್ರವಾಗಿ ಕುತ್ತಿಗೆ ತಿರುಗಿಸಿಕೊಂಡು

ಡಾಕ್ಟರ್ ಬಳಿ ಬಂದು ಕಾಂಪೌಂಡರ್ ಕಡೆ ಮುಖ ತಿರುಗಿಸಿ 'ನಮಸ್ಕಾರ ಡಾಕ್ಟ್ರೇ' ಎನ್ನುವನು)

ಡಾಕ್ಟರ್ : ಇದೇನ್ರೀ ಗೌಡ್ರೇ, ನಿಮ್ಮ ಫಜೀತಿ ಏನಾಯ್ತು.

ಗೌಡ : ರಾತ್ರಿ ಮಲಗಿದ್ದೆ. ಬೆಳಿಗ್ಗೆ ಎದ್ದಾಗ ಕುತ್ತಿಗ ತಿರುಗಾಕ್ಕೊಲ್ಲದು ನೋಡ್ರೀ, ಭಾಳಾ ನೋವು.

ಡಾಕ್ಟರ್ : (ಗೌಡನ ಕುತ್ತಿಗೆಯನ್ನು ಸ್ವಲ್ಪ ತಿರುಗಿಸಿದಾಗ, ಗೌಡ ಪ್ರಾಣ ಹೋಗುವಂತೆ ಚೀರುವನು)

ಗೌಡ್ರೇ... ಇದು ಬೋನ್ಸ್ ಜಾಯಿಂಟ್ ಸ್ಟ್ಯಾಕ್ ಆಗಿಬಿಟ್ಟಿದೆ. ಇದಕ್ಕೆ ಎಕ್ಸ್‌ರೇ ತೆಗೆದು ನೋಡಿ ಒಂದು ಸಣ್ಣ ಆಪರೇಷನ್ ಮಾಡಬೇಕಾಗುತ್ತೇನೋ? ನೋಡೋಣ. ಮೊದ್ಲು ಎಕ್ಸ್‌ರೇ ತೆಗಸ್ರೀ.

ಗೌಡ : ಎಕ್ಸ್‌ರೇ, ಆಪರೇಷನ್, ಇದೇನು ಸ್ವಾಮಿ.

ಡಾಕ್ಟರ್ : ಗಾಬರಿಯಾಗಬೇಡಿ. ಸಣ್ಣ ಆಪರೇಷನ್ ಅಷ್ಟೇ. ಮೊದ್ಲು ಎಕ್ಸ್‌ರೇ ತೆಗೆಸಿಕೊಂಡು ಬನ್ನಿ.

ಗೌಡ : ಏನು ಎಕ್ಸ್‌ರೇನೋ, ಏನು ಆಪರೇಷನ್ನೋ. ದೇವರೇ ಕಾಪಾಡ ಬೇಕು.

(ಎನ್ನುತ್ತಾ ದವಾಖಾನೆಯಿಂದ ಹೊರಬಂದು ರಂಗಸ್ಥಳದ ಮಧ್ಯ ಬಂದಾಗ ಚೌರದ ಚೆನ್ನಣ್ಣ ಎದುರಾಗುವನು)

ಚೆನ್ನಣ್ಣ : ಏನು ಗೌಡ್ರೇ, ನನ್ನ ನೋಡಿದ್ರು, ಮುಖ ತಿರುಗಿಸ್ಕೊಂಡು ಹೋಗ್ತೀರಿ. ಚೌರದವನು ಎದುರಿಗೆ ಬಂದ ಅಂತನಾ.

ಗೌಡ : ಏಯ್, ನನ್ನ ಕಷ್ಟ ನನಗೆ ಆಗೇತಿ. ಕುತ್ತಿಗೆ ಉಳುಕಿ ಮುಖ ತಿರುಗಾಸಾಕೆ ಆಗಾಂಗಿಲ್ಲ ಚೆನ್ನ. ಕುತ್ತಿಗೆ ಮುಟ್ಟಿದ್ರೆ ಪ್ರಾಣಾನೇ ಹೋಗುತೇತಿ.

ಚೆನ್ನ : ಅದ್ಯಾಕೆ ಹಂಗಾತು.

ಗೌಡ : ಅದಕ್ಕೆ ಕಣಪ್ಪ, ಡಾಕ್ಟರತ್ರ ಹೋಗಿದ್ದೆ. ಆ ಡಾಕ್ಟರ್ ಎಕ್ಸ್‌ರೇ ಆಪರೇಷನ್ ಅಂತಾ ಹೆದರಿಸಿಬಿಟ್ರು. ಅದಕ್ಕೆ ಪಟ್ಟಣದಾಗೆ ಇರೋ ಸ್ಪೆಷಲಿಸ್ಟ್ ಹತ್ರ ಹೋಗಾನ ಅಂತಾ.

ಚೆನ್ನ : (ಸ್ವಲ್ಪ ಯೋಚಿಸಿ) ಹೌದು ನಿನ್ನೆ ರಾತ್ರಿ ಎಲ್ಲಿ ಮಲಗಿದ್ರಿ, ಹೆಂಗೆ ಮಲಗಿದ್ರಿ.

ಗೌಡ : ಯಾಕಲೇ ಏನೇನೋ ಕೇಳ್ತೀಯಾ ಕಡಿತತೇನು.

ಚೆನ್ನ : ಛೇ ಛೇ ಹಂಗಲ್ಲ ಗೌಡ್ರೆ. ಕುತ್ತಿಗೆ ಸೊಟ್ಟಾಗೈತಲ್ಲಾ ಅದಕ್ಕೆ ಕೇಳ್ದೆ. ಹೆಂಗೆ ಮಲಗಿದ್ರಿ, ಎಲ್ಲಿ ಮಲಗಿದ್ರಿ ಅಂತಾ.

ಗೌಡ : ಹಂಗಾ, ಅದೂ ನಿನ್ನೆ ಯಾವುದೋ ಪಂಚಾಯ್ತಿಗೆ ಹೋಗಿದ್ದೆ. ರಾತ್ರಿ ಬಾಳ ಹೊತ್ತಾತು. ಮಲಗಾಕೆ ತಲೆ ದಿಂಬು ಸಿಗಲಿಲ್ಲ. ಚಾಪೆ ಎಳಕೊಂಡು ತಲೆಗೆ ಏನೋ ಇಟ್ಕಂಡು ಮಲಗಿದ್ನಪ್ಪ. ಬೆಳಿಗ್ಗೆ ಆಗೋ ಹೊತ್ತಿಗೆ ಹಿಂಗಾಗೈತಿ ನೋಡು.

ಚೆನ್ನ : ಅದಕ್ಕೆ ಕೇಳಿದೆ. ನಂಗೊತ್ತು. ಏನೋ ಎಡವಟ್ಟಾಗೈತಿ ಅಂತಾ. ಗೌಡ್ರೆ ಸ್ವಲ್ಪ ಇತ್ಲಾ ಬರ್ರೀ (ಎಂದು ಪರೀಕ್ಷಿಸಲು ಹೋಗುವನು)

ಗೌಡ : ಲೇ ಲೇ ಮುಟ್ಟಬ್ಯಾಡಲೇ. ಪ್ರಾಣ ಹೋಗ್ತೈತಿ. ಡಾಕ್ಟರಿಗೆ ಗೊತ್ತಾಗ ದಿರೋದು ನಿಂಗೆ ಹೆಂಗಲೆ ಗೊತ್ತಾಗತ್ತೈತಿ.

ಚೆನ್ನ : ಗೊತ್ತಾಗೇತಿ. ನೀವು ಸುಮ್ನೆ ಇರ್ರೀ. (ಎಂದು ಗೌಡ್ರ ಕುತ್ತಿಗೆಯನ್ನು ಸರಿ ಹಿಡಿದು ಕ್ರಮಬದ್ಧವಾಗಿ ಅಲುಗಾಡಿಸಿ ಒಂದು ಬದಿಗೆ ತಿರುಗಿಸುವನು)

ಗೌಡ : ಅಯ್ಯೋ ...

(ಕುತ್ತಿಗೆ ಮೊದಲಿನಂತೆ ಸರಿಯಾದಾಗ)

ಇದೇನ್ಲೇ ಚೆನ್ನ. ಇದೇನು ಮಾಡಿದ್ಯೋ.

(ಅತ್ಲಾಗೆ ಇತ್ಲಾಗೆ ತಲೆ ತಿರುಗಿಸಿ)

ಸರಿ ಆತಲ್ಲೋ, ಮಂತ್ರ-ಗಿಂತ್ರ ಮಾಡಿದ್ಯಾ.

ಚೆನ್ನ : ಮಂತ್ರಾನು ಇಲ್ಲ, ಮಾಟಾನು ಇಲ್ಲಾ, ಮಲಗಿದಾಗ ನರ ಹೊರಳೈತಿ ಲಟಕಿ ತಗದೆ ಸರಿಯಾಯ್ತು. ಇದಕ್ಕೆಲ್ಲಾ ಡಾಕ್ಟರತ್ರ ಹೋಗಿ ರಣರಂಪ ಮಾಡಿದ್ರಲ್ಲ.

ಗೌಡ : ಹೌದಲ್ಲೋ. ಆ ಡಾಕ್ಟರ ಮಾತು ಕಟ್ಕಂಡು ಹೆದರಿಬಿಟ್ಟಿದ್ದೆ.

(ಅಷ್ಟರಲ್ಲಿ ಭೇದಿಯಿಂದ ನರಳುತ್ತಿದ್ದ ಸಿದ್ದ ರಂಗಕ್ಕೆ ಬರುವನು)

ಏನೋ ಚೆನ್ನಣ್ಣ.

ಚೆನ್ನ : ನಮ್ಮ ಗೌಡ್ರು ಕುತ್ತಿಗಿ ಉಳಿಕಿತಂತೆ. ಡಾಕ್ಟರತ್ರ ಹೋಗಿದ್ರಂತೆ.

ಎಕ್ಸ್‌ರೇ ಆಪರೇಷನ್ ಅಂತಾ ಬೇಡ ಫಜೀತಿ. ಒಂದು ಲಡಕೀಲಿ ಸರಿಮಾಡ್ದೆ ನೋಡು.

ಸಿದ್ದಣ್ಣ : ಅಯ್ಯಾ ನನ್ನ ಫಜೀತಿ ಕೇಳ್ತೀಯಾ.
ಬರೀ ಹೊಟ್ಟೆನೋವು ಭೇದಿ ಅಂತ ಹೋದೆ ಮಾರಾಯ.
ನಂಗೂ ಅಷ್ಟೇ ಮಾರಾಯ ಸ್ಕ್ಯಾನಿಂಗ್, ಪಾನಿಂಗ್ ಅಂತಾ ಹೆದರಿಸಿಬಿಟ್ರು.
ಅಜ್ಜಿ ಕಸಾಯಾ ಕೊಟ್ರು ನೋಡು. ಭೇದಿ ಗಪ್ ಅಂತಾ ನಿಂತೇ ಬಿಡ್ತು.

ಗೌಡ : ನಿಂಗೂ ಹಂಗೆ ಆಗಿತ್ತಾ.

ಚೆನ್ನ : ಎಲ್ಲರಿಗೂ ಹಂಗೆ ಆಗೋದು. ಕೆಮ್ಮಿದರೆ ಕ್ಯಾಕರಿಸಿದರೆ ಸಣ್ಣ ಪುಟ್ಟದ್ದಕ್ಕೆಲ್ಲ ಡಾಕ್ಟರತ್ರ ಹೋದ್ರೆ ಮತ್ತೇನು ಮಾಡ್ತಾರೆ. ಮನಿಯಾಗೆ ಬೇಕಾದಷ್ಟು ಮದ್ದು ಇಟ್ಕಂಡು... ಮುಟ್ಯಾಳ್ರು ಹಿತ್ಲಗಿಡ ಮದ್ದಲ್ಲ ಅಂದಾಂಗೆ.

ಗೌಡ : ನೀನು ಹೇಳೋದು ನಿಜ. ದುಡ್ಡು ಜಾಸ್ತಿ ತಗಳೋ ಡಾಕ್ಟ್ರು ಒಳ್ಳೆ ಡಾಕ್ಟ್ರು. ದುಡ್ಡು ಕೇಳದೇ ಇರೋರು ಡಾಕ್ಟ್ರೇ ಅಲ್ಲ ಅಂತಾ ಹಿಂಗೆ ನಮ್ಮ ಜನ.

ಚೆನ್ನ : ನಿಮಗೆ ಈಗ ತಿಳೀತಲ್ಲ. ನೀವೂ ನಾಲ್ಕು ಜನಕ್ಕೆ ಹೇಳ್ರಿ ಸಾಕು.

ಗೌಡ : ಹೇಳ್ತೀನ್ರಪ್ಪ. ಖಂಡಿತಾ ಹೇಳ್ತೀನಿ.
(ಮೂವರು ಹೊರಟ ಮೇಲೆ ರಂಗಕ್ಕೆ ಸೂತ್ರಧಾರ - ಯಮ - ಚಿತ್ರಗುಪ್ತ ಪ್ರವೇಶ)

ಸೂತ್ರಧಾರ : ನೋಡಿದ್ರಾ, ಯಮಧರ್ಮರಾಜರೇ,
ಭೂಲೋಕದಲ್ಲಿ ನಮ್ಮ ಜನ ಎಷ್ಟು ಬುದ್ಧಿವಂತರಾಗ್ತಾ ಇದ್ದಾರೆ. ನಿಮ್ಮ ಡಾಕ್ಟ್ರು, ನಿಮ್ಮ ಔಷಧಿ, ನಿಮ್ಮ ರೋಗ ಎಲ್ಲಾ ಈಗ ಅವರಿಗೆ ಮೊದ್ಲು ತಿಳೀತಾ ಇದೆ.

ಯಮ : ಹೌದಲ್ಲ, ನಮ್ಮ ಡಾಕ್ಟ್ರುಗಳ ಪ್ರಯತ್ನ ಇಷ್ಟೇನಾ?

ಸೂತ್ರಧಾರ : ಸ್ವಾಮಿ ಚಿತ್ರಗುಪ್ತರೇ,
ನೀವೂ ಬರೀ ಆ ತರಹದ ಡಾಕ್ಟನ್ನ ನೋಡಿದ್ರೆ ನಮ್ಮ ಈ ತರಹದ

ಒಳ್ಳೆ ಡಾಕ್ಟರುಗಳು ಇದ್ದಾರೆ. ಈ ಕಡೇನೂ ಸ್ವಲ್ಪ ನೋಡಿ.

(ಎಂದು ರಂಗದಿಂದ ಮರೆಯಾಗುವನು)

(ರಂಗದಲ್ಲಿ ದವಾಖಾನೆ ಮೂಡಿ ಬರುವುದು. ಡಾ// ಧನವಂತರಿ ರತ್ನಾಕರ ಎಂಬ ನಾಮಫಲಕ ಹಾಕಿರುವುದು. ಡಾಕ್ಟ್ರು ಚಿಕಿತ್ಸೆಯಲ್ಲಿ ಮಗ್ನರಾಗಿದ್ದಾರೆ. ರೋಗಿಯೊಬ್ಬ ಬೀಡಿ ಸೇದುತ್ತಾ, ಕೆಮ್ಮುತ್ತಾ ಡಾಕ್ಟರ್ ಬಳಿ ಬರುತ್ತಾನೆ. ಡಾಕ್ಟ್ರು ಅವನನ್ನು, ವಿಚಿತ್ರವಾಗಿ ನೋಡುತ್ತಾನೆ)

ರೋಗಿ : ಸ್ವಾಮಿ ಕೆಮ್ಮು ಅಂದ್ರೆ ಕೆಮ್ಮು, ಧಮ್ಮು ಅಂದ್ರೆ ಧಮ್ಮು ಉಸಿರಾಡ ಕ್ಯಾಗಲ್ಲ (ಎನ್ನುತ್ತಾ ಕೆಮ್ಮುವನು)

ಡಾಕ್ಟರ್ : ಅಲ್ಲಪ್ಪ ಒಳ್ಳೆ ಫ್ಯಾಕ್ಟರಿ ಹೊಗೆ ಬಿಟ್ಟಂಗೆ, ಪುಸು ಪುಸು ಪುರುಸೊತ್ತು ಇಲ್ಲದಂಗೆ ಬೀಡಿ ಸೇದಿ ಹೊಗೆ ಬಿಡ್ತೀಯಾ, ಕೆಮ್ಮು ಬರದಲೆ ಮತ್ತೇನಪ್ಪ ಬರುತ್ತೆ.

ರೋಗಿ : ಹಾಳಾದ ಚಟ ಬಿಡಾಕೆ ಆಗಲ್ಲ.

ಡಾಕ್ಟರ್ : ಹಂಗಾದ್ರೆ, ಕೆಮ್ಮಿ ಕೆಮ್ಮಿ ಪ್ರಾಣಾನೇ ಬಿಡು. ನೋಡಪ್ಪ ನಿನ್ನೀ ಚಟ ಬಿಡದಿದ್ರೆ ನಮ್ಮ ಔಷಧಿ ಏನೂ ಆ ದೇವರೇ ಬಂದ್ರೂ ನಿನ್ನ ಕೆಮ್ಮು ನಿಲ್ಸಕ್ಕಾಗಲ್ಲ, ನೀನು ಬದುಕಬೇಕು ಅಂದ್ರೆ ಬೀಡಿನಾ ಬಿಡು. ಆಮೇಲೆ ನೋಡು.

ರೋಗಿ : ಹಂಗಾ ಬುದ್ಧಿ... ಬೀಡಿ ಬಿಡ್ಲೇಬೇಕಾ. ಅದಕ್ಕೇನು ಈ ಕೆಮ್ಮು.

ಡಾಕ್ಟರ್ : ಕೆಮ್ಮು ಒಂದೇ ಅಲ್ಲಪ್ಪ, ಹೀಗೆ ಬೀಡಿ ಸೇದಿದ್ರೆ ಕ್ಯಾನ್ಸರೇ ಬರುತ್ತೆ. ಕೆಮ್ಮಾದ್ರೆ ನಿಲ್ಲಬಹುದು. ಕ್ಯಾನ್ಸರ್ ಬಂದ್ರೆ ಮುಗೀತು.

ರೋಗಿ : ಹಂಗಾರೆ ಈ ಹಾಳಾದ ಬೀಡಿ ಬೇಡ ಬುದ್ದೀ, ಬಿಟ್ಟು ಬಿಡ್ತೀನಿ. ಈ ಕೆಮ್ಮು....

ಡಾಕ್ಟರ್ : ಅದಕ್ಕೆ ಈಗ ಔಷಧಿ ಕೊಡ್ತೀನಿ. ಕೆಮ್ಮು ಕಮ್ಮಿ ಆಗುತ್ತೆ.

ರೋಗಿ : ಅಷ್ಟು ಮಾಡಿ ಬುದ್ಧೀ. (ಡಾಕ್ಟ್ರು ಔಷಧಿ ಬರೆದು ಕೊಡುವನು. ರೋಗಿ ತೆಗೆದುಕೊಂಡು ಹೋಗುವನು)

(ಅವನು ತೆರಳುತ್ತಿದ್ದಂತೆ ಹೊಟ್ಟೆನೋವಿನಿಂದ ನರಳುತ್ತಾ ಒಬ್ಬ ರೋಗಿ ಬರುವನು)

ರೋಗಿ : ಸ್ವಾಮಿ, ಬಾಳ ಹೊಟ್ಟೆನೋವು, ತಡಕ್ಕಳ್ಳಾಕಾಗಲ್ಲ.

ಡಾಕ್ಟರ್ : ಆಯ್ತು, ಆಯ್ತು, ಪರೀಕ್ಷೆ ಮಾಡೋಣ
(ಪರೀಕ್ಷಿಸುತ್ತಾ ಬಾಯಿ ತೆರೆಯಲು ಹೇಳುವನು, ಬಾಯಿಯಿಂದ ಸಾರಾಯಿ ವಾಸನೆ ಬಂದು ಮೂಗು ಮುಚ್ಚಿಕೊಳ್ಳುತ್ತಾ)
ಏನಯ್ಯಾ... ಕುಡ್ಡೇ ಆಸ್ಪತ್ರೆಗೆ ಬಂದಿದ್ದೀಯಾ?

ರೋಗಿ : ಇಲ್ಲಾ ಸ್ವಾಮಿ, ಬೇಜಾರಾಗಿತ್ತು ಸ್ವಲ್ಪ ಕುಡ್ಡೆ.

ಡಾಕ್ಟರ್ : ಬೇಜಾರಾದ್ರೆ ಸಾರಾಯಿ ಬ್ರಾಂದಿ ಕುಡಿತೀಯಾ, ಮತ್ತೇನು ಮಾಡ್ತೀಯಾ, ಬೀಡಿ ಸೇದ್ತೀಯಾ ಅಲ್ಲಾ.

ರೋಗಿ : ಬೀಡಿ ಮಾಮೂಲು ಬಿಡಿ. ಬೇಜಾರಾದಾಗ ಸಾರಾಯಿ.

ಡಾಕ್ಟರ್ : ಸಾರಾಯಿ ಕುಡಿತೀಯಾ ಲಿವರ್ ಡ್ಯಾಮೇಜ್ ಆಗಿದೆ. ಮತ್ತೇನು ಚಟ ಐತಿ ನಿಂಗೆ.
ಜರ್ದಾ, ಪಾನ್‌ಬಾರ್ ಇಷ್ಟೇನಾ,
ಹೊಟ್ಟೆಗೆ ಅನ್ನ ಇಲ್ಲದಿದ್ರು, ಚಟಕ್ಕೇನು ಕಡಿಮೆ ಇಲ್ಲಾ.

ರೋಗಿ : ಹೊಟ್ಟೆನೋವು ಸಾರಾಯಿಯಿಂದ ಬರ್ತಾದ ಸ್ವಾಮಿ.

ಡಾಕ್ಟರ್ : ಹೊಟ್ಟೆನೋವು ಒಂದೇ ಅಲ್ಲಾ, ಎಲ್ಲಾ ಕಾಯಿಲೇನು ಬರ್ತದೆ. ಹೊಗೆಸೊಪ್ಪಿನಿಂದ ಕ್ಯಾನ್ಸರ್, ಸಾರಾಯಿಯಿಂದ ಕರಳು ಕಾಯಿಲೆ, ಇನ್ನೊಂದ್ರಿಂದ ಏಡ್ಸ್, ನೀವೆಲ್ಲ ಮಸಣಕ್ಕೆ ಹೋಗಬೇಕಾದವ್ರು ಆಸ್ಪತ್ರೆಗೆ ಬರ್ತಿರಾ.

ರೋಗಿ : ಹಂಗನ್ನಬೇಡಿ ಬುದ್ದೀ, ಮಕ್ಕಳೊಂದಿಗ. ನಾನು ದುಡಿದೆ ಸಂಸಾರ ಮಾಡಬೇಕು.

ಡಾಕ್ಟರ್ : ನೀನು ದುಡಿದು ಸಂಸಾರ ಮಾಡ್ತೀಯಾ, ಸಾರಾಯಿ ಕುಡಿತೀಯಾ, ಸಾರಾಯಿ ಬಿಡ್ತೀಯಾ ಹೇಳು.
ನಾನು ಔಷಧಿ ಕೊಡ್ತೀನಿ. ಇಲ್ಲಾ ಅಂದ್ರೆ, ಸಾಯ್ತೀಯಾ.

ರೋಗಿ : ಇಲ್ಲಾ ಬುದ್ಧಿ. ದೇವರಾಣೆಗೂ ಬಿಡ್ತೀನಿ.
ನಾನು ಸತ್ತರೆ ನನ್ನ ಸಂಸಾರದ ಕತೆ ಮುಗೀತು.

ಡಾಕ್ಟರ್ : ಅಷ್ಟು ತಿಳಕಂಡ್ರೆ ಸಾಕು.

ತಗೋ ಔಷಧಿ ಮಾತ್ರೆ.
ಮತ್ತೆ ಮೂರು ದಿನ ಬಿಟ್ಟು ಬಾ.

ರೋಗಿ : ಆಯ್ತು ಸ್ವಾಮಿ. ನಾನು ಬರುತ್ತೇನೆ.
(ಅವನು ತೆರಳುತ್ತಿದ್ದಂತೆ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ರೋಗಿಯನ್ನು ಹೊತ್ತು ತರುವರು. ಹೊತ್ತು ತಂದವರಲ್ಲೊಬ್ಬ)

ಒಬ್ಬ : ತುಂಬಾ ಸೀರಿಯಸ್ ಬುದ್ಧೀ. ಏನಾದ್ರೂ ಮಾಡಿ ಉಳಿಸಿಕೊಡಿ.

ಡಾಕ್ಟರ್ : ಏನಾಗೈತಪ್ಪಾ.

ಇನ್ನೊಬ್ಬ : ಒಂದು ತಿಂಗಳಿನಿಂದ ಮೈ ಹುಷಾರಿಲ್ಲ. ಚಳಿ ಜ್ವರಾ ಅಂತಾ ಒದ್ದಾಡ್ತಿದ್ದ.

ಡಾಕ್ಟರ್ : ಒಂದು ತಿಂಗಳಿಂದ, ಇಷ್ಟು ತಡವಾಗಿ ಯಾಕೆ ಕರ್ಕೊಂಡು ಬಂದ್ರಿ.

ಒಬ್ಬ : ಇಲ್ಲಾ ಸ್ವಾಮಿ, ಯಾರೋ ಇದು ಗಾಳಿ ಸೊಂಕು ಅಂದ್ರು, ದೇವಸ್ಥಾನದಾಗೆ ಹಾಕ್ಕೊಂಡಿದ್ವಿ. ಅದಕ್ಕೂ ಸರಿಯಾಗಲಿಲ್ಲ. ಯಂತ್ರ-ಮಂತ್ರ ಮಾಡಿಸಿದ್ವಿ, ಅದೂ ಪ್ರಯೋಜನವಾಗಲಿಲ್ಲ. ಅದಕ್ಕೆ ಇಲ್ಲಿಗೆ ತಂದ್ವಿ.

ಡಾಕ್ಟರ್ : ಎಂಥ ಮೂರ್ಖ ಜನರಯ್ಯಾ ನೀವು.
ಕಾಯಿಲೆ ಆದ್ರೆ ಆಸ್ಪತ್ರೆಗೆ ತರೋದು ಬಿಟ್ಟು ದೇವಸ್ಥಾನಕ್ಕೆ ಕರಕೊಂಡು ಹೋಗ್ತಾರೇನಯ್ಯಾ?
(ಎಂದು ಅವಸರದಿಂದ ಪರೀಕ್ಷಿಸುವನು. ರೋಗಿ ಸತ್ತಿರುವುದು ತಿಳಿದು ಬೇಸರದಿಂದ)
ಛೇ. ಛೇ... ರೋಗ ಜಾಸ್ತಿಯಾಗಿ, ಇವನು ಸತ್ತು ಎರಡು ಗಂಟೆ ಯಾಗಿದೆ. ಅಲ್ಲಯ್ಯಾ ನಿಮ್ಮ ಅವಿದ್ಯೆ, ಮೂಢನಂಬಿಕೆಗೆ ಪಾಪ ಇವನು ಬಲಿಯಾದ್ನಲ್ಲಯ್ಯ.

ಇನ್ನೊಬ್ಬ : ಅಯ್ಯೋ ಸತ್ತೇ ಹೋದ್ನೆ.
ನಾನು ಹೇಳಿದೆ, ಇವರು ಕೇಳ್ಲಿಲ್ಲ.
ದೆವ್ವ, ಭೂತ, ಏನೇನೋ ಅಂದ್ರು.

ಡಾಕ್ಟರ್ : ಈಗ ಯೋಚ್ನೆ ಮಾಡಿ ಏನ್ರಯ್ಯಾ ಪ್ರಯೋಜನ. ನಿಮಗೆಲ್ಲಾ ಕೆಟ್ಟ ಮೇಲೆ ಬುದ್ದಿ ಬರೋದು.

ಒಬ್ಬ : ಕ್ಷಮಿಸಿ ಸ್ವಾಮಿ ತಪ್ಪಾತು.

ಡಾಕ್ಟರ್ : ಆಗೋದು ಆಯ್ತು. ಇನ್ನು ಮುಂದಾದ್ರೂ ದೆವ್ವ, ಭೂತ, ಗಾಳಿ, ಸೋಂಕು ಅಂತ ನಂಬದೆ ಕಾಯಿಲೆ ಆದ್ರೆ ಆಸ್ಪತ್ರೆಗೆ ಹೋಗ್ರಿ.

ಇನ್ನೊಬ್ಬ : ಆಯ್ತು ಸ್ವಾಮಿ

(ಎಂದು ಸತ್ತ ವ್ಯಕ್ತಿಯನ್ನು ಹೊತ್ತುಕೊಂಡು ಹೋಗುವರು)

(ರಂಗದಲ್ಲಿ ಸೂತ್ರಧಾರ, ಯಮಧರ್ಮರಾಯ, ಚಿತ್ರಗುಪ್ತ ಕಾಣಿಸಿ ಕೊಳ್ಳುವರು)

ಸೂತ್ರಧಾರ : ನೋಡಿದ್ರಾ ಸ್ವಾಮಿ, ಹೀಗೆ ಜನಗಳಿಗೆ ಆರೋಗ್ಯದ ಬಗ್ಗೆ ತಿಳುವಳಿಕೆ ನೀಡುವ ಪ್ರಾಮಾಣಿಕರಾದ ಒಳ್ಳೆ ಡಾಕ್ಟ್ರು ಇದ್ದಾರೆ. ಜೊತೆಗೆ ಈ ಬಡತನ, ಅನಕ್ಷರತೆ, ಇವು ಅನಾರೋಗ್ಯಕ್ಕೆ ಕಾರಣ ಅಂತ ತಿಳಿಸೋ ಸಂಘ ಸಂಸ್ಥೆಗಳು ಇವೆ.

ಇವರ ಪ್ರಯತ್ನದಿಂದಲೇ ಭೂಲೋಕದಲ್ಲಿ ಜನ ಸಾಯೋ ಸಂಖ್ಯೆ ಕಡಿಮೆ ಆಗಿರೋದು.

ಯಮ : ಆಶ್ಚರ್ಯ! ಪರಮಾಶ್ಚರ್ಯ!

ಈಗ ಅರ್ಥವಾಯ್ತು. ಡಾಕ್ಟರುಗಳಿಂದ ಪ್ರಾಮಾಣಿಕ ವೈದ್ಯಕೀಯ ಸೇವೆ. ಸಂಘ ಸಂಸ್ಥೆಗಳಿಂದ ಜನಾರೋಗ್ಯದ ಆಂದೋಲನ ಒಳ್ಳೆ ಪ್ರಯತ್ನ. ನನ್ನ ಲೋಕಕ್ಕೆ ಬರುವವರ ಸಂಖ್ಯೆ ಕಡಿಮೆಯಾದರೂ ಚಿಂತೆಯಿಲ್ಲ. ಈ ಲೋಕದಲ್ಲಿ ಬದುಕಿರುವವರು ಆರೋಗ್ಯದಿಂದ ಬದುಕಿರಲಿ ಎಂಬುದೇ ನನ್ನ ಇಚ್ಛೆ.

ಚಿತ್ರಗುಪ್ತ : ಮಹಾಪ್ರಭು, ನೀವೇನು ಹೇಳುತ್ತಿದ್ದೀರಿ.

ಈ ನರೋತ್ತಮ ಮಾನವ ಶ್ರೇಷ್ಠನ ಮಾತುಗಳನ್ನು ಕೇಳಿ ನೀವೂ...

ಸೂತ್ರಧಾರ : ಚಿತ್ರಗುಪ್ತರೇ, ನಿಮಗೆ ಮರೆವು ಹೆಚ್ಚು. ನಾನು ನರೋತ್ತಮನೂ ಅಲ್ಲ, ಮಾನವ ಶ್ರೇಷ್ಠನೂ ಅಲ್ಲ, ಬರೀ ಸೂತ್ರಧಾರ.

ಈ ಜನಾರೋಗ್ಯ ನಾಟಕದ ಸೂತ್ರಧಾರ

ಯಮ : ಸೂತ್ರಧಾರರೇ, ನಿಮ್ಮ ಪ್ರಯತ್ನ ನಮಗೆ ಮೆಚ್ಚುಗೆಯಾಗಿದೆ. ಜನರ ಸಾವಿಗೆ ಕಾಯಿಲೆ ಕಾರಣವಾಗಬಾರದು. ಬರುವವರು ಹೇಗಾದರೂ ಬರುತ್ತಾರೆ ಬಿಡಿ. ಚಿತ್ರಗುಪ್ತ, ಸಾಯುವವರು ಆರೋಗ್ಯದಿಂದಿದ್ದು ಆಯುಷ್ಯ ತೀರಿದ ಮೇಲೆ ಬರಲಿ.

ಬದುಕಿರುವವರು ಆರೋಗ್ಯದಿಂದಲೇ ಬದುಕಿರಲಿ.
ಜನರ ಬದುಕು ಸಮೃದ್ಧವಾಗಿ ಸಂತೋಷವಾಗಿರಲಿ. ಇದು ನಮ್ಮ ಆಶಯ ಮತ್ತು ಆಶೀರ್ವಾದ. ನಾವು ಇನ್ನು ಬರುತ್ತೇವೆ. "ಶುಭಮಸ್ತು"

(ಯಮ, ಚಿತ್ರಗುಪ್ತ ಮರೆಯಾಗುವರು)

ಸೂತ್ರಧಾರ : ನೋಡಿದ್ರಾ, ನಿಮ್ಮ ಆರೋಗ್ಯದ ಬಗ್ಗೆ ಸಾವಿನ ಸರದಾರ ಯಮನಿಗೆ ಅಷ್ಟು ಕಾಳಜಿ ಇರೋವಾಗ ನಿಮ್ಮ ಆರೋಗ್ಯದ ಬಗ್ಗೆ ನೀವೇಕೆ ಯೋಚಿಸಬಾರದು. ನಾವೂ ಇನ್ನು ಬರುತ್ತೇವೆ.

(ನಿರ್ಗಮನದೊಂದಿಗೆ ಮೇಳದಲ್ಲಿ ನಾವು ಬಂದೇವ, ಗೀ ಗೀ ಪದ ಹಾಡುವರು)

❑



# ಬಾಡಿದ ಬದುಕು

*- ಗ್ಯಾರಂಟಿ ರಾಮಣ್ಣ*

(ಮನೆಯ ದೃಶ್ಯ, ಸಣ್ಣಪ್ಪನ ತಂದೆ ಮುದುಕಪ್ಪ ಕೆಮ್ಮುತ್ತಾ ಮಲಗಿರುವನು, ಅವನ ಹೆಂಡತಿ ಒಳಗೆ ಅಡುಗೆ ಮಾಡುತ್ತಿರುವಳು, ಮಗಳು ಹೊರಗಡೆ ಪಾತ್ರೆ ತೊಳೆಯುತ್ತಿರುವಳು. ಮಗ ಓದುತ್ತಿರುವನು)

ಸಣ್ಣಪ್ಪ : (ಹೊರಗಿನಿಂದ ಹುಲ್ಲು ಹೊರೆ ಹೊತ್ತು ತಂದು ಮನೆಯ ಮುಂದೆ ಹಾಕಿ) ಅಬ್ಬಬ್ಬಾ... ಏನು ಧಗೆ?.... ಒಳ್ಳೆ ಅಂಚಿನ ಮ್ಯಾಲೆ ರೊಟ್ಟಿ ಸುಟ್ಟಂಗಾಗ್ಯೆತೆ... (ಮಗಳ ನೋಡಿ) ಲೇ... ಥೂ ನಿನ್ನ ಒದ್ದು ಬಿಡ್ತೀನಿ. ಬಾಗಿಲು ಮುಂದೇನೇ ಪಾತ್ರೆ ತೊಳೀತಾ ಇದ್ದೀಯಾ, ಮನೆ ಮುಂದೆ ಎಲ್ಲ ಗೊಜ್ಜೆ ಮಾಡಿ ಹಾಕಿಬಿಡ್ತೀಯಾ ನೋಡು.

ಮಗಳು : (ಅಳುತ್ತಾ) ನಾನೇನಲ್ಲ... ಅವ್ವನೇ ಇಲ್ಲೇ ತೊಳಿ ಅಂದ್ಲು. ಅದಕೆ ತೊಳೀತಾ ಇದ್ದೀನಿ.

ಸಣ್ಣಪ್ಪ : ಅಹಹ... ಅನ್ನದೇ ಏನ್ ಮಾಡ್ತಳೆ... ಅವಳಿಗೂ ನಿನಗೂ ಜೋಡಿ ಚೆನ್ನಾಗೈತೆ. ಅವ್ವ ನೆಟ್ಟಗೆ ಕಲ್ತಿದ್ರೆ ತಾನೇ ಮಗಳಿಗೆ ಕಲಿಸೋದು. ಹೋಗು ಕೈಕಾಲಿಗೆ ನೀರು ತಂಗಡು ಬಾ (ಹೋಗಿ ತರುವಳು, ತೊಳೆದು ಒಳಗೆ ಬರುವನು)

ಮಗ : ಯಪ್ಪಾ... ಇವತ್ತು ಇಸ್ಕೂಲಲಿ ಪದ್ಯ ಹೇಳಿಕೊಟ್ರು. ಹೇಳನಾ.

ಸಣ್ಣಪ್ಪ : ಹೌದಾ ಮಗನೇ... ಹೇಳಪ್ಪಾ ನೋಡನಾ

ಮಗ : ನಾಯಿ ಮರಿ ನಾಯಿ ಮರಿ ತಿಂಡಿ ಬೇಕೆ..
(ಹೇಳುವನು)

ಸಣ್ಣಪ್ಪ : ಭಲೇ ನನ್ಮಗನೇ ಲೇ ಸಂಗೀ ಬಾರೇ ಇಲ್ಲಿ ನೋಡೇ ನನ್ನ ಮಗನ್ನ ಎಂಗ ಓದ್ತಾ ಅವನೆ. (ಮಗಳನ್ನು ನೋಡಿ) ಲೇ ... ನೀನೇನು ಗಿರುಚಿಕೊಂಡು ನೋಡ್ತಾ ಇದ್ದೀಯ ... ಒಳಗೆ ಹೋಗಿ ಕಾಫಿ ತಗಂಡು ಬಾ.

ಮುದುಕಪ್ಪ : (ಕೆಮ್ಮುವನು, ಸುಸ್ತಾಗಿರುವನು)

ಸಣ್ಣಪ್ಪ : ಘೂಥರಿಕೆ ಎಲ್ಲಿಂದಲಾದ್ರೂ ಮನೆಗೆ ಬಂದು ಸ್ವಲ್ಪ ನೆಮ್ಮದೀಲಿ ಇರೋಣಾಂದ್ರೆ..... ಇದೊಂದು ನಮ್ಮ ಕರ್ಮ. ಬೆಳಿಗ್ಗೆ ಎದ್ರೆ ಸಾಕು ಅಪಶಕುನ ಯಾವಾಗಲು ಕೆಮ್ಮೋದು, ಕೆಮ್ಮೋದು, ಏನಾಗ್ಯೆ ತಂತೆ ಅಪ್ಪೆಗೆ.

ಸಂಗೀ : ಆಹಹ ... ನಿಮಗೆ ಬಾರಿ ಕಷ್ಟ ಅಗ್ಯೆತಲ್ಲ. ಬೆಳಿಗ್ಗೆ ಹೋದ್ರೆ ಸಂಜೆ ಮನೆಗೆ ಬರ್ತಿರಾ! ಅಷ್ಟಕ್ಕೇ ಇಂಗಾಡ್ತೀರಾ. ಬೆಳಿಗ್ಗೆಯಿಂದ ಸಂಜೆಯವರೆಗೂ ಉಚ್ಚೆ, ಏಲು ಬಾಚಳಿಗೆ ಇನ್ನು ಎಂಗಾಗಬೇಕು. ಹೇ ಹುಡುಗ್ರಾ ಆ ಮುದಿಯ ಎದ್ದುಬಿಟ್ಟರೆ ಮನೆಯೆಲ್ಲಾ ವಾಸನೆ ... ಒಳಗೆ ಹೋಗಿ ಕುಡಿ ಹೋಗ್ರಿ ಕಾಫಿಯ. ನಮ್ಮ ಪ್ರಾರಬ್ಧ. ಇನ್ನೂ ಸಾಯದೆ ಯಾಕೆ ಬದುಕೈತೋ ಏನೋ.

ಸಣ್ಣಪ್ಪ : (ಅಪ್ಪನನ್ನು ಎಬ್ಬಿಸಿ) ಯಪ್ಪಾ ... ಏನಿದು ನಿಂದು ಕಥೆ, ಸುಮ್ನೆ ಆ ಚಾಪೆ ಕಂಬಳಿ ತಗಂಡು ಆ ಕೊಟ್ಟಿಗೇಗಾದ್ರೂ ಹೋಗು ಅಲ್ಲೇ ಕೆಮ್ಮಿಕೊಂಡು ಬಿದ್ದಿರು. ಮನೆ ಮಕ್ಕಳೆಲ್ಲ ಹೇಸಿಗೆ ಪಟ್ಟುಕೊಳ್ತಾವೆ. ಕೊಟ್ಟಿಗೇಲೇ ಇರು. ಅಲ್ಲಿಗೆ ಬೇಕಾದ್ರೆ ಊಟ ತಂದುಕೊಡ್ತಾರೆ.

ಮುದುಕಪ್ಪ : ಏನ್ಲ .... ಈ ಮಾತು ನೀನು ಹೇಳ್ತಾ ಇದ್ದೀಯಾ, ನಮ್ಮಪ್ಪ ಅಂಗ್ಯೆ ಅಗಲ ಜಮೀನು ಕೊಡದೆ ಕಳಿಸಿದ. ಇರೋನೊಬ್ಬ ಮಗ ಅಂತ ಈ ಜೀವ ಸವೆಸಿ ಹತ್ತಾರ್ ಎಕರೆ ಜಮೀನ್ ಮಾಡಿದೆ, ತೋಟ ಮಾಡಿದೆ. ಇರೋನೊಬ್ಬ ಮಗ ದುಡಿಬಾರ್ದಂತ ಮೇಣೆ ಮ್ಯಾಕೆ ಕೈ ಹಾಕ್ಸದಂತೆ ಹೂವಂಗೆ ಜೋಪಾನ ಮಾಡಿದೆ ಈಗ ವಯಸ್ಸಾಗ್ಯೆತೆ, ಕೈಲಾಗಲ್ಲಂತ, ಇಂತ ಮಾತಾಡ್ತೀಯೇನೋ.

ಸಣ್ಣಪ್ಪ : ಹೇ... ಸುಮ್ಮನಿರಪ್ಪ ಕಂಡಿದೀನಿ. ಯಾವಾಗಲೂ ಕೊಚ್ಚಿಕೋ ಬೇಡ. ನಾನಂಗೆ ಮಾಡಿದೆ! ಇಂಗೆ ಅಳ್ಳಾಡಿಸಿದೆ ಅಂತ, ಒಂದು ವೇಳೆ ಮಾಡಿದ್ರೆ ಯಾರು ಉಪಕಾರಕ್ಕೇನು ಮಾಡಿಲ್ಲ ನೀನು. ಶೋಕಿ ಮಾಡದೆ ಮಾಡಿದೀಯಾ, ಮಾಡಿದೆ ಮಾಡಿದೆ ಅಂತ ಹೇಳಿ ಈಗ ನನ್ನ ಕರ್ಮ ನಿನ್ನ ಸೇವೆ ಮಾಡೋದು ಒಂದ್ಯೆತೆ.

ಮುದುಕಪ್ಪ : ಅದಕ್ಯಾಕ್ಲ ಅಂಗ ಮಾತಾಡ್ತೀರಾ ಮಗ. ರಾತ್ರಿಯಿಂದ ಯಾಕೋ ಸೊಂಟ, ಬೆನ್ನು ಒಡಿತಾ ಅವೆ ಒಸಿ ಆಸ್ಪತ್ರೆಗೆ ಕರಕೊಂಡು ಹೋಗ್ಲಾ.

ಸಂಗಿ : ಆಹಹ .... ಅದೊಂದು ಬಾಕಿ ಉಳಿದಿತ್ತು. ಈಗೇನು ಆಸ್ಪತ್ರೆ ಗೋಗಿ ಉಪಾರಾಗಿ ಬಂದು ಹೊಲ ಉಳೋದು ಅಷ್ಟರಲ್ಲೇ ಐತೆ. ಬಿದ್ಕೋ. ನಿನಗೆ ಆಸ್ಪತ್ರೆಗೆ ಖರ್ಚು ಮಾಡಿ ವೇಸ್ಟ್ ಮಾಡೋ ಬದಲು ಕಡ್ಲೆ ಗಿಡಕ್ಕೆ ಒಂದು ಮೂಟೆ ಗೊಬ್ಬರ ತಂದ್ರೆ ಹೊಲ ಸಾದ್ರೂ ಚೆನ್ನಾಗಿರುತ್ತೆ.

ಮುದುಕಪ್ಪ : ಏನ್ಲಾ ಮಗ ನಿನ್ನ ಹೆಂಡ್ರು ಇಂಗ ಮಾತಾಡ್ತಳೇ. ನೀನಾದ್ರೂ ವಸಿ ಹೇಳಲಾ? ಅವಳು ಈ ಮನೇಲಿ ನನ್ನ ನಾಯಿಗೂ ಕಡೆ ಮಾಡಿ ಕೊಂಡವಳೇ ಕಣ್ಲಾ.

ಸಣ್ಣಪ್ಪ : ಅವಳು ಹೇಳೋದ್ರಲ್ಲಿ ಏನೈತಪ್ಪ ತಪ್ಪು. ನಿನಗೆ ಆಸ್ಪತ್ರೆಗೆ ಖರ್ಚು ಮಾಡೋದು ವೇಸ್ಟು ಜೊತೆಗೆ ನಿನ್ನ ಜೊತೆ ಒಬ್ಬ ಕೆಲಸ ಬಿಟ್ಟು ಒಂದು ದಿನ ತಿರುಗೋದು ವೇಸ್ಟ್. ಯಾವುದು ಬ್ಯಾಡ ಒಳಗೆ ನೀಲಗಿರಿ ಎಣ್ಣೈತಿ ಉಜ್ಜಿಕೊಂಡು ಬಿದ್ಕೋ. ಲೇ (ಹೆಂಡತಿಗೆ) ಆ ಸೂರಿನ ಮೇಲೆ ಎಣ್ಣೈತೆ ತಂದು ಕೊಡೆ ನಾ ಬರ್ತಿನಿ. ಬೆಳಿಗ್ಗೆ ಎದ್ರೆ ಇದು ಬ್ಯಾರೆ ರಾಮಾಯಣ (ಹೋಗುವನು)

ಹಿನ್ನೆಲೆ ಗೀತೆ :

ಹತ್ತು ಹೊತ್ತು ಸಾಕಿ ಸಲಹಿದ ಜೀವವ ನೋಡಣ್ಣಾ
ತುತ್ತು ಅನ್ನಕೆ ತನ್ನ ಮನೆಯಲ್ಲೇ ಬೇಡುತಿರುವನಣ್ಣಾ
ದುಡಿಮೆ ಮಾಡಿ ಸಾಕುವಾಗ ತಂದೆ ದೇವರಣ್ಣಾ
ಮುಪ್ಪಿನ ಕಾಲದಿ ಮೂಲೆಗೆ ಕೂತರೆ ಮೂಗು ಮುರಿವರಣ್ಣಾ

## ದೃಶ್ಯ ೨

(ಸಣ್ಣಪ್ಪನ ಮಕ್ಕಳು ಶಾಲೆಗೆ ಹೊರಡುತ್ತಿರುವರು. ಸಣ್ಣಪ್ಪನ ಹೆಂಡತಿ)

ಸಂಗಿ : ಮಗ... ತಗೊಳ್ಳಪ್ಪ. ನಾನು ನಿಮ್ಮಪ್ಪನು ಇವತ್ತು ಹೊಲ ಬಿತ್ತೋಕೆ ಹೋಗ್ತಾ ಇದೀವಿ. ಬರೋದು ಸಾಯಂಕಾಲ ಆಗುತ್ತೆ. ಇದರಲ್ಲಿ ಊಟ ಐತೆ. ಮಧ್ಯಾಹ್ನ ಅಲ್ಲೇ ಊಟ ಮಾಡಿಕೊಳ್ಳಿ ಒಳಗೆ ರೊಟ್ಟಿ ಇಟ್ಟಿದ್ದೀನಿ. ತಿಂದು ಹೋಗಿ. ಮನೆ ಕಡೆ ಜೋಪ

ಮುದುಕಪ್ಪ : ಲೇ ಸಂಗೀ .... ಯಾಕೋ ಮೈಯೆಲ್ಲಾ ಸುಡುತದೆ. ಬಂದಂಗೈತೆ. ವಸಿ ಗಂಜಿ ಮಾಡಿ ಕೊಡಮ್ಮಿ.

ಸಂಗೀ : ಮಾಡೋ ಕೆಲಸ ಬಿಟ್ಟು ಆಡೋ ದಾಸಯ್ಯನ ಜೊತೆ ಹೋದ್ರಂತೆ

ಅಂಗಾತು. ನಿನಗೆ ಗಂಜಿ ಮಾಡ್ತಾ ಕೂತುಕೊಳ್ಳೋಕೆ ನನಗೆ ಈಗ ಪುರುಸೊತ್ತಿಲ್ಲ. ಇವತ್ತು ಒಂದು ದಿನ ತಿನ್ನದಿದ್ರೆ ಸಾಯಲ್ಲ. ಬಿದ್ಕೋ ಥೂ ಬೆಳಿಬೆಳಿಗ್ಗೇನೆ ಅಪಶಕುನ (ಹೋಗುವಳು)

ಮುದುಕಪ್ಪ : (ಮಕ್ಕಳನ್ನು) ಮಗ ... ಶಂಕ್ರು ...(ಸುಸ್ತಿನಿಂದ) ಬಾರಪ್ಪ ಇಲ್ಲಿ, ಅಂಗೆ ವಸಿ ಹೊರಗಡೆ ಜಗಲಿ ಮೇಲೆ ಕೂರಿಸು. ಅಂಗೆ ಈ ಚಾಪೆ ಜಗಲಿ ಮೇಲೆ ಹಾಸಪ್ಪ, ಕೈ ಹಿಡುಕೊಂಡು ಕರೆಕೊಂಡೋಗಿ ಕೂರಿಸಪ್ಪ

ಮಗ : ನಾನು ಬರಲ್ಲ ನಿನ್ನ ಮುಟ್ಟಿದ್ರೆ ಕಾಯಿಲೆ ಬರುತ್ತಂತೆ.. ಅವ್ವ ಅಂಗಂತ ಹೇಳಿದಾಳೆ. ಲೇ ಪುಟ್ಟಿ, ಬಾರೇ ಬೇಗ ಸ್ಕೂಲಿಗೆ ಹೋಗನ (ಹೋಗುವನು)

ಮುದುಕಪ್ಪ : (ಮೆಲ್ಲಗೆ ಏಳುತ್ತ) ವಯಸ್ಸಾದ ಮೇಲೆ ನಿಜವಾಗಲು ಬದುಕಬಾರದು. ಹುಟ್ಟಿಸಿದ ಮಕ್ಕಳೇ ನಮ್ಮನ್ನು ನೋಡಿಕೊಳ್ಳದ ಮೇಲೆ ಬೇರೆ ಯಾರು ನೋಡಿಕೊಳ್ಳುತಾರೆ... (ಎದ್ದು ಬಂದು ಜಗುಲಿ ಮೇಲೆ ಕೂರುವನು)

(ರಂಗಜ್ಜ ಅಲ್ಲಿಗೆ ಬರುವನು)

ರಂಗಜ್ಜ : ಏನು ಮುದುಕಪ್ಪ ಚೆನ್ನಾಗಿದ್ದೀಯಾ?

ಮುದುಕಪ್ಪ : ಏನು ಚೆಂದವ್ವೋ ಏನೋ ... ಮುಪ್ಪಾದ ಮೇಲೆ ಈ ಹಾಳಾದ ಗಟ ಬದುಕಬಾರದು.

ರಂಗಜ್ಜ : ಯಾಕಯ್ಯಾ ... ಏನಾಯ್ತು ... ಮಗ ಚೆನ್ನಾಗಿ ನೋಡಿಕೊಳ್ತಾ ಇಲ್ಲವೇ?

ಮುದುಕಪ್ಪ : ಅಯ್ಯೋ ನೋಡಿಕೊಳ್ಳೋದಿರಲಪ್ಪ.. ಅಪ್ಪ ಅನ್ನೋ ಕನಿಕರ ದಿಂದ ಒಳ್ಳೆ ಎರಡು ಮಾತಾಡಿ ಎಷ್ಟು ವರ್ಷವಾದವ್ವೋ ಏನೋ... ನಾನು ಬದುಕಿರೋದ್ರಿಂದಲೇ ಅವನಿಗೆ ತೊಂದರೆ ಆಗ್ತೈತಂತೆ.

ರಂಗಜ್ಜ : ಹೌದಾ... ನೀನೇಳೋದು ಸರಿ ಕಣಜ್ಜ. ಈಗೇನೋ ನಾನೂ ಸ್ವಲ್ಪ ನೆಮ್ಮದಿಯಾಗಿದೀನಿ... ನಿನ್ನಂಗಾದ ಮೇಲೆ ನನ್ನ ಮಕ್ಕಳು ಇಂಗೆ ಮಾಡ್ತಾರೆ. ನಾವೆಲ್ಲ ಹಿಂದೆ ಹೊಟ್ಟೆ ಬಟ್ಟೆ ಕಟ್ಟಿ ಅವರನ್ನು ಸಾಕಿದ್ದೇ ಮರ್ತು ಬಿಡ್ತಾರಲ್ಲಂತೀನಿ. ಹೊಟ್ಟೆಗೆ ಏನು ತಿಂದೆ?

ಮುದುಕಪ್ಪ : ಅಯ್ಯೋ ... ಇವತ್ತೊಂದು ದಿನ ಹೊಟ್ಟೆಗಿಲ್ಲದಿದ್ದರೆ ಸಾಯೋದಿಲ್ಲ ಅಂತ ಸೊಸೆ ಹೇಳಿ ಹೋದಳಪ್ಪ.

ರಂಗಜ್ಜ : ಎಲ್ಲಿಗೆ ಹೋಗಿದ್ದಾರೆ?

ಮುದುಕಪ್ಪ : ಹೊಲ ಬಿತ್ತನೆ ಮಾಡಾಕೆ ಹೋಗ್ಯವರೇ?

ರಂಗಜ್ಜ : ಚೆನ್ನಾಗಿ ಹದವೇ ಇಲ್ಲ ಅದೆಂಗೆ ಹೊಲ ಬಿತ್ತುತ್ತಾರೆ ಮಾರಾಯ?

ಮುದುಕಪ್ಪ : ಅಯ್ಯೋ ... ನಮ್ಮ ಮಾತ ಯಾರಪ್ಪ ಕೇಳೋರು? ನೆನ್ನೆಯಿಂದ ನಾನು ಹೇಳಿ ಹೇಳಿ ಸಾಕಾಯ್ತು. ಹದ ಇಲ್ಲ ಇವತ್ತು ಬಿತ್ತಬೇಡಿ, ಬಾರೆ ಹೊಲಕೆ ಕಡ್ಲೆ ಗಿಡ ಹಾಕಬೇಡಿ ಬರಲ್ಲಂತ. ನನ್ನ ಒಂದು ಮಾತನ್ನ ಲೆಕ್ಕಕ್ಕೆ ಇಟ್ಟುಕೊಂಡ್ರಾ ಕೇಳು. ಈ ಮನೇಲಿ ನಾನೊಂದು ನಾಯಿ ಆಗಿಬಿಟ್ಟಿದ್ದೀನಿ. ಸುಮ್ಮನೆ ಬೊಗಳೋದು ಅಷ್ಟೆ.

(ಅಷ್ಟರಲ್ಲೇ ಸಣ್ಣಪ್ಪ, ಅವನ ಹೆಂಡತಿ ಹೊಲದಿಂದ ಬರುವರು).

ರಂಗಜ್ಜ : ಏನ್ಲ ಸಣ್ಣಪ್ಪ... ಹೊಲ ಎಲ್ಲ ಬಿತ್ತಿ ಆಯ್ತ?

ಸಣ್ಣಪ್ಪ : ಏ... ಬುಡಜ್ಜ... ಒಂದರ್ಧ ಬಿತ್ತಿದೆ. ಹದಾನೇ ಇಲ್ಲ... ಅಂಗೇ ಕೈ ಬಿಟ್ಟೆ.

ಮುದುಕಪ್ಪ : ಮನೇಗೆ ಹಿರಿಯರ ಮಾತು ಸ್ವಲ್ಪ ಕೇಳಿದ್ರೆ, ಎಲ್ಲದೂ ಒಳ್ಳೆ ದಾಗುತ್ತೆ. ನಾನು ಎಷ್ಟು ಬಡಕೊಂಡೆ ಕೇಳ್‌ತೀರಾ? ಗೊತ್ತಿದ್ರೆ ಮಾಡಬೇಕು. ಇಲ್ಲಾಂದ್ರೆ ಗೊತ್ತಿರೋರತ್ರ ತಿಳುಕೋಬೇಕು.

ಸಂಗೀ : ಅಹಹ... ಸುರುವಾಯ್ತು ವಟ ವಟ... ಹೇಳೋರೆಲ್ಲ ಮಾಡಿದ್ರೆ ಗೊತ್ತಾಗುತ್ತೆ. ನಿಮ್ಮಂತವರು ಇರೋವರೆಗೂ ನಾವೆಲ್ಲಿ ಉದ್ಧಾರ ಆಗ್ತೀವಿ.

ರಂಗಜ್ಜ : ಏನಮ್ಮಿ ಮಾತಾಡ್ತೀಯಾ? ಹಿರಿಯರು, ಕಿರಿಯರು ಅನ್ನೋ ಭಯ ಬ್ಯಾಡ್ವಾ? ಹೋಗಮ್ಮಿ ಒಳಗೆ ಕಂಡಿದೀನಿ... ಏನಲಾ ಸಣ್ಣಪ್ಪ? ಮುಪ್ಪಿನ ಕಾಲದಾಗೆ ಹುಟ್ಟಿಸಿದ ಅಪ್ಪನ್ನ ಇಂಗೆ ನೋಯಿಸಿದ್ರೆ ಖಂಡಿತ ನಿನಗೆ ಒಳ್ಳೇದಾಗುತ್ತೇನ್ಲ.

ಸಣ್ಣಪ್ಪ : ಹೇ... ಹೋಗಯ್ಯಾ ಕಂಡಿದೀನಿ. ನಿಮ್ಮನೇಲೆ ನೂರೆಂಟು ತೂತು. ಮೊದಲು ಅವನ್ನ ಸರಿ ಮಾಡು. ಹೇಳೋಕೆ ಬಂದುಬಿಟ್ಟ. ದಿನಾ ಇದನ್ನೇ ಕೇಳಿ ಕೇಳಿ ನನ್ನ ಜನ್ಮ ರೋಸಿ ಹೋಗೈತೆ. ಯಾವತ್ತು ಈ ಪೀಡೆ ತೊಲುಗುತ್ತವೋ....

ಮುದುಕ : ಹೇ... ಬುದ್ಧಿ ಮಾತು ಹೇಳೋರ್ಗೆ... ತಿರುಗಿ ಮಾತಾಡ್ತೀ ಏನ್ಲ. ನನ್ಮಗನೇ ನಿನ್ನ (ಹೊಡೆಯಲು ಕೈಯೆತ್ತುವನು)

ಸಣ್ಣಪ್ಪ : ಓಹೋಹೋ... ಹೊಡೆಯುವಂತೆ ಸುಮ್ಮನೆ ಬಿದ್ದುಕೋ... (ಕೋಲು ಕಿತ್ತುಕೊಂಡು ನೂಕುವನು, ಮುದುಕಪ್ಪ ಬೀಳುವನು)

(ಹಾಡು)

ಬಾಡಿದಂತ ಬದುಕ ನೋಡಿರೋ । ಕೊನೇಗೆ ಅವರ । ಜೀವವನ್ನು ಹಿಂಡುತಿರುವರೋ

ಕೈ ಸೋತು ಕುಳಿತರಂದ್ರ ಕೀಳಾಗಿ ಕಾಣುತ್ತಾರೆ ॥ಬಾ॥

## ದೃಶ್ಯ ೩

(ಬಸ್ ನಿಲ್ದಾಣ. ಜನರೆಲ್ಲಾ ಕೂಡಿರುವರು. ಮುದುಕಪ್ಪ ಭಿಕ್ಷೆ ಬೇಡುತ್ತಿರುವನು, ಬಸ್ಸಿಗೆ ಹತ್ತುವ ಅವಸರದಲ್ಲಿ ಒಬ್ಬ ಅವನಿಗೆ ಢಿಕ್ಕಿ ಹೊಡೆದು ಕೆಳಗೆ ಬೀಳಿಸುವನು. ಅಲ್ಲಿದ್ದವರೆಲ್ಲ ನಗುತ್ತಾ ಅವನ ಸುತ್ತ ನಿಲ್ಲುವರು)

ಚಂದ್ರಣ್ಣ : (ಬಂದು) ನಿಲ್ಸಿ... ಮುದುಕಪ್ಪ... ಏಳು, ಮೇಲೇಳು ನಿಮಗೆ ಬುದ್ಧಿ ಇದೆಯೇನಯ್ಯಾ? ಒಬ್ಬ ಮನುಷ್ಯ ವಯಸ್ಸಾದವನು ಕೆಳಗೆ ಬಿದ್ರೆ, ಮೇಲೆ ಎತ್ತೋದು ಬಿಟ್ಟು ನಗ್ತಾ ಇದ್ದೀರಲ್ಲ ನೀವೆಲ್ಲ ಮನುಷ್ಯಾರ?

ಒಬ್ಬ : ಮುದುಕ ಆದ ಮೇಲೆ... ಅಚ್ಚುಕಟ್ಟಾಗಿ ಉಂಡು ಮನೇಲೆ ಬಿದ್ದಿರಬೇಕು.

ಎರಡನೆಯವ : ಮನೆ ಊಟ ಇಡಿಸಲ್ಲಾಂತ, ಬಾಯಿರುಚಿ ನೆನಸಿಕೊಂಡು ಪಟ್ನಕ್ಕೆ ಬರ್ತಾರೇನು?

ಮೂರನೆಯವ : ಅಂಗಲ್ಲ ಕಣೋ.... ಹೊಲ ಮನೆ ಮಾರಿ ದಿವಾಳಿಯಾಗಿ ಭಿಕ್ಷೆ ಎತ್ತೋಕೆ ಬಂದವನೆ.

ನಾಲ್ಕನೆಯವ : ಅದಿರ್ಲಿ... ವಯಸ್ಸಾಗಿ, ದುಡಿಯೋಕೆ ಶಕ್ತಿ ಇಲ್ಲದ ಮೇಲೆ ಯಾಕೆ ಬದುಕಬೇಕೂಂತಿನಿ.

ಚಂದ್ರಣ್ಣ : ಸ್ವಾಮಿ ನಿಮ್ಮ ಹೆಸರು ಏನು?

ನಾಲ್ಕನೆಯವ : ತಿಮ್ಮಪ್ಪ ಯಾಕೆ?

ಚಂದ್ರಣ್ಣ : ನಿಮ್ಮ ಅಪ್ಪ ಇದಾರಾ? ವಯಸ್ಸಾಗಿದೆಯಾ?

ನಾಲ್ಕನೆಯವ : ಹೌದು... ವಯಸ್ಸಾಗ್ಯೆತೆ

ಚಂದ್ರಣ್ಣ : ಅವರ್‍ಯಾಕೆ ಬದುಕಬೇಕು ಸಾಯಿಸಿಬಿಡಿ.

ನಾಲ್ಕನೆಯವ : ಯಾಕೆ ಸಾಯಿಸಬೇಕು... ಅವರು ದುಡಿದು ನಮ್ಮನ್ನೆಲ್ಲಾ ಸಾಕಿದ್ದಾರೆ... ಸಾಕಷ್ಟು ಆಸ್ತಿ ಮಾಡಿದ್ದಾರೆ.

ಚಂದ್ರಣ್ಣ : ಹೌದಾ.. ಈ ಮುದುಕಪ್ಪ... ಭಿಕ್ಷುಕ ಅಲ್ಲ, ಪರದೇಶೀನೂ ಅಲ್ಲ, ಚಿಕ್ಕ ವಯಸ್ಸಿಂದ ಒಬ್ಬನೇ ಮಗನಿಗಾಗಿ ದುಡಿದು ದುಡಿದು ಮೈ ಮೂಳೆ ಮುರಕೊಂಡು ಬೇಕಾದ್ದಂಗೆ ಹೊಲ ಮನೆ ಮಾಡಿದ. ಆದರೆ ಮುಪ್ಪಿನ ಕಾಲದಾಗೆ ಅವನ ಮಗನೇ ಕೊಟ್ಟ ಬಹುಮಾನ ಇದು.

(ಎಲ್ಲರೂ ದಂಗು ಬಡೆದಂತಾಗುವರು)

ಎಲ್ಲರೂ : ಇಲ್ಲಾ... ಇಲ್ಲಾ... ಇಲ್ಲಾ...

೧ನೇಯವ : (ವೃತ್ತಾಕಾರ, ಮುದುಕಪ್ಪ, ಚಂದ್ರಣ್ಣ ಮಧ್ಯದಲ್ಲಿರುವವರು) ಮುಪ್ಪಿನ ಕಾಲದಲ್ಲಿ ವೃದ್ಧರಿಗೆ ರಕ್ಷಣೆ ಬೇಕೇ ಬೇಕು.

೨ನೇಯವ : ಅವರಿಗೆ ಔಷಧೋಪಚಾರ ಸರಿಯಾಗಿ ನೋಡಿಕೊಳ್ಳಬೇಕು.

೩ನೇಯವ : ಅವರ ಸಲಹೆಗಳನ್ನು ತಿರಸ್ಕರಿಸಬಾರದು.

೪ನೇಯವ : ವಯಸ್ಸಾದವರಿಗೆ ಮಾನಸಿಕ ಹಿಂಸೆ ಕೊಡಬಾರದು.

೫ನೇಯವ : ವೃದ್ದರನ್ನು ಮಕ್ಕಳಂತೆ ನೋಡಿಕೊಳ್ಳಬೇಕು.

ಘೋಷಣೆ

ಚಂದ್ರಣ್ಣ : (ಮುದುಕಪ್ಪನನ್ನೂ ಮೇಲೆತ್ತುತ್ತ)
ವೃದ್ಧರನ್ನು ಪೋಷಿಸಿ... (೩ನೇ ಬಾರಿ ಘೋಷಣೆ.)

(ಹಾಡು)
ವಯೋವೃದ್ಧರೇ ಬಾಳಿನ ಸಂಪತ್ತು । ಅವರ ।
ಪೋಷಿಸದಿದ್ದರೆ ನಮಗೇ ಆಪತ್ತು
ಇದನು ತಿಳಿಯಿರಣ್ಣ । ಅದರಂತೆ ಬಾಳಿರಣ್ಣ ।



## ಹಳ್ಳಿ ಆರೋಗ್ಯ

*- ಭಾಸ್ಕರ ಆರ್. ಅಮೃತೂರು*

(ಹಾಡು)

ಆರೋಗ್ಯ ಬೇಕಣ್ಣಾ ನಮಗೆ ಆರೋಗ್ಯ ಬೇಕಣ್ಣಾ

ಆರೋಗ್ಯ ಭಾಗ್ಯ ಎಂಬುವ ವಿಷಯ ಮೊದಲು ತಿಳಿಯಣ್ಣಾ ॥

- ಹಾಡು ಮುಗಿಯುತ್ತಿದ್ದಂತೆ

(ತಾಲ್ಲೂಕು ಕೇಂದ್ರದ ಬಸ್ ನಿಲ್ದಾಣ)

ಕಳ್ಳೇಕಾಯಿ ಕಳ್ಳೇಕಾಯಿ....

ಸೌತೇಕಾಯಿ..... ಸೌತೇಕಾಯಿ..... ಪೀಸ್ ಒಂದು ರೂಪಾಯಿ....

ಸೌತೇಕಾಯಿ.... ಸೌತೇಕಾಯಿ....

(ಮಾರಾಟಗಾರರು ಸೊಣ ತುಂಬಿದ ತಮ್ಮ ಪದಾರ್ಥಗಳನ್ನು ಬಸ್‌ಗಳಲ್ಲಿ ಕುಳಿತ ಜನರ ಬಳಿ ಮಾರುತ್ತಾ ಓಡಾಡುತ್ತಾರೆ)

ನಿರ್ವಾಹಕ : ಆ ಯಾರ್ರೀ.... ಕೆಂಪನಹಳ್ಳಿ, ಬೊಮ್ಮನಹಳ್ಳಿ, ತಿಪ್ಪಸಂದ್ರ, ಹತ್ಕೊಳ್ಳಿ..... ಹತ್ಕೊಳ್ಳಿ....

(ಮಾರಾಟಗಾರರು ಮತ್ತು ಇತರೆ ಕಲಾವಿದರು ಬಸ್ (ವಾಹನವಾಗಿ) ಆಗಿ ಮಾರ್ಪಾಡು ಆಗುತ್ತಾರೆ. ಎರಡು ಸಾಲಿನಲ್ಲಿ ನಿಲ್ಲುತ್ತಾರೆ)

ಚಾಲಕ : ಪುವಾವ್... ಪುವಾವ್... (ಶಬ್ದ ಮಾಡುತ್ತಾ ಬಸ್ ಹೊರಡುತ್ತದೆ)

ನಿರ್ವಾಹಕ : ಟಿಕೆಟ್ ಟಿಕೆಟ್... ಎಲ್ಲಿಗಪ್ಪ ನೀವು...

ಪ್ರಯಾಣಿಕ : (ತಮ್ಮ ಊರುಗಳ ಹೆಸರು ಹೇಳುತ್ತಾ ಟಿಕೆಟ್ ಪಡೆಯುತ್ತಾರೆ...)

ನಟ ೧ : ಏಯ್ ಯಾರ್ರೀ ಅದು... ಬೀಡಿ ಆರಿಸ್ರೀ...

ನಟ ೨ : ಯಾರ್ರೀ ಅದು ಬೀಡಿ ಸೇದ್ತಿರೋದು... ಆರಿಸ್ರೀ ಬೀಡೀನಾ...

ನಟ ೩ : ಏನ್ ಜನಾರೀ ಬಸ್‌ನಲ್ಲೂ ಬೀಡಿ ಸೇದೋದಾ?

ನಿರ್ವಾಹಕ : ಟಿಕೆಟ್... ಟಿಕೆಟ್... ಯಾರ್ರೀ... ಟಿಕೆಟ್

ನಟ ೪ : ಒಂದು ಚಿನ್ನಹಳ್ಳಿ ಕೊಡಿ ಸ್ವಾಮಿ

ನಿರ್ವಾಹಕ : ಐವತ್ತು ಪೈಸೆ ಚಿಲ್ರೆ ಕೊಡಿ...

ನಟ ೪ : ಚಿಲ್ರೆ ಇಲ್ಲ ಅಷ್ಟಕ್ಕೇ ಕೊಡಿ ಸ್ವಾಮಿ

ನಿರ್ವಾಹಕ : ಸರಿ ಸರಿ ಚಿನ್ನಹಳ್ಳಿಲೀ ಇಳ್‌ಕೊಳ್ಳೀ...

ನಟ ೪ : ಸ್ವಾಮಿ ಟಿಕೆಟ್!.... ಟಿಕೆಟ್ಟೇ ಕೊಡ್ಲಿಲ್ಲಾ

ನಟ ೧ : ಇನ್ನ ಐವತ್ತು ಪೈಸೆ ಕೊಟ್ಟಿದ್ರೆ ಟಿಕೆಟ್ಟು ಕೊಡ್ತಿದ್ದ ೫೦ ಪೈಸೆ ನೀವ್ ಕೊಡ್ಲಿಲ್ಲಾ ಅದಕ್ಕೆ ಅಂಗೇ ಹೋದಾ... ಇದು ಗಾಂಧೀ ಲೆಕ್ಕ ಬಿಡಿ.

ನಟ ೨ : ಒಂದು ತಿಪ್ಪಸಂದ್ರ ಕೊಡಿ ಸ್ವಾಮಿ.

ನಿರ್ವಾಹಕ : ಏನಯ್ಯಾ ಇದು ಆರು ರೂಪಾಯಿ ಟಿಕೆಟ್‌ಗೆ ನೂರು ರೂಪಾಯಿ ಕೊಡ್ತೀಯಾ? ಚಿಲ್ರೆ ಕೊಡು. ಸರಿಯಾದ್ ಚಿಲ್ರೆ ಕೊಡು.

ನಟ ೨ : ಚಿಲ್ರೆ ಇಲ್ಲ ಸ್ವಾಮಿ....

ನಿರ್ವಾಹಕ : ಟಿಕೆಟ್ ಕೊಡು ಇಲ್ಲಿ. (ಟಿಕೆಟ್ ಹಿಂಬದಿಯಲ್ಲಿ ಚಿಲ್ಲರೆ ಬರೆದು) ಹೂ ತಗೋ. ಟಿಕೆಟ್‌ನಲ್ಲಿ ಬರ್ದಿದ್ದೀನಿ. ಇಳಿವಾಗ ಚಿಲ್ರೆ ಈಸ್ಕೊಳ್ಳಿ. ಟಿಕೆಟ್... ಟಿಕೆಟ್.

(ಬಸ್ ನಿಲ್ಲುತ್ತದೆ)

ನಿರ್ವಾಹಕ : ಯಾರ್ರೀ ಕೆಂಪನಹಳ್ಳಿ.... ಇಳ್‌ಕೊಳ್ಳಿ...

(ಇಬ್ಬರು ಇಳಿಯುತ್ತಾರೆ) ಅವರಲ್ಲಿ ಒಬ್ಬರಿಗೆ ಕಾಯಿಲೆಯಿಂದ ಬಳಲುತ್ತಾ ನಿಧಾನವಾಗಿ ಬಸ್‌ನಿಂದ ಇಳಿಯುತ್ತಾರೆ.

ನಿರ್ವಾಹಕ : ಎಷ್ಟು ಹೊತ್ತು ಇಳಿಯೋದು. ಇಳೀರಿ ಬೇಗ

ನಟ ೬ : ಓಹೋ ಏನ್ ನಂಜಣ್ಣಾ, ಪೇಟೆಗೆ ಹೋಗಿದ್ದಾ?

ನಂಜಣ್ಣ : ಹೌದು ಚಿನ್ನಪ್ಪ ಪೇಟೆಲಿರೋ ಆಸ್ಪತ್ರೆಗೆ ಹೋಗಿದ್ದೆ.

ಚಿನ್ನಪ್ಪ : ಯಾಕೆ ನಿಮ್ಮಣ್ಣನಿಗೆ ಹುಸಾರಿಲ್ವ?

ನಂಜಣ್ಣ : ಇಲ್ಲ ಅದಕ್ಕೆ ಆಸ್ಪತ್ರೆಗೆ ಕರ್‌ಕೊಂಡು ಹೋಗಿದ್ದೆ

ಚಿನ್ನಪ್ಪ : ಬೆಳಿಗ್ಗೆ ಸುಮಾರಾಗಿದ್ದ ನಿಮ್ಮಣ್ಣ

ನಂಜಣ್ಣ : ಹೌದು ಚಿನ್ನಪ್ಪ. ಬೆಳಗ್ಗೆ ನಮ್ಮಣ್ಣ ಮೈಕೈ ನೋವು ಜ್ವರಾ ಬರ್ತಾ ಐತೆ. ಆಸ್ಪತ್ರೆಗೆ ಕರ್‌ಕೊಂಡು ಹೋಗು ಅಂತ ಹೇಳ್ದಾ. ಸರಿ ನಾನು ಬಿಡುವಾಗಿದ್ದೆ. ಸರಿ ಹೋಗ್ ಬರಾನಾ ಅಂತಾ ಈ ಬಸ್‌ಗೆ ಹೋಗಿ ಡಾಕ್ಟ್ರುಗೆ ತೋರ್ಸಿ ಬಸ್‌ನಲ್ಲಿ ಬಂದೆ. ಇನ್ನೂ ಮೈಕೈ ನೋವಾಗಿದೆ.

ನಿರೂಪಕ : ನೋಡುದ್ರಾ ಸ್ವಾಮಿ... ಇಂತಹ ಘಟನೆಗಳು ಈ ಊರಲ್ಲೂ ನಡೆದಿರಬಹುದು. ಜನಗಳು ತಮ್ಮ ಕಾಯಿಲೇನ ವಾಸಿ ಮಾಡ್‌ಕಳ ಕೋಸ್ಕರ ಪೇಟೆಲಿ ಇರೋ ಆಸ್ಪತ್ರೆಗೆ ಹೋಗ್ ಬರ್ತಾರೆ.
ಹೋಗ್ ಬರಾಕೆ ಸಮಯಕೆ ಸರಿಯಾಗಿ ಬಸ್ ಸೌಕರ್ಯ ಇಲ್ಲ. ಅಪ್ಪಿ ತಪ್ಪಿ ಬಸ್ ಬಂದ್ರೆ, ಅದರಲ್ಲಿ ಕಾಲಿಡಕ್ಕೂ ಜಾಗ ಇಲ್ದಂಗೆ ಜನ ತುಂಬಿರ್ತಾರೆ. ಬಸ್ ಮೇಲೆ ಹಿಂದ್‌ಗಡೆ, ಬಾಗಲಲ್ಲಿ ಕಿಟಕೀಲಿ ನೇತಾಡ್ಕೊಂಡು ಹೋಯ್ತಾ ಇರೋ ಬಸ್‌ನಲ್ಲಿ ಕಾಯ್ಲೆ ಬಂದಿರೋ ಮನ್ಸ ಯಂಗ್ ಹೋಗ್ ಬರೋದು? ಇದಕ್ಕೆ ಯಾರ್ ಹೊಣೆ ಸ್ವಲ್ಪ ಯೋಚನೆ ಮಾಡ್ ನೋಡಿ.
ಇರಿ ಇರಿ. ಯಾವ್ದೋ ಬಸ್ ಬರ್ತಾ ಇದೆ. ಇದರಲ್ಲಿ ಏನ್ ನಡೀತಾ ಇದೆ ಸ್ವಲ್ಪ ನೋಡೋಣ.
(ಮತ್ತೆ ನಟರು ವಾಹನವಾಗಿ ಮಾರ್ಪಾಡು ಆಗುತ್ತಾರೆ)
ವಾಹನ ಚಲಿಸುತ್ತಿರುತ್ತದೆ.
(ವಾಹನದೊಳಗಿಂದ ಧ್ವನಿ ಮೂಡಿಬರುತ್ತದೆ)
ಅಮ್ಮಾ ಅಯ್ಯೋ ನೋವು ನೋವು
(ಹೆಣ್ಣು ನೋವಿನಿಂದ ನರಳುತ್ತಾ ಇರುತ್ತಾಳೆ)

ನಟ ೧ : ಯೋ... ಡ್ರೈವರ್ ಸ್ವಲ್ಪ ನಿಧಾನವಾಗಿ ಓಡ್ಸಪ್ಪಾ

ನಟ ೨ : ಯಾವ್ ಸೀಮೆ ಡ್ರೈವರ್ ಇವ್ನು. ಹಳ್ಳ ಕೊಳ್ಳ ಏನೂ ನೋಡಲ್ಲಾ, ಇಂಗೇ ಓಡುಸ್ತಾನೆ.

ಹೆಣ್ಣು : ಅಯ್ಯೋ..... ಅಮ್ಮಾ..... ಹೊಟ್ಟೆನೋವು..... ನೋವು ಅಪ್ಪಾ....

ಜನರು : ಹೇ ಡ್ರೈವರ್ ಓಡ್‌ಸಾಕ್ ಬರ್ತಾದಾ ಇಲ್ಲವಾ. ಆ ಹುಡುಗಿ ಆ ರೀತಿ ಕಿರಚ್‌ಕೊಳ್ತ ಅವ್ಳೆ. ನೀ ನೋಡಿದ್ರೆ ಇಂಗ್ ಎರ್‍ರಾಬಿರ್‍ರಿ ಓಡುಸ್ತಾ ಇದ್ದೀಯಾ? (ಡ್ರೈವರ್ ಮೇಲೆ ಎಲ್ಲರೂ ಜಗಳಕ್ಕೆ ಬೀಳುತ್ತಾರೆ)

ನಿರೂಪಕ : (ಪ್ರವೇಶಿಸಿ) ಸ್ವಲ್ಪ ತಡೀರಿ... ತಡೀರಿ ತಡೀರಿ. ಏನಿದು ಗಲಾಟೆ?

ನಟ : ನೋಡಿ ಸ್ವಾಮಿ ಆ ಹುಡ್ಗಿ ಪಾಪ ಹೊಟ್ಟೆನೋವು ಹೊಟ್ಟೆನೋವು ಅಂತ ಬಡ್ಕೋತಾ ಐತೆ. ಈ ಅಸಾಮಿ ಲೆಕ್ಕವಿಲ್ಲದಂಗೆ ಬಸ್ ಓಡುಸ್ತಾ ಅವ್ನೆ.

ಡ್ರೈವರ್ : ರೀ... ಸ್ವಾಮಿ ನಾನೆಲ್ಲಿ ಜೋರಾಗಿ ಓಡುಸ್ತಾ ಇದ್ದೀನಿ. ಇದಕ್ಕಿಂತ ನಿಧಾನಕ್ಕೆ ಓಡಿಸುದ್ರೆ ನಾನು ೭ ಟ್ರಿಪ್ ಯಂಗ್‌ರೀ ಮುಗಿಸೋದು. ಅದು ಅಲ್ದೆ ಈ ರಸ್ತೆ ಏನ್ ಚೆನ್ನಾಗಿದೆಯಾ?

(ಬಸ್ ನಿಲ್ಲಿಸಿ ನಿರೂಪಕನ ಜೊತೆಯಲ್ಲಿ ರಸ್ತೆಗೆ ಇಳಿಯುತ್ತಾನೆ)

(ಜನರು ಅವನ ಜೊತೆಯಲ್ಲಿ ಇಳಿಯುತ್ತಾರೆ)

ಡ್ರೈವರ್ : ನೋಡಿ ಇಲ್ನೋಂದು ಹಳ್ಳ. ಈ ಹಳ್ಳ ಬಿಟ್ಟು ಇಂಗ್ ಬರನಾ ಅಂದ್ರೆ ಇಲ್ನೊಂದ್ ಹಳ್ಳ. ಈ ರಸ್ತೆ ಉದ್ದಕ್ಕೂ ಬರೀ ಹಳ್ಳಗಳೇ. ಇಂತ ಕಚಡಾ ರಸ್ತೇಲೀ ಹೆಂಗೇ ಬಸ್ ಓಡ್‌ಸೋದು.

ನಿರೂಪಕ : (ಜನರ ಕಡೆ ನೋಡಿ) ನೀನೇಳದು ಸರಿ. ಈ ಡ್ರೈವರ್ ಹೇಳೊದು ಸರಿ. ಈ ರೀತಿ ಕಿತ್ತೋಗಿರೋ ರಸ್ತೇಲೀ ಬಸ್‌ಗಳನ್ನು ಅಲ್ಲಾಡದಂಗೆ ಓಡ್‌ಸೋದು ಬಹಳ ಕಷ್ಟ. ರಸ್ತೆಗಳು ಸರಿ ಇಲ್ದೆ ಇದ್ರೆ ಡ್ರೈವರ್ ಏನ್ ಮಾಡ್ತಾನೆ.

ಹೆಣ್ಣು : ಅಯ್ಯೋ ಅಮ್ಮ ಅಪ್ಪಾ ನೋವು ನೋವು

ನಿರೂಪಕ : ಓಹೋ... ಈ ಹುಡ್ಗಿ ಇಂದ್ಲೇ ತಾನೇ ಜಗಳಾ ಸುರು ಆಗಿದ್ದು. ಏನಮ್ಮಾ ಈ ರೀತಿ ನೋವಿರೋ ನೀನು ಬಸ್ ಯಾಕೆ ಹತ್ತಿದೆ?

ತಾಯಿ : ನನ್ನ ಮಗಳು ಬಸುರಿ ಸ್ವಾಮಿ. ಆಸ್ಪತ್ರೆಗೆ ಸೇರ್ಸಾಕೆ ಕರ್‌ಕಂಡ ಹೋಗ್ತಾ ಅವ್ನಿ.
ಈ ಬಸ್ಸು ದಡ್ಕಾ ದಡ್ಕಾ ಅಂತ ಓಡುಸ್ತಾ ಇರೋದಕ್ಕೆ ನನ್ ಮಗಳಿಗೆ ನೋವು ಜಾಸ್ತಿ ಆಗೈತೆ. ಇಂಗೆ ಸ್ವಲ್ಪ ದೂರ ಹೋದ್ರೆ ಇಲ್ಲೆ ಹೆರಿಗೆ ಆಯ್ತುದೆ ಅಷ್ಟೇ?

ನಿರೂಪಕ : ಹೌದಮ್ಮ ನೀವೇಳದು ನಿಜ. ನೋಡುದ್ರಾ ಸ್ವಾಮಿ ನಮ್ಮ ಹಳ್ಳೀಲಿರೋ ಹೆಣ್ ಮಕ್ಳು. ತಮ್ಮ ಮಕ್ಳುಗೆ ಜನುಮ ನೀಡುವಾಗ ಅನುಭವಿಸೋ ನೋವಿಗಿಂತ ಅದಕ್ಕೆ ಮೊದ್ಲೆ ಎಂತೆಂಥ ನೋವನ್ನು ಅನುಭವಿಸುತ್ತಾ ಇದ್ದಾರೆ.

ನಟ ೪ : ಮೊನ್ನೆ ತಾನೆ ನಮ್ ನಿಂಗಜ್ಜಿ ಮಗಳು ಆಸ್ಪತ್ರೆಗೆ ಹೋಗಾಕೆ ಆಗ್ದೆ ಸರಿಯಾದ ಚಿಕಿತ್ಸೆ ಇಲ್ದೆ ಹೆರಿಗೆ ಆದ ಮೇಲೆ ತೀರೋದ್ಲು.

ನಿರೂಪಕ : ಯಾಕೆ ನಿಮ್ಮಲ್ಲಿ ದಾದಿ ಬರೋದಿಲ್ವಾ

ನಟ ೩ : ನಮ್ಮೂರಿನ ದಾದಿ ಯಾರು ಅಂತ ಗೊತ್ತೇ ಇಲ್ಲಾ, ನಮ್ಮಲ್ಲಿ ಆಕೆ ಬರೋದೂ ಇಲ್ಲ.

ನಿರೂಪಕ : ಹೌದು ಬಂಧುಗಳೇ, ಇದು ಎಲ್ಲಾ ಹಳ್ಳೀಲೂ ನಡೀತಾ ಇರೋ ವಿಷಯಾನೇ. ನಮ್ಮ ಹಳ್ಳಿಲೀ ಯಾರ್ಗಾದ್ರೂ ಕಾಯ್ಲೆ ಬಂದ್ರೆ ಅಥವಾ ಹೆರಿಗೆ ಸಮಯ ಆಗಿದ್ರೆ ಈ ಹಳ್ಳಿಗೇ ದಾದಿಗಳು ಬಂದು ತಿಳುವಳಿಕೆ ನೀಡದೆ ಇರೋದ್ರಿಂದ ನಮ್ಮ ಹಳ್ಳೀಲಿಂದ ಪೇಟೆಗೆ ಹೋಗಾಕೆ ಅಂತ ಬಸ್‌ನಾ ಕಾಯಬೇಕು. ನಮ್ ಅದೃಷ್ಟಕ್ಕೆ ಬಸ್ ಬಂದ್ರೆ, ಅದ್ರಲ್ಲಿ ಬಸುರಿ ಹೆಂಗ್ಸು ಅಂತಾನೋ ಅಥವಾ ಕಾಯಿಲೆ ಬಂದಿರೋ ಜನರು ಬಂದ್ರು ಅಂತ ಯಾರೂ ಸೀಟ್ ಕೊಡೂದ್ ಇರ್ಲಿ ನಿಂತ್‌ಕೊಳ್ಳಾಕೆ ಜಾಗನೂ ಬಿಡಲ್ಲ.
ಇಷ್ಟೆಲ್ಲಾ ಕಷ್ಟಪಟ್ಕಂಡ್ ಪೇಟೇಲಿರೋ ಆಸ್ಪತ್ರೆಗೆ ಬಂದ್ರೆ ಅಲ್ಲಿ ಏನೇನ್ ಕಷ್ಟ ಪಡ್ತಾರೆ ಗೊತ್ತಾ ಸ್ವಾಮಿ. ಬನ್ನಿ ನೋಡಾಣ...
(ಆಸ್ಪತ್ರೆ ದೃಶ್ಯ)

ನಟ ೩ : (ಎದುರಿಗೆ ಬರುವ ದಾದಿಯನ್ನು ಕಂಡು)

ತಾಯಿ : ನನ್ ಮಗ ವಾಂತಿ ಭೇದಿ ಮಾಡ್‌ಕಂಡ್ ಬಾಳಾ ಸುಸ್ತಾಗವ್ನೆ. ಒಸಿ ನೋಡಿ ಔಷ್ದಿ ಕೊಡಿ ತಾಯಿ.

ದಾದಿ : ಡಾಕ್ಟ್ರು ಇನ್ನೂ ಬಂದಿಲ್ಲ.... ಕುಂತ್ಕಳ್ಳಿ ಅಲ್ಲಿ.

ನಟ ೩ : ಡಾಕ್ಟ್ರು ಇನ್ನೂ ಬಂದಿಲ್ವಾ? ಎಷ್ಟು ಹೊತ್ಗೆ ಬರ್ತಾರೆ.

ದಾದಿ : ಬರ್ತಾರೆ. ಕುತ್ಕೊಳ್ಳಿ.... (ರೇಗುವಳು)

ನಟ ೭ : (ಇನ್ನೊಬ್ಬನನ್ನು ಕರೆದುಕೊಂಡು ಬರುವನು) ಡಾಕ್ಟ್ರು ಬಂದ್ರೇನಣ್ಣಾ. (ನಟ ೩ನ್ನು ಕುರಿತು)

ನಟ ೩ : ಇನ್ನೂ ಇಲ್ವಂತೆ ಸ್ವಾಮಿ.

ನಟ ೭ : ಹೋಗ್ಲಿ ನರ್ಸಮ್ಮ ಎಲ್ಲಿ? ಎಲ್ಲೂ ಕಾಣ್ತಾ ಇಲ್ವಲ್ಲ?

ನಟ ೩ : ಈಗ ಹಿಂಗ್ ಹೋದ್ರು ಸ್ವಾಮಿ

ನಟ ೭ : (ದಾದಿಯನ್ನು ಹುಡುಕುವನು) ಎಲ್ಲೋದ್ರು, ಒಬ್ರೂ ಕಾಣ್ತಾ ಇಲ್ವಲ್ಲಾ?...

ನಟ ೨ : (ವಾಂತಿ ಮಾಡಿಕೊಳ್ಳುತ್ತಾನೆ) (ಎಲ್ಲರೂ ಸಂತೈಸುವರು)

ನಟ ೨ : (ಮತ್ತೊಂದು ಸಾರಿ ಭೇದಿಗೆ ತಡಕಾಡುತ್ತಾನೆ)

ನಾನು ಹೋಗ್ಬೇಕು... (ಎಂದು ಕೈ ಮೇಲೆತ್ತಿ ಉಳಿದ ಬೆರಳನ್ನು ಮಡಚಿ ತೋರು ಬೆರಳು ಮತ್ತು ಮಧ್ಯದ ಬೆರಳನ್ನು ನೇರ ಮಾಡಿ ತೋರಿಸುತ್ತಾನೆ.)

ನಟ ೩ : ಬಾ.... ಬಾ .... (ಎಂದು ಆಸ್ಪತ್ರೆಯ ಕಕ್ಕಸು ರೂಮಿನ ಕಡೆಗೆ ಕರೆದು ಕೊಂಡು ಹೋಗುವನು.)

(ಇಬ್ಬರೂ ಕಕ್ಕಸು ರೂಮಿಗೆ ಹೋಗಿ ಮತ್ತೆ ಹೊರಗಡೆ ಬಂದು ಇಬ್ಬರೂ ವಾಂತಿ ಮಾಡುತ್ತಾರೆ)

ನಟ ೩ : ಥೂ ಥೂ ಥೂ ಗಬ್ಬು ವಾಸನೆ. ಎಲ್ಲಾ ಗಲೀಜು ಮಾಡಿ ಇಟ್ಟಿದ್ದಾರೆ. ಆಸ್ಪತ್ರೆ ಕಕ್ಕಸು ರೂಮೆ ಇಷ್ಟೊಂದು ಗಲೀಜು. ಅಬ್ಬಬ್ಬಾ... ವ್ಯಾ.... (ನಟ ೨ ಸುಸ್ತಾಗಿ ಮಲಗಿಕೊಳ್ಳುತ್ತಾನೆ)

(ಆಸ್ಪತ್ರೆ ವಾಚ್‌ಮನ್ ಬೀಡಿ ಸೇದುತ್ತಾ ಬರುತ್ತಾನೆ)

ನಟ ೭ : ಸ್ವಾಮಿ ಡಾಕ್ಟ್ರು ಎಷ್ಟೊತ್ತಿಗೆ ಬರ್ತಾರೆ? ಕಾಯ್ಲೆ ಜಾಸ್ತಿ ಆಗ್ತಾ ಐತೆ.

ವಾಚ್‌ಮನ್ : ಬರ್ತಾರೆ ಸ್ವಲ್ಪ ತಡ್‌ಕ್ಕೊಳ್ರಿ. ತುಮಕೂರಿನಿಂದ ಬರಾದ್ ಬೇಡ್ವಾ. ಬಸ್‌ನಿಂದ ಬರೋದು ಸ್ವಲ್ಪ ತಡ ಆಯ್ತದೆ. (ಬೀಡಿ ಸೇದುತ್ತಾ ಹೋಗುವನು)

ನಿರೂಪಕ : ಇದು ಪೇಟೆಲಿರೋ ಆಸ್ಪತ್ರೆ. ನೋಡಿ ಬನ್ನಿ ಒಳಗಡೆ ಹೋಗಿ ನೋಡಾನ ಏನ್ ನಡೀತಾ ಐತೆ ಅಂತ.

ನಿರೂಪಕ : (ನಟ ೩ನ್ನು ನೋಡಿ) ಏನ್ ಸ್ವಾಮಿ.... ವಾಂತಿ ಮಾಡ್ತಾ ಇದ್ದೀರಾ? ನಿಮಗೆ ವಾಂತಿ ಕಾಯಿಲೆನಾ?

ನಟ ೩ : ಇಲ್ಲಾ ಸ್ವಾಮಿ ಇಲ್ಲಾ ನನ್ ಮಗನಿಗೆ ವಾಂತಿ-ಭೇದಿ. ಭೇದಿ ಆಯ್ತದೆ ಅಂದ ಅದಕ್ಕೆ ಕಕ್ಕಸು ರೂಮಿಗೆ ಕರ್‌ಕಂಡ್ ಹೋದೆ. ಅಲ್ಲಿರೋ ಗಲೀಜು ನೋಡಿ ನನಗೂ ವಾಂತಿ ಆಯ್ತು.

ನಿರೂಪಕ : ಓಹೋ ಇಂಗೋ ಸಮಾಚಾರ.... ಅಂದ್ರೆ ಆಸ್ಪತ್ರೆ ಕ್ಲೀನ್ ಇಲ್ಲ. ಇಲ್ ಬರೋ ರೋಗಿಗಳು ಈ ವಾಸ್ನೆ ಇಂದ ಸ್ವಚ್ಛವಾಗಿ ಇಲ್ದೇ ಇರೋದ್ರಿಂದ ಇಲ್ಲೇನಾದ್ರೂ ಅಡ್ಮಿಟ್ ಆದ್ರೆ, ಕಾಯ್ಲೆ ಇನ್ನೂ ಜಾಸ್ತಿ ಆಯ್ತದೆ. ಇದನ್ಯಾರೂ ಕೇಳೋರಿಲ್ವೇ?

ಹ್ಞೂ.... ಎಂಗೋ ಹಣೆಬರಾ ಇದ್ದಂಗೆ

(ನಟ ೩ ಮತ್ತು ಅನ್ನು ನೋಡುತ್ತಾ ಹೇಳುತ್ತಾನೆ.) ಅಪ್ಪರಿ ಇನ್ನೂ ಇಲ್ಲೇ ಯಾಕ್ ಇದ್ದೀರಾ? ಡಾಕ್ಟ್ರು ಅತ್ರ ಕರ್‌ಕಂಡ್ ಹೋಗಿ.

ನಟ ೩ : ಡಾಕ್ಟ್ರು ಇನ್ನೂ ಬಂದಿಲ್ಲ ಸ್ವಾಮಿ, ಏನ್ ಮಾಡೋದು?

ನಿರೂಪಕ : ಎಲ್ ಹೋಗವ್ರೇ?... ಎಲ್ಲಿಂದ ಬರಬೇಕು?

ನಟ ೭ : ತಮಕೂರಿನಿಂದ ಬಸ್‌ನಲ್ಲಿ ಬರಬೇಕಂತೆ. ಅದ್ಕೆ ಕಾಯ್ತಾ ಇದ್ದೀವಿ.

ನಿರೂಪಕ : ಇದು ತುಂಬಾ ಅನ್ಯಾಯ. ಡಾಕ್ಟ್ರು ಏನೇ ಇದ್ರೂ ಕೇಂದ್ರ ಸ್ಥಾನದಲ್ಲಿ ಇರಬೇಕು? ಡಾಕ್ಟ್ರು ಇಲ್ದೇ ರೋಗಿಗಳು ಬರೋವರ್ಗೂ ಕಾಯಕಾಗ್ತದೇನು?

ನಟ ೩ : ಅಲ್ಲಾ ಸ್ವಾಮಿ ಡಾಕ್ಟ್ರು ಬರೋವರ್ಗೂ ಈ ನರ್ಸಮ್ಮ ತನಗೆ ತಿಳಿದಂಗೆ ಔಷಧಿ ಕೊಟ್ಟು ಇರಬಹುದಲ್ವಾ?

ನಿರೂಪಕ : ಹೌದೌದು. ನರ್ಸ್‌ಗಳು ರೋಗಿ ಬಂದ ತಕ್ಷಣ ಕಾಯ್ಲೆ ಏನು ಅಂತ ವಿಚಾರಿಸಿ ಪ್ರಥಮ ಚಿಕಿತ್ಸೆ ನೀಡಬಹುದು. ಇಷ್ಟಾದ್ರೂ ಮಾಡಿದ್ರೆ, ಒಳ್ಳೆದಲ್ವಾ ಸ್ವಾಮಿ. (ಜನರಿಗೆ ಹೇಳುತ್ತಾ)

ನಟ ೭ : ಒಂದೊಂದು ಕಡೆ ಈ ರೀತಿ ನೋಡಿದ್ರೂ ಔಷಧಿ ಕೊಡೋ ವಿಚಾರದಲ್ಲಿ ಆ ಮಾತ್ರೆ ಇಲ್ಲ, ಈ ಔಷಧಿ ಇಲ್ಲ ಅಂತ ಹೇಳಿ ಅಂಗಡೀಲಿ ತಗಳ್ಳಿ ಅಂತಾರೆ.

ನಿರೂಪಕ : ಅದು ಸರಿನೇ ಸರ್ಕಾರಿ ಆಸ್ಪತ್ರೇಲಿ ಕನಿಷ್ಠ ಸೌಲಭ್ಯ ಇದೆ. ಇರಲೇಬೇಕು. ಹತ್ತಿ, ಟಿಂಚರ್ರು, ಸಣ್ಣ ಪುಟ್ಟ ಕಾಯ್ಲೆಗೂ ಕೂಡಾ ಔಷ್ಧಿ, ಮಾತ್ರೆ ಇಂತದ್ದೆಲ್ಲಾ ಇರಬೇಕು. ಇದಕ್ಕಾಗಿ ಸರ್ಕಾರ ಹಣ ಖರ್ಚು ಮಾಡ್ತಾ ಐತೆ. ಆದ್ರೆ, ಇಲ್ಲಿ ಅದು ಸರಿಯಾಗಿ ಸಿಗ್ತಾ ಇಲ್ಲ.

ನೀವೇನೆ ಹೇಳಿ ಸ್ವಾಮಿ. ಇದ್ರಲ್ಲಿ ನಮ್ ಜನಗಳದೂ ತಪ್ಪೈ.

ಕಾಯ್ಲೆ ಬಂದಾಗ ಇಂಥ ಸರ್ಕಾರದ ಅವ್ಯವಸ್ಥೆನಲ್ಲಿ ನರಳಕ್ಕಿಂತ ಕಾಯ್ಲೆ ಹೆಂಗ್ ಬರ್ತಾದೆ? ಯಾಕ್ ಬಂತು? ಅಂತ ಯೋಚಿಸ್ತೀವಾ. ಇಲ್ಲಾ ಹೋಗ್ಲಿ ಔಷ್ಧಿ ಕೊಡೋ ಡಾಕ್ಟ್ರು ಕಾಯ್ಲೆ ಬಂದದಕ್ಕೆ ಔಷ್ಧಿ ಕೊಟ್ಟು ಕಳುಸ್ತಾರೆ ಓರ್ತು, ಈ ಕಾಯ್ಲೆ ಹೆಂಗ್ ಬಂತು, ಬರ್ದಂಗೆ ನೀವು ಹೆಂಗ್ ನೋಡ್ಕೊಬೇಕು ಅಂತ ಹೇಳ್ತಾರಾ? ಇಲ್ಲಾ ನಮ್ಮ ನಾಡಿನಲ್ಲಿರೋ ಹೆಚ್ಚಿನ ಡಾಕ್ಟ್ರು ಇಂತ ವಿಷಯಾನ ಜನಗಳಿಗೆ ಹೇಳೋದೇ ಇಲ್ಲ.

ಇದರ ಬಗ್ಗೆ ನಾವೆಲ್ಲ ಸ್ವಲ್ಪ ಯೋಚನೇ ಮಾಡ್‌ಬೇಕಾಗ್ತದೆ. ನೋಡಿ.... ಇವನಿಗೆ ವಾಂತಿ-ಭೇದಿ ಇದ್ರಿಂದ ಮಲೇರಿಯಾ ಕಾಯಿಲೆ, ಈತನಿಗೆ ಹೆಂಗ್ ಈ ಕಾಯ್ಲೆ ಬಂತು. ಬನ್ನಿ ಇವನ ಹಳ್ಳಿ ಹೆಂಗೈತೆ ನೋಡಾಣ.

(ಹಳ್ಳಿ ದೃಶ್ಯ)

(ಒಂದು ಕಡೆಯ ಕೆರೆ ಕಟ್ಟೆಯಲ್ಲಿ ದನ ತೊಳೆಯುತ್ತಿರುತ್ತಾರೆ, ಬಟ್ಟೆ ಒಗೆಯುತ್ತಿರುತ್ತಾರೆ, ಇನ್ನೊಬ್ಬಳು ಪಾತ್ರೆಗಳನ್ನು ತೊಳೆಯುತ್ತಿರುತ್ತಾಳೆ)

ನಿರೂಪಕ : ಅಬ್ಬಾ ಅಬ್ಬಾ ಏನ್ರೀ ಇದು ಸೊಳ್ಳೆಗಳು.... ಇದ್ಕೆ ಇದ್ಕೇ ಕಾಯ್ಲೆ ಬರಾದು.

ನೋಡಿ ಇಲ್ಲಿ ಮನೆ ಪಕ್ಕದಲ್ಲೇ ತಿಪ್ಪೆ, ರಸ್ತೆ ಪಕ್ಕದಲ್ಲೇ ಇನ್ನೊಂದು ತಿಪ್ಪೆಗುಂಡಿ. ಹೋದ್‌ವಾರ ಮಳೆ ಬಂದು ತಿಪ್ಪೆ ಗುಂಡಿಗೆಲ್ಲಾ ನೀರು ತುಂಬ್‌ಕೊಂಡು ಸೊಳ್ಳೆ ಇಪಾಟೀ ಆಗವೇ.

ಬನ್ನಿ ಬನ್ನಿ ಇನ್ನೂ ಸ್ವಲ್ಪ ಮುಂದೆ ಹೋಗಾನ...

ನಟ ೧ : ಅಲ್ಲಿ ಹೋಗ್ಬೇಡಿ ಸ್ವಾಮಿ ಅಲ್ಲಿ ಗಲೀಜು ಜಾಸ್ತಿ.

ನಿರೂಪಕ : ಅದೇ ರೀ ಬನ್ರೀ ನೋಡಾನ. ಏನ್ ಗಲೀಜು ಅಂತ. ರಸ್ತೆ ಪಕ್ಕದಲ್ಲೆನ್ ಗಲೀಜು ಆಗೈತೆ ನೋಡಾಣಾ ಬನ್ನಿ....

ನಟ ೧ : ಅದೇ ಸ್ವಾಮಿ ಇಲ್ಲೆಲ್ಲಾ ಕಕ್ಕಸು ಮಾಡವ್ರೇ ಹೆಂಗಸ್ರು.

ನಿರೂಪಕ : ಅಲ್ಲಾ ರೀ ಹೆಂಗಸ್ರು ರಸ್ತೆ ಪಕ್ಕದಲ್ಲೇ ಕಕ್ಕಸ್ಸು ಮಾಡ್ತಾರಾ. ನಾಚಿಗೆ ಗೀಚಿಕೆ ಆಗಲ್ವಾ ಅವರ್ಗೆ.

ನಟ ೮ : ಹೇ.... ಇಲ್ಲಾ ಸ್ವಾಮಿ ಬೆಳಿಗ್ಗೆ ಹೊತ್ತು ಯಾರೂ ಹೋಗಲ್ಲ. ಈ ಹೆಂಗಸ್ರು ರಾತ್ರೆ ಹೊತ್ತು ಮಾತ್ರ ಇಲ್ಲಿ ಓಯ್ತಾರೆ.

ನಿರೂಪಕ : ಬೆಳಿಗ್ಗೆ ಹೊತ್ತು ಹೋಗ್‌ಬೇಕಾದ್ರೆ?

ನಟ ೧ : ಇಲ್ಲಾ ಸ್ವಾಮಿ ಎಲ್ರೂ ರಾತ್ರೆ ಹೊತ್ತು ರೂಢಿ ಮಾಡ್‌ಕಂಡವ್ರೇ.

ನಿರೂಪಕ : ಎಂಥ ವಿಚಿತ್ರ ಪರಿಸ್ಥಿತೀನಪ್ಪಾ ಇದು. ಅಲ್ಲಾ ರೀ ಸರ್ಕಾರದವ್ರು ಕಕ್ಕಸ್ ಮನೆ ಕಟ್ಟಡಕ್ಕೆ ದುಡ್ಡು ಕೊಡ್ತಾರಲ್ರೀ. ಆ ದುಡ್ಡಿನಿಂದ ಮನೆಗೊಂದು ಕಕ್ಕಸುಮನೆ ಕಟ್‌ಕಳಕ್ಕಾಗಲ್ವಾ?

ನಟ ೭ : ಆದ್ರಲ್ಲೂ ಮೋಸ ಸ್ವಾಮಿ.... ಸರ್ಕಾರದವ್ರೇನೋ ಹಣ ಸಾಂಕ್ಷನ್ ಮಾಡ್‌ಬಹುದು. ಆದ್ರೆ ಅದು ನಮ್ ಕೈ ಸೇರಬೇಕಾದ್ರೆ ಯಾರ್ ಯಾರ್ ಕೈನೋ ಬಿಸಿ ಮಾಡ್‌ಬೇಕು?

ನಿರೂಪಕ : ನೀವೇನೇ ಹೇಳಿ ಪಾಪ ನಮ್ ಹೆಣ್ ಮಕ್ಳು ಬೆಳಿಗ್ಗೆ ಹೊತ್ತು ಎಲ್ಲೂ ಹೋಗ್ದಂಗೆ ನಡ್‌ಕಂಡ್ ರಾತ್ರೆ ಹೊತ್ತೇ ಅದೂ ಕತ್ಲೇಲೇ ಹೋಗ್ತಾ, ಅದ್ರಲ್ಲೂ ರಸ್ತೆ ಪಕ್ಕದಲ್ಲೇ ಹೋಗೂ ಅಂತ ವ್ಯವಸ್ಥೆ ಆಗೈತೆ.
ಇದ್ಕೆ ಸ್ವಾಮಿ ನಮಗೆಲ್ಲಾ ಕಾಯ್ಲೆ ಬರೋದು.
ನೋಡಿ ಈ ಕೆರೇಲಿ ದನ ತೊಳೀತೀರಾ. ಬಟ್ಟೆ ಒಗೀತೀರಾ. ಪಾತ್ರೆ ಸಾಮಾನು ಬೆಳಗುತ್ತೀರಾ. ಅದೇ ಪಾತ್ರೆಗಳನ್ನು ಅಡಿಗೆಗೆ ಉಪಯೋಗಿಸಿ ಮಾಡಿದ ಅಡಿಗೆ ತಿಂತೀರಾ. ಮತ್ತೆ ಈ ತಿಪ್ಪೆಗುಂಡಿ ನೋಡಿ. ಮಳೆ ನೀರು ಬಂದು ಸೊಳ್ಳೆ ಹೆಂಗೆ ಬಂದಾವೆ. ಈ ಸೊಳ್ಳೆ ಯಿಂದ ವಾಂತಿ ಭೇದಿ ಬಂದು ಮಲೇರಿಯಾ ಕಾಯ್ಲೆ ಬಂದು ನಿಮ್ಮೂರಿನ ರಾಜಪ್ಪ ಆಸ್ಪತ್ರೆ ಸೇರಿರೋದು.

ನಟ ೭ : ನೀವೇಳಾದೂ ಚೆನ್ನಾಗೈತೆ ಸ್ವಾಮಿ. ಅಲ್ಲಾ ಕಸಾನ ತಿಪ್ಪೇಗುಂಡಿಗೆ ಆಕ್ದೆ ಇನ್ನೆಲ್ಲಿ ಆಕಕಾಗ್ತದೆ. ದನಕರಾನ ಇನ್ನೆಲ್ಲಿ ತೊಳೆಯಕಾಗ್ತದೆ? ನಮ್ ಹೆಂಗ್ಸು ಮಕ್ಳು ಎಲ್ ಕಕ್ಕಸ್ಗೆ ಹೋಗ್ತಾರೆ?

ನಟ ೧ : ನಮ್ಮಳ್ಳಿಲೀ ಹಿಂದ್ಲಿಂದ್ಲೂ ಹಿಂಗೆ ಅಲ್ವಾ ನಡ್‌ಕೊಂಡ್ ಬಂದಿರಾದು....
ನಾವ್ ಅಂಗೆ ನಡ್ಕೊಂಡು ಬರ್ತಾ ಇದ್ದವೀ.

ನಿರೂಪಕ : ಹಿಂದ್ನೋರು ಹಿಂಗೆ ಇದ್ರೂ ನಿಜ. ಆದ್ರೆ ನಾವು ಇಂಗೇ ಇರಬೇಕು ಅಂತ ಏನೂ ಇಲ್ವಲ್ಲಾ. ಇದುಕ್ಕೂ ಒಂದು ಪರಿಹಾರ ಇದೆ ಸ್ವಾಮಿ. ಇದ್ರ ಬಗ್ಗೆ ಪಂಚಾಯ್ತಿಯವ್ರು ಗಮನ ಹರಿಸ್‌ಬೇಕಿತ್ತು.

ಅಪ್ರುವ್ರಲ್ಲೇ ಕಿತ್ತಾಟ ನಡೀತಿರೋದ್ರಿಂದ ಇದರ ಕಡೆ ಗಮನ ಹೆಂಗ್ ಹರಿಸ್ತಾರೆ.

ನಟ ೭ : ನಮ್ ಜನನೂ ಅಂಗೇ ಅವ್ರೇ ಹೇಳಿ ಸ್ವಾಮಿ. ಅವ್ರು ಕಡಿಕೂ ಇರ್ತಾರೆ. ಇವ್ರು ಕಡೀಕೂ ಇರ್ತಾರೆ.

ನಿರೂಪಕ : ಈ ಹಳ್ಳಿ ರಾಜಕೀಯ ಎಲ್ರಿಗೂ ಗೊತ್ತು ಬಿಡಿ ಸ್ವಾಮಿ. ಗೊತ್ತಿದ್ದೂ ಗೊತ್ತಿದ್ದೂ ನಮ್ ಜನ ಸುಮ್ನೆ ಇರ್ತಾರೆ. ಈ ರಾಜಕೀಯದ ಬಗ್ಗೆ ಮಾತ್ ಆಡ್ಬೇಕು ಅಂದ್ರೆ ಒಂದಿ ದಿನಾ ಸಾಕಾಗೋದಿಲ್ಲಾ ಹ್ಞೂಂ ಅದು ಬಿಡಿ. ನಮ್ಮ ಆರೋಗ್ಯದ ಬಗ್ಗೆ ಬಂದಿರೋ ಗಂಡಾಂತರದ ಬಗ್ಗೆ ವಿಚಾರ ಮಾಡೋಣ.

ನಟ ೧ : ಹೌದೌದು.... ಸ್ವಾಮೀ.... ಆವಾಗ್ಲೇ ನೀವು ಇದಕ್ಕೂ ಒಂದ್ ಪರಿಹಾರ ಇದೆ ಅಂದ್ರಲ್ಲ ಅದೆಂಗೆ ಸ್ವಾಮಿ.

ನಿರೂಪಕ : ಪರಿಹಾರ ಅಂದ್ರೆ.....
ಈಗ ನೋಡಪ್ಪ ತಿಪ್ಪೇಗುಂಡೀನಾ ಯಾಕ್ ಮಾಡ್‌ಕಂಡೆ?

ನಟ ೧ : ತಿಪ್ಪೆ.. ಕಸಕಡ್ಡೀನೆಲ್ಲಾ ಅದ್ರಲ್ಲಿ ಹಾಕಕೇ. ಆಮೇಲೆ ಹೊಲಕ್ಕೆ ಅದನ್ನೆಲ್ಲ ಹಾಕೋದಕೆ ಅಂತ ತಿಪ್ಪೆಗುಂಡೀನಾ ಮಾಡ್‌ಕಂಡ್ ಇದ್ದೀವಿ.

ನಿರೂಪಕ : ಸರಿಯಾಗ್ ಹೇಳ್ದೆ ನೋಡು.
ಇದರ ಉದ್ದೇಶ ಸರಿ. ಅದನ್ನೇ ಮನೆ ಪಕ್ಕದಲ್ಲೇ ತಿಪ್ಪೆಗುಂಡಿ ಮಾಡ್ಕೊಳ್ಳೋ ಬದ್ಲು ಸ್ವಲ್ಪ ದೂರದಲ್ಲಿ ಅಥವಾ ನಿನ್ನ ಹೊಲದ ಹತ್ರನಾ ತಿಪ್ಪೇ ಗುಂಡಿ ಮಾಡ್ಕೋ.

ನಟ ೭ : ಅಲ್ಲೂ ಸೊಳ್ಳೆಗಳು ಬರ್ತಾವಲ್ಲಾ ಬುದ್ದೀ....

ನಿರೂಪಕ : ಅದ್ಕೆ ಗುಂಡೀನಾ ಸ್ವಲ್ಪ ಆಳವಾಗಿ ತೋಡಬೇಕು. ಗುಂಡಿ ಸುತ್ತಲೂ ನೀರು ಒಳ್ಗೆ ಹೋಗದಂಗೆ ದಿಬ್ಬ ಮಾಡಬೇಕು. ಆಮೇಲ್ ಮಣ್ಣನ್ನ ಮೇಲೆ ಎರಚಬೇಕು.
ಈ ರೀತಿ ಮಾಡೋದ್ರಿಂದ ಎರಡು ತರದ ಲಾಭ ಇದೆ.

ನಟ ೧ : ಎರಡು ತರದ ಲಾಭ. ಅದೇನ್ ಸ್ವಾಮಿ ಅದು.

ನಿರೂಪಕ : ಮೊದಲನೆಯದು ಈ ರೀತಿ ಮಾಡೋದ್ರಿಂದ ಸೊಳ್ಳೆಗಳು ಕಡಿಮೆ

ಆಗಿ ರೋಗ ರುಜಿನಗಳು ಬರದಂತೆ ಕಾಪಾಡ್‌ಕೊಳ್ಳೋದು. ಮತ್ತೆ... ಈ ರೀತಿ ಆಸ್ಪತ್ರೆಗೆ ಅಲಿಯೋದು ತಪ್ಪುತ್ತೆ.

ಇನ್ನ ಎರಡನೇ ಲಾಭ ಏನಪ್ಪಾ ಅಂದ್ರೆ ನೀನು ಯಾವ ಉದ್ದೇಶಕ್ಕೆ ರಸ್ತೆ ಪಕ್ಕದಲ್ಲೇ ಗುಂಡೀನಾ ಮಾಡ್ತೇ. ಹೊಲಕ್ಕೆ ಗೊಬ್ಬರ ಆಗ್ಲಿ ಅಂತ ತಿಪ್ಪೆ ಕಸ ಸೊಪ್ಪು ಎಲ್ಲಾ ಆಕ್ತಿದ್ದೋ ಅದಕ್ಕೆ ಮಳೆ ಬಂದಾಗ ನೀರು ಹೆಚ್ಚಾಗಿ ಆ ಗೊಬ್ಬರದಲ್ಲಿರೋ ಸಾರ ಎಲ್ಲಾ ಹರಿದೂ ವೇಸ್ಟ್ ಆಗುತ್ತೆ. ಮತ್ತೆ ಎಲ್ಲಾ ಕಡೀಕ ಕೊಳಕು ಜಾಸ್ತಿ ಆಗುತ್ತೆ. ಗುಂಡಿ ತೋಡಿ ತಿಪ್ಪೆ ಕಸ ಹಾಕಿ ಮಣ್ಣು ಮುಚ್ತಾ ಇದ್ರೆ ಈ ಗೊಬ್ರಾನೂ ಹೊಲಕ್ಕೂ ಗದ್ದೆಗೂ ಸೀಮೆ ಗೊಬ್ಬರದ ಬದ್ಲಿಗೆ ಆಕಿದ್ರೆ ಮಣ್ಣು ಹಸನಾಗಿ ಫಲವತ್ತಾಗಿರ್ತದೆ. ಬೆಳೇನೂ ಇಳುವರಿನೂ ಚೆನ್ನಾಗಾಯ್ತದೆ.

ಈ ರೀತೀಲಿ ವಾಸ ಮಾಡೋ ಮನೆಯಿಂದ ಸ್ವಲ್ಪ ದೂರದಲ್ಲಿ ಗುಂಡಿ ತೋಡಿ ಹೆಚ್ಚಿಗೆ ನೀರು ಒಳ ಹೋಗ್‌ದಂಗೆ ಮಣ್ಣಿನ ದಿಬ್ಬ ಜಾಸ್ತಿ ಮಾಡಿ ತಿಪ್ಪೆ ಮೇಲೆ ಮಣ್ಣು ಆಕ್ತಾ ಇದ್ರೆ ಯಾವ ಕಾಯ್ಲೆನೂ ಬರೋಲ್ಲಾ... ಒಳ್ಳೆ ಗೊಬ್ಬರಾ ಆಯ್ತದೆ.

ನಟ ೨ : ಮತ್ತೆ ಸ್ವಾಮಿ ಕಕ್ಕಸು ಮನೆ ಇಲ್ವಲ್ಲಾ ಅದಕ್ಕೇನೂ ಮಾಡೋದು.

ನಿರೂಪಕ : ಇದುನೂ ಅಷ್ಟೇ ಪಂಚಾಯ್ತಿಯಿಂದ ಕೊಡ್ತಾ ಇರೋ ಸಾಲ ಸೌಲಭ್ಯದ ಬಗ್ಗೆ ಸರಿಯಾಗಿ ತಿಳ್ಕೊಂಡು ಸರಿಯಾದ ರೀತೀಲಿ ಪಡ್ದು ಕಕ್ಕಸು ಮನೆ ಕಟ್ಕೋಬೇಕು. ಇಲ್ದೇ ಇದ್ರೇ ಐದಾರು ಮನೆಯವ್ರು ಸೇರ್‌ಕಂಡು ತಾವೇ ಹಣ ಹಾಕಿ ಒಂದು ಕಕ್ಕಸು ಮನೆ ಕಟ್ಕಂಡು ಹೆಣ್ ಮಕ್ಳದ್ರೂ ಅಲ್ಲಿ ಹೊಗಂಗೆ ಮಾಡಿ ಹೆಣ್ ಮಕ್ಳ ಮರ್ಯಾದೆ ಕಾಪಾಡ್‌ಬೇಕು.

ಇನ್ನ ಕೆರೆ ಕಟ್ಟೇಲೀ ದನ ತೊಳೆಯೋದು, ಬಟ್ಟೆ ಬಗೆಯೋದನ್ನ ಹೆಂಗ್ ಮಾಡ್‌ಬೇಕು ಅಂದ್ರೆ ಬಕೆಟ್‌ನಲ್ಲಿ ತೋಡ್‌ಕಂಡು ಸ್ವಲ್ಪ ದೂರದಲ್ಲಿ ದನ ತೊಳೆಯೋದು, ಬಟ್ಟೆ ಒಗೆಯಾದು ಪಾತ್ರೆ ತೊಳೆಯೋದನ್ನು ಮಾಡ್‌ಬೇಕು.

ನಟ ೧ : ಸ್ವಾಮಿ... ಸ್ವಾಮಿ.... ಇನ್ನು ಮುಂದೆ ನಿವೇಳ್ದಂಗೆ ಮಾಡೋದಕ್ಕೆ ಪ್ರಯತ್ನ ಪಡ್ತೀವಿ.

ಆ ಆಸ್ಪತ್ರೇಲೀ ಇರೋರ್‌ಗತಿ ಏನಾಗ್ಯೆತೆ ನೋಡಾಣ ಬನ್ನಿ....

(ಮತ್ತೆ ಆಸ್ಪತ್ರೆ ದೃಶ್ಯ)

ನಟ ೩,೪ : (ರೋಗಿ ಹೆಚ್ಚು ನರಳುತ್ತಿರುತ್ತಾನೆ, ನಟ ೩ ಅಳುತ್ತಿರುತ್ತಾನೆ)

ನಿರೂಪಕ : (ಗುಂಪಿನಲ್ಲಿ ಕೂಡಿಕೊಂಡವರನ್ನು ಉದ್ದೇಶಿಸಿ)
ಏನ್ರಪ್ಪಾ, ಡಾಕ್ಟ್ರು ಬಂದು ನೋಡುದ್ರಾ?

ನಟ ೩ : ಇನ್ನೂ ಡಾಕ್ಟ್ರೇ ಬಂದಿಲ್ಲಾ ಸ್ವಾಮಿ. ನನ್ ಮಗ ಉಳಿಯೋದಿಲ್ಲಾ. ಆಗ್ಲೋ ಈಗ್ಲೋ ಅನ್ನಂಗವ್ನೇ. ಇಂಗೆ ಆಯ್ತದೇ ಅಂತ ಗೊತ್ತಿದ್ರೆ ದೊಡ್ಡಾಸ್ಪತ್ರೆಗಾದ್ರೂ ಕರ್‌ಕಂಡು ಹೋಯ್ತಿದ್ದೆ. (ಅಳುವನು).

ನಿರೂಪಕ : ನೋಡುದ್ರಾ ಮಹಾಜನಗಳೇ ಒಂದು ಕಡೆ ಈ ನಮ್ ಜನರಿಗೇ ಇಂಥ ಕಾಯಿಲೆಗಳು ಬರ್ದಂಗೆ ಹೇಗೆ ಇರಬೇಕು ಅಂತ ತಿಳಿಸೋದ್ರ ಬಗ್ಗೆ ಈ ನಮ್ ಆಸ್ಪತ್ರೆಯೋರು ಸರಿಯಾದಂತ ಕಾರ್ಯಕ್ರಮ ಹಾಕೋದಿಲ್ಲ. ಅದಕ್ಕಿಂತ ಮುಖ್ಯವಾಗಿ ಹಳ್ಳಿಯಿಂದ ಇಲ್ಲಿವರ್ಗೂ ಬರೋ ಬದ್ಲು ನಮ್ಮ ಹಳ್ಳೀಲೇ ಸಣ್ಣದೊಂದು ಪ್ರಾಥಮಿಕ ಘಟಕ ಸರಿಯಾದ ರೀತೀಲಿ ಕೆಲ್ಸ ಮಾಡೋ ಅಂಗೆ ಸರ್ಕಾರನೂ ನಿಗಾ ವಹಿಸೋದಿಲ್ಲ.

ವಾಚ್‌ಮನ್ : ಹೇ ಡಾಕ್ಟ್ರು ಬಂದ್ರು ದಾರಿ ಬುಡಿ.... ದಾರಿ ಬುಡಿ....
(ರೋಗಿಯ ಕಡೆಯವರು ಜೋರಾಗಿ ಅಳುತ್ತಾರೆ)

ನಟ ೩ : ಡಾಕ್ಟ್ರೇ ಡಾಕ್ಟ್ರೇ ನನ್ ಮಗನ್ನ ಉಳಿಸ್ರೀ.... (ಅಳುವನು)

ಡಾಕ್ಟರ್ : ಆ ರೂಂನಲ್ಲಿ ಮಲಗ್ಸಿ್ರೀ. ಒಂದೈದು ನಿಮಿಷ ಬರ್ತಿನಿ....
(ನಟರು ರೋಗಿಯನ್ನು ಎತ್ತಿಕೊಂಡು ಕೊಠಡಿಗೆ ಹೋಗುವರು)

ನಿರೂಪಕ : ಕೊನೆಗೂ ಡಾಕ್ಟ್ರು ಬಂದ್ರು. ಅದ್ರೂ ಇವ್ರು ಇದೇ ಊರಲ್ಲಿ ಇರೋ ಅಂಗೆ ಇವ್ರಿಗೆ ಯಾರ್ ಕೇಳ್‌ಬೇಕು? ಮತ್ತೆ ಈ ಡಾಕ್ಟ್ರು ಆ ಔಷಧಿ ಇಲ್ಲ ಈ ಔಷಧಿ ಇಲ್ಲ ಅನ್ನೋದು ಸಹಜ. ಸರ್ಕಾರ ಕನಿಷ್ಟ ಔಷಧಿ ಸೌಲಭ್ಯಕ್ಕಾಗಿ ಹಣ ಖರ್ಚು ಮಾಡುತ್ತೆ. ಆದ್ರೆ ಅದರ ಉಪಯೋಗ ಎಷ್ಟರಮಟ್ಟಿಗೆ ನಮ್ಮ ಜನರಿಗೆ ತಲುಪುತ್ತೆ.
ಇದೆಲ್ಲಾ ನಿಮಗೆ ಗೊತ್ತಿರೋ ವಿಷಯನಾನೇ ಆದ್ರೆ ಇನ್ನ ಮುಂದಿರೋದು ಇನ್ನು ಘೋರ ಯಾತನೆ ಸ್ವಾಮಿ.

ನಟರು : ಇನ್ನೂ ಘೋರ. ಇನ್ನೂ ಘೋರ. ಏನು ಸ್ವಾಮಿ ಇದು.

ನಟ ೧ : ಜಾಗತೀಕರಣ, ಜಾಗತೀಕರಣ.

ನಟ ೨ : ಜಾಗತೀಕರಣ ಎಂದರೆ ಬಂಡವಾಳಶಾಹಿ ಶೋಷಣೆಯ ಮುಂದುವರಿಕೆ.

ನಟ ೩ : ಜಗತ್ತಿನ ಬಡವರಿಗೆ ಹುಸಿ ಭರವಸೆ ಮೂಡಿಸುವ ಸಲುವಾಗಿ ಜಾಗತೀಕರಣವೆಂದು ಹೆಸರಿಡಲಾಗಿದೆ.

ನಟ ೪ : ಜಾಗತೀಕರಣದ ಹೆಸರಿನಲ್ಲಿ ಬಡ ದೇಶಗಳ ಸಂಪನ್ಮೂಲಗಳನ್ನು ದೋಚುವ ಸಂಚು.

ನಟ ೫ : ಆರೋಗ್ಯ ಪಾಲನೆಯಲ್ಲಿ ಶಿಕ್ಷಣದಲ್ಲಿ ಮತ್ತು ಆಹಾರ ಪೂರೈಕೆಯಲ್ಲಿ ಸಬ್ಸಿಡಿ ನೀಡುತ್ತಿರುವುದು ನಿಲ್ಲುವಂತೆ ನಮ್ಮ ದೇಶದ ಮೇಲೆ ಯುರೋಪು, ಉತ್ತರ ಅಮೇರಿಕಾ ಮತ್ತು ಜಪಾನು ದೇಶಗಳು ಒತ್ತಾಯ ಮಾಡುತ್ತಿರುವುದೇ ಜಾಗತೀಕರಣದ ಹೆಸರಿನಲ್ಲಿ ಶ್ರೀಮಂತರಿಗೆ ಲಾಭ ಒದಗಿಸಿಕೊಡುವ ಸಲುವಾಗಿ ಬಡವರನ್ನು ತೊಂದರೆಗೆ ಸಿಲುಕಿಸುವ ವ್ಯವಸ್ಥೆಯೇ ಜಾಗತೀಕರಣ.

ನಿರೂಪಕ : ಅಬ್ಬಬ್ಬಾ, ಇದು ಘೋರವಾದ ಅನ್ಯಾಯ. ಬಡವರಿಗೆ ಹಳ್ಳಿ ಜನರಿಗೆ ನಡೀತಿರೋ ಅನ್ಯಾಯ.
ಅಂಗೊ ಇಂಗೋ ಕಷ್ಟಾನೋ ಸುಖಾನೋ ಅಲ್ಪಸ್ವಲ್ಪ ಆರೋಗ್ಯ ವ್ಯವಸ್ಥೆ ಇದುವರೆಗೂ ನಡೀತಾ ಬಂದಿತ್ತು. ಆದ್ರೆ ಇನ್ನು ಮುಂದೆ ಇದೂನೂ ಇಲ್ದಂಗೆ ಆಯ್ತದಲ್ಲ.

ನಟ ೧ : ೨೦೦೦ನೇ ಇಸವಿಯ ಹೊತ್ತಿಗೆ ಎಲ್ಲರಿಗೂ ಆರೋಗ್ಯ ಎಂಬ ಗುರಿಯನ್ನು ಸರಕಾರಗಳು ಮರೆತಂತಿವೆ.

ನಟ ೨ : ಸ್ವತಂತ್ರ ಬಂದು ೫೩ ವರ್ಷಗಳಾದರೂ ಆರೋಗ್ಯ ಪರಿಸ್ಥಿತಿ ಸಮರ್ಪಕವಾಗಿಲ್ಲ.

ನಟ ೩ : ತಡೆಗಟ್ಟಬಹುದಾದ ರೋಗಗಳು ಇಂದಿಗೂ ಕಂಡುಬರುತ್ತಿವೆ.

ನಟ ೪ : ನಮ್ಮ ಸರ್ಕಾರಗಳು ಪ್ರಾಥಮಿಕ ಆರೋಗ್ಯಪಾಲನೆಯ ವ್ಯವಸ್ಥೆಯನ್ನು ಸುಧಾರಿಸದೇ ಇರುವುದು.

ನಟ ೫ : ಆರೋಗ್ಯ ಕಾರ್ಯಕ್ರಮಗಳಲ್ಲಿ ಜನರ ಸಹಭಾಗಿತ್ವ ಇಲ್ಲದಿರುವುದು.

ನಟ ೧ : ಇವೆಲ್ಲವೂ ಇತ್ತೀಚಿನ ಧಾಳಿಯಾದ ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣದ ನೀತಿಯಿಂದಾಗಿ.

ನಿರೂಪಕ : ಇಂತಹ ವಿಷಯಗಳು ನಮ್ಮ ಹಳ್ಳಿ ಜನರಿಗೆ ಎಷ್ಟರಮಟ್ಟಿಗೆ ಗೊತ್ತಿದೆ.

ನಟ ೧ : ಇದಕ್ಕಾಗಿ ಜನಾರೋಗ್ಯ ಕಾರ್ಯಕ್ರಮ

ನಟ೨ : ಜನರಿಗೆ ಆರೋಗ್ಯ ವಿಷಯಗಳನ್ನು ತಿಳಿಸಿ ಇಂದಿನ ಪರಿಸ್ಥಿತಿಗೆ ಕಾರಣವನ್ನು ಹುಡುಕುವ ಕಾರ್ಯಕ್ರಮವೇ ಈ ಜನಾರೋಗ್ಯ ಕಾರ್ಯಕ್ರಮ.

ನಟ ೩ : ಜನ ಸಹಾಯದಿಂದ ಅದನ್ನು ಸರಿಪಡಿಸಲು ಸರಕಾರವನ್ನು ಎಚ್ಚರಿಸಲು ಈ ಜನಾರೋಗ್ಯ ಕಾರ್ಯಕ್ರಮ.

ನಿರೂಪಕ : ಜನಾರೋಗ್ಯ ಸುಧಾರಣೆ ಅಗತ್ಯವಿರುವ ಜನಾಂದೋಲನ, ಮುಂದಾಳತ್ವವನ್ನು ಜನಾರೋಗ್ಯ ಸಭೆಗಳು ತೆಗೆದುಕೊಂಡಿವೆ.

ನಟ ೧ : ಭಾರತವಷ್ಟೇ ಏಕೆ? ಇಡೀ ಜಗತ್ತಿನಾದ್ಯಂತ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ನಿರೂಪಕ : ನಾವೆಲ್ಲರೂ ಅದರ ಭಾಗವಾಗಿ ಹೋರಾಟ ಮಾಡಬೇಕಾಗಿದೆ. ಬನ್ನಿ.... ಬನ್ನಿ... ಜನಾರೋಗ್ಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿ.

ನಟ ೧ : ಬೇಡವೇ ಬೇಡ ಜಾಗತೀಕರಣ

ಎಲ್ಲರೂ : ಬೇಡವೇ ಬೇಡ ಜಾಗತೀಕರಣ

ನಟ ೨ : ಬೇಡವೇ ಬೇಡ ಖಾಸಗೀಕರಣ

ಎಲ್ಲರೂ : ಬೇಡವೇ ಬೇಡ ಬೇಡವೇ ಬೇಡ.

ನಟ ೩ : ಬೇಡವೇ ಬೇಡ ಉದಾರೀಕರಣ

ಎಲ್ಲರೂ : ಬೇಡವೇ ಬೇಡ ಬೇಡವೇ ಬೇಡ

ನಟ : ಎಲ್ಲರಿಗೂ ಆರೋಗ್ಯ

ಎಲ್ಲರೂ : ಈಗಲೇ ಬೇಕು ಈಗಲೇ ಬೇಕು.

ನಟ : ಪ್ರಾಥಮಿಕ ಆರೋಗ್ಯ ಪಾಲನೆಯ ವ್ಯವಸ್ಥೆ

ಎಲ್ಲರೂ : ಸುಧಾರಿಸಲಿ ಸುಧಾರಿಸಲಿ.

ನಿರೂಪಕ : ಜನಾರೋಗ್ಯ ಜನಾಂದೋಲನಕ್ಕೆ

ಎಲ್ಲರೂ : ಜಯವಾಗಲಿ ಜಯವಾಗಲಿ

(ಹಾಡು)

ಆರೋಗ್ಯ ಬೇಕಣ್ಣಾ ನಮಗೆ ಆರೋಗ್ಯ ಬೇಕಣ್ಣಾ
ಆರೋಗ್ಯ ಭಾಗ್ಯ ಎಂಬುವ ವಿಷಯ ಮೊದಲು ತಿಳಿಯಣ್ಣಾ
ಮನೆಯ ಮುಂದೆ ಕೈಕಾಲು ತೊಳೆದು ನೀ ಗೊಜ್ಜೆ ಮಾಡಬೇಡ ॥

ಆ ಕೊಳಚೆಯಿಂದ ಸೊಳ್ಳೆಗಳು ಹೆಚ್ಚಿ ಪರದಾಡಿ ಸಾಯಬೇಡ
ನೀರು ನಿಲ್ಲದಂತೆ ಕಾಲುವೆ ಮಾಡಿ ದೂರ ಹರಿಸಬೇಕು
ಸುತ್ತಮುತ್ತಲೂ ಸ್ವಚ್ಛತೆಯ ಕಾಪಾಡಿಕೊಳ್ಳಬೇಕು
ಕಾಯಿಲೆಯಿಂದ ನರಳುತಿರುವಗೇ ಮಂತ್ರ ಹಾಕಬೇಡ

ಆ ಮಂತ್ರವೆಂಬ ಕುತಂತ್ರದಿಂದ ನೀ ಪ್ರಾಣ ತೆಗೆಯಬೇಡ
ಮೂಢನಂಬಿಕೆಗೆ ಜೋತುಬಿದ್ದು ಹಾಳಾಗಿ ಹೋಗಬೇಡ
ಡಾಕ್ಟರಿಗೆ ತೋರ್ಸಿ ಔಷಧಿಯ ಕೊಡಿಸಿ ಬದುಕುವುದ
ಮರೆಯಬೇಡ ॥

ಎಲ್ಲರ ದೇಹಕೆ ಕಾಯಿಲೆ ತಡೆಯಲು ಸ್ವಚ್ಛತೆ ಇರಬೇಕು
ಶುದ್ಧ ಆಹಾರ, ಶುದ್ಧ ನೀರು ನಮಗೆ ಬೇಕೇ ಬೇಕು
ಆಗಿಂದಾಗ್ಗೆ ಡಾಕ್ಟರ ಸಲಹೆಯ ಪಡೆಯುತಲಿರಬೇಕು
ಆರೋಗ್ಯಕ್ಕೆ ಗಮನವ ಕೊಡಲು ಜ್ಞಾನವ ಪಡೆಯಬೇಕು ॥

❑



### ದೃಶ್ಯ ೧

(ಸಂಗೀತದ ಆಲಾಪ ಮುಗಿಯುತ್ತಿದ್ದಂತೆ ಸಮಾಜ ಸೇವಕನ ಪ್ರವೇಶ)

ಸಮಾಜ ಸೇವಕ : ನಮಸ್ಕಾರ ನನ್ನ ಹೆಸರು ಶಂಕ್ರಪ್ಪ ಅಂತ. ಊರು ಬಚ್ಚದೂರನ ಹಟ್ಟಿ.

ನಾನು ಸಮಾಜಸೇವಕ. ಇಲ್ಲಿನ ಆಜಬಾಜಿನವರು ನನ್ನ ಬುದ್ದಿವಂತ ಅಂತ ಕರೀತಾರೆ. ಏಕಂದ್ರೆ ಅವರು ಕೇಳಿದ್ಕೆ ಉತ್ರ ಸಲೀಸಾಗಿ ಹೇಳಿಬಿಡ್ತೀನಲ್ಲಾ? ಜೊತೆಗೆ ತಾಲ್ಲೂಕು, ಆಫೀಸು, ಕೋರ್ಟು, ಆಸ್ಪತ್ರೆ ಬಗ್ಗೆ ತಿಳುವಳಿಕೆಯನ್ನು ಕೊಡ್ತಾ ಇರ್ತಿನಿ. ನಾನು ಹೀಗ್ ಮಾಡ್ತಾನೇ ಇದ್ರೆ ಸಮಾಜ ಸೇವಕ ಅನ್ನೋದು ಬಿಟ್ಟು ಸಮಾಜೋದ್ಧಾರಕ ಅಂದ್ರೂ ಅನ್ನಬಹುದು. ಅದು ಹೋಗ್ಲಿ ಬಿಡಿ.

ಒಂದು ವರ್ಷದ ಹಿಂದೆ ನಮ್ಮೂರ ಚನ್ನಪ್ಪನ ಮಗಳು ಚೆನ್ನಿ ಯಾರ್ದೊ ಜೊತೇಲಿ ಓಡಿಹೋದ್ಲು. ಆದರೆ ಅವಳ ಜೊತೆಗೆ ಹೋದ ಹುಡುಗ ಮತ್ತೆ ಬಂದ. ಆದ್ರೆ ಚೆನ್ನಿ ಮಾತ್ರ ತಿರುಗಿ ಬರಲಿಲ್ಲ. ಊರಲ್ಲಿ ಅವಳ್ದೇ ಮಾತು. ತಂದೆ ತಾಯಿ ಇಲ್ದೆ ಹುಡುಗಿ ಹಿಂಗಾದ್ಲಲ್ಲ ಅಂತ ಚಿಂತೆ... ಅಗೋ.... ನಮ್ಮೂರ ಎಎನ್‌ಎಂ ಬರ್ತಾ ಇದ್ದಾರೆ. ಇವತ್ತು ಅವರದೇನು ಕೆಲ್ಸ?

### ದೃಶ್ಯ ೨

(ಬೀದಿಯಲ್ಲಿ ಒಬ್ಬ ಹುಡುಗ ಬಲೂನುಗಳನ್ನು ಹಿಡಿದು ಆಟವನ್ನು ಆಡುತ್ತಿರುವುದು ಅವನ ಹಿಂದೆ ಒಬ್ಬ ಹುಡುಗ ನನಗೆ ಕೊಡುವಂತೆ ಪೀಡಿಸುವನು. ಅವನಿಂದ ನಿರಾಕರಣೆ. ಅಷ್ಟೊತ್ತಿಗೆ ಒಬ್ಬ ಹುಡುಗ ಮತ್ತೊಂದು ಬಲೂನನ್ನು ಹಿಡಿದು ಇನ್ನೊಂದು ಕೈಯಲ್ಲಿ ನಿರೋಧ್ ಪ್ಯಾಕನ್ನು ಹಿಡಿದುಕೊಂಡು ಬೀದಿಗೆ ಬಂದಿದ್ದಾನೆ. ಕೆಲವು ಹುಡುಗರು ನಮಗೆ ಕೊಡುವಂತೆ ಕೇಳುವರು. ನಿರಾಕರಣೆಯ ಜೊತೆಗೆ ಕೊಡುವನು) ಅಷ್ಟೊತ್ತಿಗೆ ಎಎನ್‌ಎಂ ಪ್ರವೇಶ.

ಎಎನ್‌ಎಂ : ಏ ಹುಡುಗ್ರಾ ಏನು ಮಾಡ್ತಿದ್ದೀರಾ ಇಲ್ಲಿ? ನಿಮ್ಗೇನು ಕೆಲ್ಸ ಇಲ್ವಾ. ಏ ಬಾರೋ ಇಲ್ಲಿ.

ಹುಡುಗ : ಏನು ಮೇಡಂ?

ಎಎನ್‌ಎಂ : ಏನೋ ಕೈಯಲ್ಲಿರುವುದು ತೋರ್ಸೊ(ಚಕಿತಳಾಗಿ). ಏನೆಲ್ಲಾ ಆಟ ಆಡ್ತಿದ್ದೀರಾ ನೀವು. ನಿಮ್ಗೆ ಎಲ್ಲಿ ಸಿಕ್ತು ಆಡಲಿಕ್ಕೆ, ಯಾರು ತಂದಿದ್ದು.

ಹುಡುಗ : ನಾವಲ್ಲ ನಾವಲ್ಲ, ಅವ್ನು ಇಲ್ಲಿ ಓಡಿಹೋದ್ನಲ್ಲ. ಅವ್ನೇ ಕೊಟ್ಟಿದ್ದು.

ಎಎನ್‌ಎಂ : ಯಾರ ಮನೆ ಹುಡ್ಗಾ?

ಹುಡುಗ್ರು : ಅದೇ ಕಣಕ್ಕಾ ಮರಿಯಮ್ಮನ ಮಗಾ.

ಎಎನ್‌ಎಂ : ಸರಿ. ಸರಿ. ಎಲ್ಲಾ ಮನೆಗೋಗ್ರಿ. ಏನು ಹುಡುಗ್ರು ಅದಾರಾ ಇವ್ರು. (ಪ್ರೇಕ್ಷಕರ ಕಡೆಗೆ) ಜನರಿಗೆ ಬುದ್ಧಿ ಇಲ್ಲ ಅನ್ನೋದು ಇದಕ್ಕೆ. ಯಾವ ವಸ್ತು ಎಲ್ಲಿ ಇಡಬೇಕು ಅನ್ನೋದು ಗೊತ್ತಿಲ್ಲ. ಇದನ್ನ ಉಪಯೋಗಿಸೋದು ಮೊದ್ಲೇ ಗೊತ್ತಿಲ್ಲ. ಏನಾದ್ರೂ ಗೊತ್ತಿದ್ರೆ ಮಕ್ಕಳಿಗೆ ಸಿಗೋ ಹಾಗೆ ಇಡ್ತಿದ್ರಾ. ಸರಿ ಬುದ್ಧಿ ಹೇಳೋ ಕೆಲ್ಸ ನಮ್ದೇ ಅಲ್ವಾ ಹೇಳಬೇಕು.

(ಹಾಡು)

ಇಟ್ಟ ಹೆಜ್ಜೆ ಮುಂದಕಾ ತಗೀ ಬ್ಯಾಡ್ರೀ ಹಿಂದಕ
ಮೊದಲು ಬಿದ್ದ ಮಳೆ ಹನಿ ನೀವಾ
ಮೊದಲು ಬಿತ್ತೋ ಬೀಜ ನೀವಾ
ಮೊದಲ ಸಾಲಿನ ನೇಗಿಲ ನೀವಾ

ಸ್ವಯಂ ಸೇವಕ : ಹೋಗಿ, ಹೋಗಿ ಗೊತ್ತಿಲ್ಲಾ ಅಂತೀರಾ, ನಿರೋಧ್ ಯಾಕೆ ಬಳಸ್ತಾರೆ ಗೊತ್ತಾ? ಮಕ್ಳು ಆಗದಂತೆ ತಡೆಯಾಕೆ. ಮತ್ತು ಮಕ್ಕಳ ಅಂತರವನ್ನು ಕಾಪಾಡಿಕೊಳ್ಳೋಕೆ.

ಎಎನ್‌ಎಂ ಮರಿಯಮ್ಮನ ಮನೀಗೆ ಹೋಗಿದ್ದಾಳೆ ಅಲ್ಲೇನು ನಡೀತಾದೆ ಅಂತಾ ನೋಡುವಾ.

## ದೃಶ್ಯ ೩

(ಮನೆ ದೃಶ್ಯ)

(ರಾಗಿ ಬೀಸುವ ದೃಶ್ಯ)

ಕೋಳಿ ಕೂಗಿತಕ್ಕ ನಂದನವನಕ
ಬೆಳಗಾಗಿ ಬೆಳ್ಳಿಯ ಚುಕ್ಕೀ
ಉದಯದ ಬಳಿಕ
ಕೋಳಿ ಕೂಗಿತಕ್ಕ ನಂದನವನಕ

ಎಎನ್‌ಎಂ : ಮರಿಯಮ್ಮ ಮರಿಯಮ್ಮ ಇದೀಯಾ?

ಮರಿಯಮ್ಮ : ಯಾರದು? (ಎದ್ದು ಬಂದು) ಹೋ ನೀವಾ ಬನ್ನಿ ಒಳಗೆ. ಏನು ಅಕ್ಕಾವ್ರು ಬಂದಿದ್ದು.

ಎಎನ್‌ಎಂ : ನಿಮ್ಮೂರಗಾ ಆಪರೇಷನ್ ಕೇಸು ಇದ್ಕು. ಅದನ್ನ ತಿಳಿಸಲಿಕ್ಕೆ ಬಂದಿದ್ದೆ. ಆದಿರ್ಲಿ ನಿಮ್ಮ ಹುಡುಗ ಇದನ್ನ ಕೈಯಲ್ಲಿ ಹಿಡಿದು ಕೊಂಡು ಮಕ್ಳ ಜೊತೆ ಆಟ ಆಡ್ತಿದ್ದಾ. ಅಲ್ಲ ಮರಿಯಮ್ಮ ಇದು ಮಕ್ಳು ಆಟವಾಡದೇನು? ಸರಿಯಾದ ರೀತಿಯಲ್ಲಿ ಇಟ್ಕೋಬೇಕು. ಮಕ್ಳಿಗೆ ಸಿಗೋ ಹಾಗೆ ಇಡೋದಲ್ಲ. ಬೇಕು ಅಂದಾಗ ಸಿಗುವಂತದ್ದಾ. ಹೌದು, ಇದನ್ನ ಎಲ್ಲಿಂದ ತೆಗೆದು ಕೊಂಡು ಬಂದೆ.

ಮರಿಯಮ್ಮ : ಮಹಿಳಾ ಸಮಾಜದೋರು ಆರೋಗ್ಯದ ಬಗ್ಗೆ ಸಭೆ ಇಟ್ಟಿದ್ರು. ಇದರ ಬಗ್ಗೆ ತಿಳುವಳಿಕೆ ಕೊಟ್ರು, ಸಭೆಯ ನಂತರ ಎಲ್ಲರಿಗೂ ಒಂದೊಂದು ಪ್ಯಾಕೇಜ್ ಉಚಿತವಾಗಿ ಕೊಟ್ರು.

ಎಎನ್‌ಎಂ : ಅಲ್ಲಾ ನುಂಗುವ ಮಾತ್ರೆಗಳನ್ನು ಕೊಟ್ಟಿದ್ದೆ, ಅದನ್ನ ತೆಗೆದು ಕೊಳ್ಳುತ್ತೀಯಲ್ಲೇನು.

ಮರಿಯಮ್ಮ : ದಿನಾನು ನುಂಗ್ತಾ ಇದ್ದೆ. ಆದ್ರೆ ಈ ಬದುಕೀನ ಜಂಜಾಟದಾಗ್ ಮರ್ತು ಬಿಡ್ತಿದ್ದೆ. ಅದಕ್ಕ ನನ್ಗೆ ಸರಿ ಅನ್ನಿಸ್ಲಿಲ್ಲ. ಬಿಟ್ಟೆ.

ಎಎನ್‌ಎಂ : ಅಲ್ಲಾ ಮರಿಯಮ್ಮ. ಅದು ಬ್ಯಾಡ, ಕಾಪರ್ ಟೀ ಆದ್ರೂ ಹಾಕಿಸಿಕೊಳ್ಳಬಹುದಿತ್ತಲ್ಲ.

ಮರಿಯಮ್ಮ : ಪಕ್ಕದ ಮನೆ ಗಂಗಮ್ಮ ಕಾಪರ್ ಟೀ ಹಾಕಿಸ್ಕೊಂಡಿದ್ಲು. ಅವಳಿಗೆ ಆಗಾಗ ತೊಂದರೆ ಆಗಿತ್ತಂತೆ. ಅದಿಕ್ಕೆ ನಾನು ಹಾಕುಸ್ಲಿಲ್ಲ.

ಎಎಸ್‌ಎಂ : ಅಲ್ಲಾ ಮರಿಯಮ್ಮ ಅದು ಎಲ್ಲರಿಗೂ ತೊಂದರೆ ಆಗುವುದಿಲ್ಲ. ಕೆಲವರಿಗೆ ಸರಿ ಹೋಗುತ್ತೆ. ಇನ್ನು ಕೆಲವರಿಗೆ ಮೈಗೆ ಒಗ್ಗಲ್ಲಾ. ಇದಕ್ಕಿಂತ (ನಿರೋಧ್) ಕಾಪರ್ ಟೀನೇ ಒಳ್ಳೇದು.

ಮರಿಯಮ್ಮ : ಹಾಗಾದ್ರೆ, ಮುಂದೆ ನೋಡಾನ. ಇದನ್ನ ಮುಂದುವರಿಸತೀನಿ.

ಎಎಸ್‌ಎಂ : ಸರಿ, ಮರಿಯಮ್ಮ ಊರಲ್ಲಿ ಆಪರೇಷನ್ ಕೇಸುಗಳು ಇತ್ತು ಹೇಳಬೇಕು. ನನ್ಗೆ ಹೊತ್ತಾಯ್ತು. ಇನ್ನು ಬರ್ತಿನಿ.

ಮರಿಯಮ್ಮ : ನಮಸ್ಕಾರ ಹೋಗಿ ಬನ್ನಿ.

(ಆಲಾಪ)

## ದೃಶ್ಯ ೪

(ಬಾಳೇತೋಟ)

ಸ್ವಯಂ ಸೇವಕ : ನಮಸ್ಕಾರ ಬೋರಯ್ಯ. ನೀವು ತೋಟದಾಗೆ ಆದೀರಂತಾ ಬಂದೆ. ಏನು ತೋಟ ಚೆನ್ನಾಗಿ ಬೆಳ್ಸಿ ಏನೋ ಕೆಲ್ಸ ಮಾಡ್ತಿದ್ದೀಯಾ.

ಬೋರಯ್ಯ : ಏನಿಲ್ಲ. ಬಾಳೇಕಂದುಗಳು ಜಾಸ್ತಿ ಆಗಿದ್ದು. ಅವು ತಗುದ್ರೆ ಒಳ್ಳೆದನಿಸುತ್ತೆ. ಯಾಕಂದ್ರೆ ಬಾಳೇನು ಬರ್ತಿಲ್ಲಿಲ್ಲ. ಕಂದುಗಳು ಸರೀಗೆ ಬೆಳಿತಿರ್ಲಿಲ್ಲ. ಅದಕ್ಕೆ ಎಲ್ಲಾನೂ ತಗದು ಎರಡು ಮಾತ್ರ ಬಿಟ್ಟಿದ್ದೀನಿ. ಯಾಕಂದ್ರ ಗೊಬ್ಬರ, ನೀರು ಶ್ರಮ ಕೂಡಾ ವ್ಯರ್ಥ ಆಗೋದು ಬೇಡ ಅಂತಾ.

ಸ್ವಯಂ ಸೇವಕ : ಒಳ್ಳೆಯ ಬುದ್ಧಿವಂತ ಕೆಲ್ಸ ಮಾಡ್ತೀದ್ದೀಯಾ?

ಬೋರಯ್ಯ : ಬೆಳೆ ಒಳಗೆ ಕಳೆ ತಗದ್ರೇ ಒಳ್ಳೇ ಫಲ ಬರಬಹುದು ಅಲ್ವಾ. ಅದು ಮುಗಿಸಿ ಕುತ್ಕೊಂಡಿದ್ದೆ ನೀ ಬಂದೆ ನೋಡು.

ಹೆಂಡತಿ : ಹೊಯ್, ಏನೊಂದ್ರೆ (ಗೊಣಗುತ್ತಾ) ಇವ್ರು ಇಂತಾ ಜಾಗದಲ್ಲಿ ಇರ್ತಿನಿ ಅಂತಾರೆ. ಬೇರೆ ಎಲ್ಲೋ ಕೆಲ್ಸ ಮಾಡ್ತಿರ್ತಾರೆ. ಏನು ಮಾಡೋದು? (ಮತ್ತೊಮ್ಮೆ ಕೂಗುವುದು)

(ತಲೆ ಮೇಲೆ ಬುತ್ತಿ, ಕೈಯಲ್ಲಿ ಒಂದು ಮಗು, ಮತ್ತೆ ಬಸುರಿ)

ಬೋರಯ್ಯ : ಏನು ಅಂಗೇ ಕೂಗಾಡ್ತೀ, ಒಂದು ಸಾರಿ ಕೂಗಿ ಬರಾಕಾಗಿಲ್ಲೇನು. ತೋಟ ಬಿಟ್ಟು ಎಲ್ಲಿ ಹೋಯ್ತೀನಿ? (ಬುಟ್ಟಿ ಇಳಿಸುವಳು)

ಸ್ವಯಂ ಸೇವಕ : ಅಲ್ಲ ಬೋರಯ್ಯ ನಿನ್ನ ಬಾಳೆ ಬೆಳೆ ವಿಷಯ ಕೇಳಿ ಖುಷಿಯಾಯ್ತು. ಬೇಸಾಯದಾಗ ಬಾಳ ಮುಂದಿದೀಯಾ, ಆದ್ರೇ ಸಂಸಾರದೊಳಗ ಭಾಳ ಹಿಂದೆ ಇದ್ದೀಯಾ. ದಡ್ಡ ಅದೀಯಾ. ನೀನು ದಡ್ಡ ಅದೀಯ. ಅಲ್ಲಾ ಇಷ್ಟು ಬೇಗ ನಿನಗೆ ಇನ್ನೊಂದು ಮಗು ಬೇಕಿತ್ತಾ? ಇನ್ನೂ ಕಾಲ ಮಿಂಚಿಲ್ಲ. ಶಾಶ್ವತವಾದ ಆಪರೇಷನ್ ಮಾಡ್ಕೊ.

ಬೋರಯ್ಯ : ನಾವು ದುಡಿಯವರಲ್ಲಾ. ನಮ್ ಹೆಂಡ್ತಿಗೆ ಮಾಡುಸ್ತೀನಿ.

ಸ್ವಯಂ ಸೇವಕ : ಅಲ್ಲಾ ಬೋರಯ್ಯ. ನಿನ್ನ ಹೆಂಡ್ತಿ ಎಲ್ಲಾ ತೊಂದ್ರೇನು ತಡಕಾ ಬೇಕಾ. ಕಷ್ಟ ಆಗಲ್ಲಾ. ನಾವು ಗಂಡುಸ್ರಾಗಿ ಸಾಕಾರ ಕೊಡಬೇಕು. ನೀನು ಮಾಡಿಸ್‌ಕೊಂಡ್ರೆ ಹೆಂಡತಿಗೆ ಕಷ್ಟ ಕಡಿಮೆ ಮಾಡಬಹುದು. ನೋಡು ಈ ಆಪರೇಷನ್ ಗಂಡು-ಹೆಣ್ಣು ಮಾಡಿಸಿಕೋಬಹುದು. ಅಂತಾ ತೊಂದರೆ ಏನೂ ಆಗಲ್ಲ. ಅದೆಲ್ಲಾ ತಪ್ಪು ಭಾವನೆ. ರಾಮಣ್ಣ ಮಾಡಿಸ್ಕೊಂಡು ಕಲ್ಲು ಬಗೀಲಿಕ್ಕೆ ಹೋಗ್ತಾ ಇದ್ದಾನೆ.

ಬೋರಯ್ಯ : ಒಳ್ಳೆ ವಿಚಾರನೇ ತಿಳಿಸ್ದೇ. ನಾನೇ ಈ ಆಪರೇಷನ್ ಮಾಡಿಸ್ಕೋ ತೀನಿ. ನಾನು ನನ್ನ ಹೆಂಡ್ತಿ, ಮಕ್ಕು ಚೆಂದಾಕಿರಬೇಕಲ್ಲ.

ಸ್ವಯಂ ಸೇವಕ : ಸರಿ. ಒಳ್ಳೆ ತೀರ್ಮಾನ ತಗೊಂಡೆ. ನಾನಿನ್ನ ಬರ್ತಿನಿ. ನಮಸ್ಕಾರ. (ಆಲಾಪನೆ)

## ದೃಶ್ಯ ೫

(ಪ್ರೇಕ್ಷಕರನ್ನು ಉದ್ದೇಶಿಸಿ)

ಸ್ವಯಂ ಸೇವಕ : ಆ ಚನ್ನೀದು ಏನು ಆಯ್ತು ಅಂತಾ ಗೊತ್ತಾಗ್ಲಿಲ್ಲ ಅಲ್ವಾ. ಯಂಗ ಅದಳಂತೆ ನೋಡಾಣ. (ಡಾಬಾ ಹೋಟೆಲ್ ದೃಶ್ಯ) (ಲಾರಿ ಡ್ರೈವರ್ ಲಾರಿಯಿಂದ ಇಳಿದು ಬರುತ್ತಾನೆ)

ಡ್ರೈವರ್ : ಹೇ ಬತ್ತಿಯೇನು?

ಚನ್ನಿ : ಜೇಬಲ್ಲಿ ಇದೆಯಾ?

ಡ್ರೈವರ್ : ಹೂ. ಇದೆ ಅದು ಇಲ್ದೇ ಬರ್ತಿನಾ (ಜೇಬಿನಿಂದ ನಿರೋಧ್ ಪ್ಯಾಕೆಟ್ ತೋರಿಸುವನು)

ಚೆನ್ನಿ : ಹೇ ಮಂಕೆ ಅದಲ್ಲಾ ಕೇಳಿದ್ದು ಜೇಬಲ್ಲಿ ಕಾಸು ಇಟ್ಕೊಂಡಿದ್ದೀಯಾ ಅಂತ. ಆ ಸಾರಿ ಬಂದಾಗ ಒಡವೆ ತರ್ತಿನಿ ಅಂತಾ ಹೇಳಿದ್ದೆ. ಅದೆಲ್ಲಿ.

ಡ್ರೈವರ್ : ಅಯ್ಯೋ ಚೆನ್ನಿ ಏನು ಹೇಳ್ಲಿ ನಾನು. ಗೋವಾ ಟ್ರಿಪ್‌ಗೆ ಹೋಗಿದ್ದೆ. ಲಾರಿ ಜನಾನೇ ಸಿಗ್ಲಿಲ್ಲ. ಕೊನೆಗೆ ಕಾಸಾದ್ರೂ ಮಾಡ್ಕೊಂಡೋಗುವಾ ಅಂದ್ರೆ ಅದೂನು ಆಗ್ಲಿಲ್ಲ. ಯಂಗಾರಾ ಮಾಡಿ ಇದೊಂದು ಸಾರಿ ನೋಡ್ಕೋ.

ಚೆನ್ನಿ : ಬಂದಾಗಲೆಲ್ಲಾ ನೋಡ್ಕೋ ಅಂದ್ರೆ ಹೆಂಗಾ ಈ ಡ್ರೈವರ್ ಕೆಲ್ಸನೆ ಹೀಂಗ ನೋಡು. ಬಾಳ ಹಸಿದಂಗೆ ಇದೀಯಾ ನಡೀ ಒಳಗೆ

(ಒಳಗೆ ಪ್ರವೇಶಿಸುವರು) (ಪ್ರವೇಶ)

ಸ್ವಯಂ ಸೇವಕ : ನೋಡಿದ್ರಾ. ಆ ಡ್ರೈವರ್ ಎಷ್ಟು ಬುದ್ಧಿವಂತ. ಹಣ ಇಡೋ ಜಾಗದಲ್ಲಿ ನಿರೋಧ್ ಇಟ್ಕೊಂಡಿದ್ದಾನೆ. ಇದರಿಂದ ಅವ್ನು ಸೊಂಕು ರೋಗದಿಂದ ದೂರ ಆಗ್ತಾನೆ. ಚೆನ್ನಿ ಕೂಡ ಅಂಗೆ ಸೊಂಕಿನಿಂದ ಪಾರಾಗ್ತಾಳೆ. ಆ ಮಹಾಮಾರಿ ಏಡ್ಸ್ ರೋಗನಾ ತಾನೇ ತಡೆಗಟ್ಟುತ್ತಾನೆ.

(ಪ್ರೇಕ್ಷಕರನ್ನು ನೋಡಿ)

ನಮಸ್ಕಾರ. ನಿಮ್ಮ ಜೊತೆ ತುಂಬಾ ಮಾತಾಡಿದೆನಲ್ಲ. ಏನಾದ್ರೂ ತಿರುಳಿದ್ರೆ ತಾವು ಅದನ್ನು ಒಪ್ಕೊಳ್ಳಿ. ನಮಸ್ಕಾರ ಬರ್ತಿನಿ.

(ಆಲಾಪ ಹಾಡು)

❑



# ಏಡ್ಸ್‌ಂಬ ಮಹಾಮಾರಿ

*- ಹೆಚ್.ಸಿ. ಚಿದಾನಂದಮೂರ್ತಿ,* ಡಿಟಿಎ

ಬೀದಿ ನಾಟಕದ ನಟರುಗಳು ವಿಕಾರವಾದ ಧ್ವನಿಯಲ್ಲಿ ಒಂದು ಭಾರಿ ಸುತ್ತು ಹಾಕಿ ಮೂರು ನಟರುಗಳನ್ನು ಬಿಟ್ಟು ರಂಗದ ಹಿಂಬದಿಗೆ ಅರ್ಧ ಚಂದ್ರಾಕಾರವಾಗಿ ಕುಳಿತುಕೊಳ್ಳುವರು. ವಿಕಾರವಾದ ಧ್ವನಿ ತಮಟೆ ಶಬ್ದ, ಶಬ್ದದ ತಾಳಕ್ಕೆ ತಕ್ಕಂತೆ ಮುಖವಾಡ ತೊಟ್ಟ ನಟರುಗಳು ರಂಗದ ಮೇಲೆ ಹೆಜ್ಜೆ ಹಾಕುತ್ತಾ ಕುಣಿಯುತ್ತ ಆ ಕಡೆ - ಈ ಕಡೆ ನಲಿಯುವರು, ಅದರಲ್ಲಿ ಇಬ್ಬರು ರಂಗದ ನಟರುಗಳ ಜೊತೆ ಸೇರಿ ಕುಳಿತುಕೊಳ್ಳುವರು. ರಂಗದ ಮೇಲಿದ್ದ ಇನ್ನೊಬ್ಬ ನಟ ಅವರನ್ನು ಗಮನಿಸದೆ ದೆವ್ವ ಬಂದವನಂತೆ ಕುಣಿಯುತ್ತಾ ಕುಣಿಯುತ್ತಾ ಗಕ್ಕನೆ ನಿಲ್ಲುವನು. ಸುತ್ತಲೂ ನೋಡುವನು, ಸ್ಮಶಾನದ ವಾತಾವರಣ ಸೃಷ್ಟಿಸುವ ಸಣ್ಣದಾದ ಧ್ವನಿಗಳು ಕೇಳಿಬರುವುವು. ಅದರಲ್ಲಿದ್ದ ಹೆಚ್ ಎಂಬ ನಟ

ಹೆಚ್: ಎಲಾ ಇವನ ನಾವು ಮೂರ್ಜನ ಒಟ್ಟಿಗೆ ಕುಣಿತಾ ಇದ್ವಿ
ನನ್ನ ಇಬ್ರು ಫ್ರೆಂಡ್ಸ್ ಎಲ್ಲಿ ಹೋಗ್ಬಿಟ್ರು
ತಡಿ ಜೋರಾಗಿ ಕರೀತಿನಿ
ಲೇ ........ ನಾನೊಬ್ನೆ ಇದ್ರೆ ಸರಿಯಾಗಲ್ಲ ಕಣ್ರೋ
ನೀವಿಬ್ರು ಬಂದ್ ಸೇರ್ಕೊಂಡ್ರೆ, ನಮ್ಮೆಲ್ಲರಿಗೂ ಒಂದು ಅರ್ಥ ಬರುತ್ತೆ.
ಬರ್ರ್ರೋ, ಬೇಗ ಎಲ್ಲದಿರಿ ಬರ್ರ್ರೋ....
(ಅವನ ಮಾತನ್ನ ಆಲಿಸುತ್ತಿದ್ದ -ಐ-ವಿ- ನಟರುಗಳು
ಆ ಕಡೆಯಿಂದ ಈ ಕಡೆಯಿಂದ ಕುಣಿಯುತ್ತಾ-ಹೆಚ್-ಜೊತೆ ಸೇರುವರು)
ಅಲ್ರ್ರೋ... ಮೂರ್ಜನ ಫ್ರೆಂಡ್ಸ್ ಸೇರ್ಕೊಂಡು ಜೊತೆಯಾಗಿ ಕುಣಿಯುತ್ತಿದ್ದೋ ನನಗೆ ಕೈಕೊಟ್ಟು ಹೋಗಿಬಿಟ್ಟಿದ್ದೀರಲ್ಲಾ

ಐ : ನಾ ಮೂವರು ಮನುಷ್ಯರಿಂದ ಹೊರಬಂದ್ಮೇಲೆ
ಮನುಷ್ಯರ ಒಳ ಸೇರ್ಕೋಳ್ಳೋಕೆ ಜಾಗ ಹುಡುಕ್ತಾ ಇದ್ವೀ

ವಿ : ನಾ ಮೂರ್ಜನ ಸೇರ್ಕೊಂಡು ಒಂದು ತತ್ವಪದ ಹಾಡೋಣ

ಐ : ನಮೀಗೂ ಸಂದಿ ಗೊಂದೀಲಿ, ಚಾಲಿಗಂಟಿ ಪೊದೇಲಿ
ಹಾಡಿ ಹಾಡಿ ಬೇಜಾರಾಗಿದೆ

ವಿ : ಇಲ್ಲಿ ವಾತಾವರಣ ಚೆನ್ನಾಗಿದೆ
ನಾವೆಲ್ಲರೂ ಹಾಡಿ ಈ ಜಾಗನ ಹೊಲ್ಸು ಮಾಡೋಣ

ಹೆಚ್ : ನಾವು ನಮಗಾಗಿ ಹಾಡಲ್ಲ
ನಮ್ಮಗಳ ಬೇಜಾರಕ್ಕೆ ಜನ್ರಿಗೆ ಖುಷಿಯಾಗ್ಲಂತ ಹಾಡ್ತೀವಿ
ಯಾಕೆ ಅಂದ್ರೆ .......
ನಾವು ಹುಟ್ಟಿದ್ದು ಈ ಜನಗಳಿಂದ್ಲೇ ಅಲ್ವೇ .....
ನಾ ಒಬ್ರೊ - ಇಬ್ರೊ ನಮ್ಮೊರ್ಬ್ಜನ ಹೆಚ್.ಐ.ವಿ. ವೈರಸ್‌ನಿಂದ ಕಾಯಿಲೇ ಅಂಟಿಸಿಕೊಂಡವರ ದೇಹದಲ್ಲಿ ಸೇರ್ಕೊಂಡು ನಮ್ಮೊಳಗೆ ನಾವೇ ಮಾತಾಡ್ಕೊಂತಾ ಹಾಡ್ಕೊಂತಾ ಇದ್ವಿ ಈ ಜನ ನಮ್ಮನ ಸುಮ್ನೇ ಬಿಟ್ರ

ಐ : ಸೂಜಿ, ಬ್ಲೇಡಿಂದ ಹೊರತೆಗ್ದು, ಇನ್ನೊಬ್ರ ದೇಹದೊಳಗೋಗಕೆ ನಮಿಗೆ ಕಷ್ಟ ಕೊಟ್ರು.

ವಿ : ನಾವು ದೇಹದೊಳಕ್ಕೋದ್ಮೇಲೆ ಸುಮ್ನಿರಕಾಗುತ್ತಾ, ನಮ್ಕೆಲ್ಸ ನಾವು ಸುರು ಮಾಡಿದ್ವಿ. ಒಬ್ರಾ-ಇಬ್ರಾ ಸ್ವಾಮಿ, ಈಗೆ ಸಾವಿರಾರು ಮಂದಿಗೆ ಅಂಟಿಸ್ಕಂತಾ ಹೋದ್ರೆ, ನಾವೇನ್ಮಾಡಕಾಗುತ್ತೆ, ಎಲ್ಲರೊಳಗೂ ಸೇರ್ಕೊಂಡ್ವಿ.

ಹೆಚ್ : ರೋಗಾಣುಗಳಾದ ನಮ್ಗೆ ಈ ಜನ್ರನ್ನು ನೋಡಿ ಅಯ್ಯೋ ಅನ್ಸುತ್ತೆ.

ಐ : (ಸಿಟ್ಟಿನಿಂದ) ಈ ಮನುಷ್ಯರ ಮನಸ್ಸಿಗೆ ಸ್ವಲ್ಪ ಕಡಿವಾಣ ಅನ್ನೋ ದಾದ್ರೂ ಐತೇನೋ.

ವಿ : ಈಗ ಜನರ ಮನಸ್ಸು ತಗೊಂಡು ಏನ್ಮಾಡೋಣ. ನಮ್ಮಕ್ಳು, ಮೊಮ್ಮಕ್ಳು, ಮರಿಮಕ್ಳು, ಗಿರಿಮಕ್ಳೂನ ಈ ಹೆಚ್‌ಐವಿ ವೈರಸ್‌ಗೆ ಮಹಾ ಚಕ್ರಮೂರ್ತಿಗಳನ್ನಾಗಿ ಮಾಡೋಣ.

ಹೆಚ್ : (ರಾಜನಂತೆ) ಇಡೀ ಪ್ರಪಂಚದಲ್ಲೇ ನಮ್ಮ ರೋಗಾಣುವನ್ನು ಕೊಲ್ಲುವಂತ ಔಷಧಿಯನ್ನು ಇನ್ನೂ ಯಾರಿಂದಲೂ ತಯಾರು ಮಾಡಲಾಗಿಲ್ಲ. ಇನ್ನೂ ಕಂಡಿಡಿಯುತ್ತಲೇ ಇದ್ದಾರೆ, ಕಂಡಿಡೀ ಲಿಲ್ಲ; ನಾವು ತತ್ವ ಪದ ಹಾಡ್ತಾ ಇರೋಣ.

ಐ : ನಾವೆಲ್ಲಾ ಸೇರ್ಕೊಂಡು ಹಾಡೋಣ ಬನ್ರೋ.....

(ಒಬ್ಬರಿಗೊಬ್ಬರು ಕೈ-ಹಿಡ್ಕೊಂಡು ಹಾಡಲು ಶುರು ಮಾಡುವರು)

(ಹಾಡು)

ನಾ ಮೂವರು ಒಂದೇ
ನಮಗಿಲ್ಲ ಏನೂ ತೊಂದ್ರೆ
ಗಂಡು-ಹೆಣ್ಣು ಕೂಡಿದರೆ
ಅದೇ ನಮ್ಮ ಸಾಮ್ರಾಜ್ಯ ಅಯ್ಯೋ, ಪಾಪ, ಅಯ್ಯೋ ಪಾಪ

(ಈ ಹಾಡನ್ನು ಎರಡು ಬಾರಿ ಹೇಳುವರು)

ವಿ : ನಾವು ನಮ್ಮ ಪಾಡಿಗೆ ಸುಮ್ನೇ ಇರೋಣ. ಇಲ್ಲಿ ಮುಂದೆ ಏನು ನಡೆಯುತ್ತೋ ನೋಡೋಣ.

ಹೆಚ್ : ಅಗೋ ನೋಡು ನಮ್ಮ ರೋಗಾಣುವನ್ನ ಅಂಟಿಸಿಕೊಂಡ ಒಬ್ಬ ರೋಗಿ ಹೆಂಗ್ ಬರ್ತಾ ಇದ್ದಾನೆ ನೋಡು.

(ಒಬ್ಬ ನಟ ಬಳಲಿದವನಂತೆ ನಡೆಯುತ್ತಾ ಪ್ರವೇಶಿಸುವನು)

ಏಡ್ಸ್ ರೋಗಿ : ಈಗ್ತಾನೇ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಬರ್ತಾಯಿದ್ದೀನಿ. ನಾನು ಮಾಡಿದ ಹಲ್ಕ ಕೆಲ್ಸದಿಂದ ಈ ರೋಗ ಅಂಟಿಕೊಳ್ತು.

(ಅನ್ನುತ್ತಾ ಕೆಮ್ಮುವನು)

ನನಗಾದ ಗತಿ ಇನ್ಯಾರಿಗೂ ಬರಬಾರ್ದು.

(ರಂಗದ ಮೇಲೆ ಇನ್ನಿಬ್ಬರು ಪ್ರವೇಶಿಸಿ (ಗಂಡು-ಹೆಣ್ಣು), ಏಡ್ಸ್ ರೋಗಿಯ ಕುರಿತು)

ಗಂಡು : (ರೋಗಿ ನೋಡಿ) ಏನಪ್ಪ ಬಹಳ ಸುಸ್ತಾದವನಂತೆ ಕಾಣ್ತೀಯ.

ಹೆಣ್ಣು : ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಮಾಡಿಸ್ಕೋ.

ಏ ರೋಗಿ : ನಾನೀಗ ಆಸ್ಪತ್ರೆ ಇಂದಾನೇ ಬರ್‍ತಾ ಇರೋದು. ಬಹಳ ದಿನ ಆಸ್ಪತ್ರೇಲಿಯೇ ಇದ್ದೆ.

ಗಂಡು : ಅಲ್ವೋ ಮಾರಾಯ
ಎಲ್ರೂ ಆಸ್ಪತ್ರೆಗೆ ಹೋಗೋದು ಕಾಯಿಲೆನಾ ವಾಸಿ ಮಾಡಿಸ್ಕೊಂಡು ಬರೋಕೆ
ನಿನ್ಮಾತ್ಕೇಳ್ತಾ ಇದ್ರೆ ಬಹಳ ವಿಚಿತ್ರ ಅನ್ನಿಸ್ತೈತೆ

ಹೆಣ್ಣು : ನಿನಗೆ ಬಂದಿರೋ ಕಾಯಿಲೆಯಾದ್ರು ಏನಪ್ಪ ಮಾರಾಯ

ಏ ರೋಗಿ : (ಅಪಮಾನದಿಂದ ಅಳುಕುತ್ತಿರುವಾಗ)
ನನಗೆ ಬಂದಿರೋದು (ಮುಖ ನೋಡಿ ಅವರುಗಳ)
ಏಡ್ಸ್ ರೋಗ ಕಣವ್ವ

ಗಂಡು-ಹೆಣ್ಣು : (ಬೆಚ್ಚಿಗೆ) ಏಡ್ಸ್ ..... ಅಯ್ಯೋಯ್ಯಪ್ಪ ಓಡ್ರೋ..........
(ಕಕ್ಕಾಬಿಕ್ಕಿಯಾಗಿ ಓಡುವರು)

ಹೆಣ್ಣು : ಇವನ್ನ ಮಾತಾಡ್ಸಿದರೆ, ಕೆಮ್ಮಿದ್ರೆ, ನಮಗೆ ಅಂಟ್ಕೊಂತಾವಂತಿ,
ಮೊದಲು ಈ ಜಾಗ ಖಾಲಿ ಮಾಡೋಣ
ನಡಿ ನಡಿ ಬೇಗ ನಡಿ (ಎಂದು ಹೋಗುವರು)

ಏಡ್ಸ್ ರೋಗಿ : ಜನ ಹಿಂಗೆ ಹೆದರಿ ಓಡಿದ್ರೆ
ನಾನು ಯಾರತ್ರ ಆಶ್ರಯ ಪಡೆಯೋದು
ನನ್ಹೆಂಡ್ತಿ, ನಮ್ಮನೆಯವರೆಲ್ಲಾ ನನಗೆ ಏಡ್ಸ್ ಬಂದಿದೆ ಎಂದು
ತಿಳಿದು ನನ್ನತ್ರ ಯಾರು ಬಂದಿಲ್ಲ
(ಶೀನುತ್ತಾ, ಕೆಮ್ಮುತ್ತಾ, ನಿರ್ಗಮಿಸುವನು)

ಹಾಡು : ನಾ ಮೂವರು ಒಂದೇ
ನಮಗಿಲ್ಲ ಏನೂ ತೊಂದ್ರೆ
ಗಂಡು - ಹೆಣ್ಣು ಕೂಡಿದರೆ
ಅದೇ ನಮ್ಮ ಸಾಮ್ರಾಜ್ಯ, ಅಯ್ಯೋ ಪಾಪ, ಅಯ್ಯೊ ಪಾಪ

ಹೆಚ್ : ಈಗ ಹೋದ್ನಲ್ಲ ಅವನ ಕತೆ ಹೇಳ್ತೀನಿ ಕೇಳ್ರಿ
ಅಪ್ಪೇಸ್ವಾ ಸಿದ್ದಣ ಅಂತ
ಮನೆಕಟ್ಟೊ ಮೇಸ್ತ್ರೀ
ಮನೇಲಿ ಸುಂದ್ರವಾದ ಹೆಂಡ್ತಿ ಇದ್ರು, ಅವಳತ್ರ ಸಿಗದೆ ಇರೋ
ಸುಖ ಇನ್ನೊಬ್ರತ್ರ ಪಡಿತೇನಂತ, ಸೂಳೆಗೆರೆಗೆ ಹೋಗಿ ಸೂಳೆತನ
ಮಾಡಿ, ರೊಕ್ಕಾನು ಕೊಟ್ಟು, ರೋಗಾನು ಹಚ್ಕೊಂಡು ಬಂದ

ಐ : ಇನ್ನೇನ್ ಇಷ್ಟು, ಅವ್ನ ಹೆಂಡ್ತಿಗೂ ಹಚ್ಕೋನಿದ್ದ
ಅಷ್ಟರಲ್ಲಿ ನಾವು ಇವನಿಗೆ ತಗಲ್ಕೊಂಡಿದ್ವಿ ತೂಕ ಕಡಿಮೆ ಮಾಡ್ಸಿದ್ವಿ
ಇವನು ಸುಸ್ತಾದ, ಸೀದಾ ಆಸ್ಪತ್ರೆಗೆ ಹೋದ ಅಲ್ಲಿ ಪರೀಕ್ಷೆ
ಮಾಡಿದಾಗ ಮೇಲ್ನೋಟಕ್ಕೆ ತಿಳಿಲಿಲ್ಲ, ರಕ್ತ ಪರೀಕ್ಷಿಸಿದಾಗ

ಸಾಮೂರ್ಜನ ಇರೋದು ಗೊತ್ತಾಯ್ತು.
ಡಾ. ಹೇಳಿದ್ರು, ನಿನಗೆ ಬಂದಿರೋ ಕಾಯಿಲೆ ಏಡ್ಸ್
ಇದನ್ನ ವಾಸಿ ಮಾಡೋಕ್ಕಾಗಲ್ಲ, ಅಂತ,
ಸ್ವಲ್ಪ ದಿನ ಇಟ್ಕೊಂಡು ಚಿಕಿತ್ಸೆ ನೀಡಿ ವಾಪಸ್ ಕಳಿಸಿದ್ರು

ವಿ : ನೋಡಿದ್ರಾ ನಮ್ಮರಾಮತ್ತು
ನಾವೇನು ಇವನಿಗೆ ಸೂಳೆ ಮನೆಗೆ ಬಾ ಅಂತ ಕರಿದಿದ್ವಾ
ಇವನು ಬರೋದು ಬಂದ, ರೊಕ್ಕ ಕೊಟ್ಟು, ನಿರೋದ್ ಬಳಸದೆ
ರೋಗ ತಂದ್ಕೊಂಡಾ

ಹೆಚ್ : ಲೇ ಲೇ ಅಲ್ಲಿ ಯಾರೋ ಇಬ್ರು ಒಳ್ಳೆ ಮನಸ್ಸಿರೋರು.
ಈ ಕಡೆ ಬರ್ತಾಯಿದಾರೆ, ನಾವಿಲ್ಲೇ ಅವುತ್ಕೋಳ್ಳೋಣ

ಜಯ : ಈ ಪ್ರಪಂಚದಲ್ಲೇ ಶೇ ೫೦ ರಷ್ಟು ವಯಸ್ಕರು
ಈ ರೋಗಕ್ಕೆ ಬಲಿಯಾಗ್ತಾಯಿದಾರೆ

ವಿಜಯ : ಈ ರೋಗ ಕಾಣಿಸಿಕೊಂಡ ೧ ರಿಂದ ೧೧/೨ ವರ್ಷದೊಳಗೆ
ಸಾಯ್ತಾಯಿದಾರೆ
ಮಕ್ಕಳಿಗೆ ಈ ರೋಗ ಬಂದ್ರೆ ಇನ್ನೂ ಬೇಗನೆ ಸತ್ತೋಗ್ತಾರೆ
ಈ ರೋಗ ಅಂದರೆ ಏನಂತ ತಿಳ್ಕೊಂಡಿರಿ
ಹೆಚ್.ಐ.ವಿ. ಅನ್ನೋ ಈ ರೋಗ ಬರ್ತದೆ ಆದ್ರೆ, ಯಾವ ವೈರಸ್
ನಿಂದ ಈ ರೋಗ ಬರ್ತತೆ ಅಂದ್ರೆ ಕೇಳಿ.

ಜಯ : ಯೋನಿ, ಗುದದ್ವಾರ ಮತ್ತು ಬಾಯಿ ಇವುಗಳ ಸಂಪರ್ಕದಿಂದ
ರೋಗ ಹರಡುತ್ತದೆ

ವಿಜಯ : ನಿಮಗೆ ಈ ರೋಗಗಳ ಬಗ್ಗೆ ಪುನಃ ಹೇಳುತ್ತೇನೆ
(ಪಾಠ ಹೇಳಿದಂತೆ ಹೇಳುವನು)
ಏಡ್ಸ್ ಅಂದ್ರೆ ಹೆಚ್.ಐ.ವಿ. ರೋಗಾಣುವಿನಿಂದ ಬರುವ ರೋಗ.
ರೀ ಸ್ವಾಮಿ, ಈ ಮಾತಿಗೆ ಬೇಜಾರ್ಯಾಕ್ರಿ
ಹೆಚ್.ಐ.ವಿ. ಅಂದ್ರೆ,
ಹ್ಯೂಮನ್ ಇಮ್ಯೂನೋ ಡಿಫಿಸಿಯೆನ್ಸಿ ವೈರಸ್
ಅಂತ ಇದರ ಹೆಸ್ರು
ಈ ಸೋಂಕು ತಗುಲಿತ ಮನುಷ್ಯನಿಗೆ ೨ ರಿಂದ ೧೦ ವರ್ಷಗಳ
ಕಾಲ ಯಾವುದೇ ರೋಗದ ಚಿಹ್ನೆಗಳು ಕಂಡುಬರುವುದಿಲ್ಲ

ಜಯ : ಅಲ್ಲಾ ವಿಜಯ
ಆಗ್ಲೆ ನೀನು ಈ ರೋಗ ಬಂದ್ರೆ ೧ ರಿಂದ ೧೧/೨ ವರ್ಷದೊಳಗೆ ಸಾಯ್ತಾರೆ ಅಂತ ಹೇಳ್ದಿ ಈಗ್ನೋಡಿದ್ರೆ ರೋಗ ಬಂದು ೨ ರಿಂದ ೧೦ ವರ್ಷದೊಳಗೆ ಏನೂ ಗೊತ್ತಾಗಲ್ಲ ಅಂತಿಯಾ

ವಿಜಯ : ನಾನೇಳಿದ್ದು ಯಾವ ಮನುಷ್ಯನಲ್ಲಿ ರೋಗ ನಿರೋಧಕ ಶಕ್ತಿ ಕಮ್ಮಿ ಇರುತ್ತೋ ಅಂತವನು ಬೇಗ ಸಾಯ್ತಾನೆ. ಯಾಕೆ ಅಂದ್ರೆ ಹೆಚ್.ಐ.ವಿ. ರೋಗಾಣು ಸೋಂಕು ತಗುಲಿದ ಮನುಷ್ಯರಿಗೆ ದೇಹ ದಲ್ಲಿರುವ ರೋಗ ತಡೆಗಟ್ಟುವ ಶಕ್ತಿಯನ್ನು ಈ ಹೆಚ್.ಐ.ವಿ. ವೈರಸ್ಸುಗಳು ನಾಶ ಮಾಡುತ್ತವೆ. ಅಂದ್ರೆ ರಕ್ತದ ಕಣ ಕಣಗಳಲ್ಲೂ ಈ ರೋಗಾಣುಗಳೇ ಇರುತ್ತವೆ.
ಈ ರೋಗ ಅಂಟಿಕೊಂಡ್ರೆ ಇದರ ಜೊತೆಗೆ ಬೇರೆ ಬೇರೆ ರೋಗಗಳು ಬಂದು ನಮ್ಮ ಪ್ರಾಣವನ್ನೇ ಕೊಂಡೊಯ್ಯುವೆ

ಜಯ : ನೀನು ಇಷ್ಟೆಲ್ಲ ಹೇಳಿದ್ಮೇಲೆ ನನಗೆಲ್ಲಾ ಅರ್ಥಾತು ನಾನು ಆರೋಗ್ಯದ ಬಗ್ಗೆ ಹಾಗೂ ಏಡ್ಸ್ ಬಗ್ಗೆ ಓದಿದೀನಿ. ಸೋಂಕಿರುವ ವ್ಯಕ್ತಿಯ ರಕ್ತ, ವೀರ್ಯ, ಯೋನಿ ದ್ರವಗಳಲ್ಲಿ ಈ ರೋಗಾಣು ಅಂದ್ರೆ ಹೆಚ್.ಐ.ವಿ. ಹೆಚ್ಚಾಗಿರುತ್ತದೆ.

ವಿಜಯ : ನಾವು ಇಷ್ಟೋತ್ತನಕ ಏಡ್ಸ್ ಬಗ್ಗೆ ಹೇಳಿದ್ವಿ
ಈಗ ನಾನು ನೀನು ಸೇರಿ ಒಂದು ಪದ ಹಾಡೋಣ

ಜಯ : ಪದ ಹೇಳೋದು ಇದ್ದದ್ದೆ ಹೇಳೋಣಂತ ತಡಿ
ನಮ್ಮ ದೇಶ ಭಾರತ, ಇಲ್ಲಿ ಎಂತಂತ ಮಹಾನ್ ವ್ಯಕ್ತಿಗಳು ಹುಟ್ಟಿ ಸತ್ಯ ಸಂದೇಶಗಳನ್ನು ಸಾರಿ ಹೋಗಿದ್ದಾರೆ

ವಿಜಯ : ನಮ್ಮ ದೇಶದಲ್ಲಿ ಶ್ರೀರಾಮಚಂದ್ರ ಹುಟ್ಟಿಲ್ವೇನು?

ಜಯ : ಶ್ರೀರಾಮಚಂದ್ರನಿಗೆ ಎಷ್ಟು ಜನ ಹೆಂಡ್ತಿಯರಿದ್ರು

ವಿಜಯ : ಒಬ್ಬಳೇ ಒಬ್ಬಳು, ಮಹಾತಾಯಿ ಸೀತಾದೇವಿ ಅಂತಾ
ಅಲ್ಲಿಗೆ ಗಂಡ-ಹೆಂಡ್ತಿ ಇಬ್ರೆ ತಾನೆ ಇದ್ದದ್ದು ಅವರಿಬ್ರಲ್ಲಿ ಇದ್ದದ್ದು ಮುಗ್ಧ ಪ್ರೀತಿ - ಪ್ರೇಮವಲ್ಲವೇ
ಆವಾಗ ಎಲ್ಲಿತ್ತಪ್ಪ ಈ ಮಹಾಮಾರಿ ಏಡ್ಸ್

ಜಯ : ಅವ್ರಿಗೆ ಎಷ್ಟು ಜನ ಮಕ್ಳು.

ವಿಜಯ : ಲವ-ಕುಶ ಎಂಬ ಇಬ್ಬರೇ ಇಬ್ಬರು
ಆವಾಗ ಎಲ್ಲಿತ್ತಪ್ಪ ಈ ಫ್ಯಾಮಿಲಿ ಪ್ಲಾನಿಂಗು
ಆದ್ರೂ, ಈ ಅನೈತಿಕತೆ ವಿರುದ್ಧ ಮತ್ತು ಅತಿ ಸಂತಾನದ ವಿರುದ್ಧ
ಆವಾಗ್ಲೇನೆ ಈ ರಾಮ - ಸೀತೆ ಹೇಳಲಿಲ್ವ.

ಜಯ : ಒಂದು ಗಂಡಿಗೆ ಒಂದು ಹೆಣ್ಣು
ಒಂದು ಹೆಣ್ಣಿಗೆ ಒಂದು ಗಂಡು ಎಂಬ ನೀತಿಯನ್ನು
ಆವತ್ತೇ ಸಾರಿದ್ದಾರೆ
ಆದ್ರೆ ಇದನ್ನೆಲ್ಲಾ ನಮ್ಮ ಜನಕ್ಕೆ ಹೇಳೋದ್ಯೆತಲ್ಲ
ಇದು ನಮ್ಮ ಗ್ರಹಚಾರ

ವಿಜಯ : ಗ್ರಹಚಾರ ಅಲ್ಲಾ ಕಣಯ್ಯಾ
ನಾವುಗಳು ಹೇಳಿಲ್ಲ ಅಂದ್ರೆ,
ಇನ್ನೂ ಈ ಜನ ಸತ್ಯದ ಬಗ್ಗೆ ತಿಳ್ಕೋಳ್ಳೋದೇ ಇಲ್ಲ

ಜಯ : ಈ ದೇಹ ಅಂದ್ರೆ ಎಂಥ ದೊಡ್ಡ ಸಂಪತ್ತು ಅಂತೀಯಾ

ವಿಜಯ : ಈ ಜನ ಈ ದೇಹ ಅಂದ್ರೆ
ಬರೀ ರಕ್ತ, ಮಾಂಸ, ಮೂಳೆ ಅಂತ ತಿಳ್ಕೊಂಡಿದ್ದಾರೆ
ಅದರೊಳಗೊಂದು ಮನಸ್ಸು ಐತಿ ಅಂತ ಗೊತ್ತೈತೋ ಇಲ್ಲೋ

ಜಯ : ಆ ಮನಸ್ಸನ್ನು ಎತ್ತತ್ತಾಗೋ ಹರಿಬಿಟ್ಟು
ಕಾಮ-ಗೀಮಾ ಈ ಕಚ್ಚೆರಕುತನ, ಲಜ್ಜೆಗೇಡಿತನ
ಇವನ್ನೆಲ್ಲ ಯಾರು ಮಾಡೂಂತ ಹೇಳಿದ್ರಪ್ಪ

ವಿಜಯ : ಅದ್ಕೇ ಕಣಪ್ಪ
ಮನಸ್ಸನ್ನು ಹದ್ದುಬಸ್ತಿನಲ್ಲಿಡೋದೆ ಈ ಬುದ್ಧಿಯ ಕೆಲಸ
ನನಗೆ ಒಂದೊಂದ್ಸಲ ಅನ್ನುಸ್ತೈತಿ
ಈ ಜನಗಳ ತಲೆಯಲ್ಲಿ ಮನಸ್ಸು ಬುದ್ಧಿ ಐತೋ ಇಲ್ಲೋ ಅಂತ

ಜಯ : ನಂಗೂ ಅದೇ ಅನುಮಾನ
ಈ ಮನುಷ್ಯರ ತಲೆಯಲ್ಲಿ ಮನಸ್ಸಿದ್ರೆ ಬುದ್ಧಿ ಮಾಯವಾಗ್ತದೋ
ಬುದ್ಧಿ ಇದ್ರೇ ಮನಸ್ಸು ಮಾಯ ಆಗ್ತದೋ ಗೊತ್ತಿಲ್ಲ
(ಅಷ್ಟರಲ್ಲಿ ರಂಗದ ಹಿಂಬದಿಯಿಂದ ನಟಿ ಓಡಿ ಬರುವಳು)

ನಟಿ : (ಓಡಿ ಬರುತ್ತಲೇ) ಅಯ್ಯೋ ಪುಣ್ಯಾತ್ಮರಾ
ಇವರಿಗೆ ಮನಸ್ಸು ಬುದ್ಧಿ ಅಂತಾ ಹೇಳಿದ್ರೇ ಏನೂ ತಿಳಿಯಕ್ಕಿಲ್ಲ. ಈಗ ನಾನು ಹೇಳ್ತೀನಿ ಕೇಳಿ. ಕಾಲಿಗೆ ಮುಳ್ಳು ಚುಚ್ಚಿದ ತಕ್ಷಣ, ಮನಸ್ಸು ಅಯ್ಯೋ ಅನ್ನುತ್ತೆ. ಬುದ್ಧಿ ಆ ಮುಳ್ಳಿನ ತಗಿ ಅಂತಾ ಆ ಮನಸ್ಸಿಗೆ ಹೇಳುತ್ತೆ. ಮನಸ್ಸಿನ ಹಿಂದೆ ಬುದ್ಧಿ ಸದಾ ಕೆಲಸ ಮಾಡುತ್ತಿರುತ್ತದೆ. ಅದೂ, ಒಳ್ಳೆಯದಕ್ಕಾಗಿ. ಈ ಜನರ ಮಂಗ್ಯಾನಂತ ಮನಸ್ಸೈತಲ್ಲ, ಅದು ಕೊಂಬೆಯಿಂದ ಕೊಂಬೆಗೆ ಹಾರ್ತಾ ಇರ್ತದೆ. ಅದನ್ನು ಹಿಡಿದೆಳೆಯೋ ಕೆಲ್ಸ ಈ ಬುದ್ಧೀದು.

ಜಯ : ಸರಿ ಈಗ ನಾನು ಮನಸ್ಸು, ನೀನು ಬುದ್ಧಿ (ನಟಿಯನ್ನು ತೋರಿಸಿ). ನೀನು ಶರೀರ (ವಿಜಯ) ನಾಮೂರ್ಜುನ ಸೇರ್ಕೊಂಡು, ಈ ಜಗತ್ತಿನ ಜನರಿಗೆ ದೇಹದ ಬಗ್ಗೆ ವಿಚಾರ ಹೇಳೋಣ. ಪ್ರೀತಿ, ಪ್ರೇಮ, ಕಾಮದ ಬಗ್ಗೆ ಪದ್ಯ ಹಾಡೋಣ.
(ಮೂರು ಜನಾ ಕೈ ಮೇಲೆತ್ತಿ ಪದ್ಯ ಹಾಡುವರು)
(ಹಾಡು)
ದೇಹ ದೇಹದ ಕೂಟ
ಅಲ್ಲಾ ಬರೀ ತೀಟೆ
ಜೀವ ಫಲ ಫಲಿಸಲು ಸೃಷ್ಟಿಯ ಆಟ
ಪ್ರೇಮ ಕಾಮಗಳು ಅವಳಿ-ಜವಳಿಗಳು
ಹದವಾಗಿ ಬೆರೆತರೆ ಬದುಕೇ ಹಸನಾಗುವುದು
ಈ ಪದ್ಯಗಳ ಅರ್ಥ ನೀವು ಮಾಡ್ಕೊಳ್ಳಿದ್ರೆ ಜೀವನದಲ್ಲಿ ಹೆಚ್‌ಐವಿ ಜೊತೆ ಆಟ ಆಡಿದ್ರೆ, ನೀವೇನಾಗ್ತೀರೋ ಗೊತ್ತಾ.
ಬಂದ್ಹಾಂಗ ಆಡಿದರೆ ಬದುಕೆ ತುಂಪಾಗುವುದು
ಮಾಡಿದ ಮಾಟದ ಊಟ ಮಾಡಲೇ ಬೇಕು
ನೀವೇನಾದ್ರೂ ಅಪ್ಪಿ-ತಪ್ಪಿ ದೇಹ ಸಂಪರ್ಕ ಇಟ್ಕಂಡ್ರಿ ಅಂದ್ರೆ,
ಕಾಮುಕ ತನವೇ ಕಾಮಾಲಿ ರೋಗ
ಕಚ್ಚೆ ಸಡಿಲಾದರೆ ಏಡ್ಸೆಂಬ ರೋಗ
ಈ ಹಾಡಿನ ಅರ್ಥ ಮಾಡ್ಕೊಳ್ಳೋದ್ರ ಜೊತೆಗೆ ನಮ್ಮ ಕಾಡು, ನಾಡು, ಜಲ ಸರಿ ಇಟ್ಕೋಬೇಕು.
ಕಾಡು-ನಾಡಿನ ಹಿತವೇ ನರನಾಡಿ ಮಿಡಿತ
ಎರಡಳಿದು ಕೂಡುವುದೇ ಸಮತೋಲನದಾಟ

ವಿಜಯ : ಇಷ್ಟು ವಿಚಾರಾನ ನಿಮಗೆಲ್ಲಾ ಹೇಳಿದ್ದೀವಿ. ಇನ್ನೇನು ನಡೀತ್ತೈತೋ ನೋಡಿ.

(ಮೇಲಿನ ಹಾಡನ್ನು ಗುನುಗುತ್ತಾ ನಿರ್ಗಮಿಸುವರು)

(ಅವಿತುಕೊಂಡಿದ್ದ ಹೆಚ್‌ಐವಿಗಳು ಹಾಡುತ್ತಲೇ ರಂಗ ಪ್ರವೇಶಿಸುವರು)

ನಾ ಮೂವರು ಒಂದೇ ನಮಗಿಲ್ಲ ಏನೂ ತೊಂದ್ರೆ

ಗಂಡು-ಹೆಣ್ಣು ಕೂಡಿದರೆ

ಅದೇ ನಮ್ಮ ಸಾಮ್ರಾಜ್ಯ- ಅಯ್ಯೋ ಪಾಪ, ಅಯ್ಯೋ ಪಾಪ

ಬನ್ನಿ ಬನ್ನಿ ನಾವ್ ನಿಮಗೆ

ದುಃಖದ ಸಂಗತಿಯನ್ನು ಸಂತೋಷವಾಗಿ ಹೇಳ್ತೀವಿ.

ಐ : ಈ ಸತ್ಯ ಹೇಳೋರ ಮಾತನ್ನು ನೀವ್ಯಾರು ನಂಬ್ಯಾಡಿ

ನೀವು ಎಂದಿದ್ರು ಸಾಯಲೇ ಬೇಕು

ಸುಖದಾಗೇ ಸುಖ ಸಿಗೋದು ಬಹಳ ಕಷ್ಟ

ಸುಲಭದಲ್ಲಿ ಸಿಗೋ ಈ ಕಾಮಕ್ಕೆ ಅಷ್ಟ್ಯಾಕೆ ಕಷ್ಟ

ವಿ : ನಾವು ನಿಮಗಾಗಿ ಹುಟ್ಟಿದೆವಾ

ಅಲ್ಲಾ ನೀವೇ ಯೋಚ್ನೆ ಮಾಡಿ

ಹೆಚ್ : ಶತಶತಮಾನದ ಹಿಂದೆ ನಿಮ್ಮ ಕಚ್ಚೆಗಳು ಸಡಿಲ ಆದ್ವಲ್ಲಾ

ಸಂದಿ-ಗೊಂದಿ ಬಿಡದಂಗೆ ಹೋದ್ರಲ್ಲ

ಐ : ಈಗ್ಲೋ ಹೋಗ್ತಾ ಇದ್ದೀರಲ್ಲ

ವಿ : ಆವಾಗ ಹುಟ್ಕಂವಿ ಕಣಪ್ಪ, ನಿಮ್ಮಿಂದಾನೆ

ಸ್ವಲ್ಪ ಬೆಳೆಯೋ ತನಕ ಸುಮ್ಕಿದ್ವಿ

ಈ ೨೧ನೇ ಶತಮಾನದಾಗ ನಮ್ದೇ ಸಾಮ್ರಾಜ್ಯ

ಹೆಚ್ : ಯಾಕೆ ಅಂತೀರಾ,

ಈಗೊಂದು ೧೫೦ ವರ್ಷದ ಹಿಂದೆ

ಈ ಪ್ರಂಪಚದಲ್ಲಿ ಒಂದು ನೂರು ಕೋಟಿ ಜನ ಇದ್ರು

ಆವಾಗ ನಾವು ಗುಪ್ತವಾಗಿದ್ವಿ

ನಮ್ಮ ಹೆಸರೇನು ಅಂತ ಗೊತ್ತಿರಲಿಲ್ಲ

ಈಗ ಕಂಡು ಹಿಡಿದಿದ್ದಾರೆ

ನನ್ಹೆಸರು ಹ್ಯೂಮನ್

ಐ : ನನ್ನೆಸರು ಇಮ್ಯೂನೋ ಡಿಫಿಸಿಯೆನ್ಸಿ

ವಿ : ನನ್ನೆಸರು ವೈರಸ್. ಈ ಮೂರನ್ನು ಸೇರ್ಸಿದ್ರೆ ಹೆಚ್‌ಐವಿ

ಐ : ಲೇ, ಆ ಕಡೆಯಿಂದ ಯಾರೋ ಬರ್ತಾ ಇದ್ದಾರೆ. ಅವರೇನು ಒಳ್ಳೆ ಮನಸ್ಸಿನವರೇ, ಇಲ್ಲ ದುರ್ಬಲ ಮನಸ್ಸಿನವರೋ ನೋಡೋಣ. ಅವ್ರು ಏನ್ಮಾಡ್ತಾರೋ ನೋಡೋಣ.
(ಇಬ್ಬರು ಮಾತನಾಡುತ್ತಿರುವಾಗ ಮಂಗ-ಮುಷ್ಯಾ ಎಂಬ ಇಬ್ಬರು ನಟರುಗಳು ರಂಗ ಪ್ರವೇಶಿಸುವರು)

ವಿ : ಬನ್ನಿ, ಬನ್ನಿ, ಬನ್ನಿ

ಮಂಗ : ಯಾರಪ್ಪ ನೀವು, ನೀವು ಮೂವರು ವಿಚಿತ್ರವಾಗಿ ಕಾಣ್ತಾ ಇದ್ದೀರಿ.

ಮುಷ್ಯಾ : ನೀವೆಲ್ಲಾ ವಸ್ತುಗಳಂತೆ ಕಂಡ್ರು, ಜೀವ ಇದ್ದಂಗೆ ಕಾಣಿಸ್ತೀರಿ.

ಹೆಚ್ : ನಿನ್ನತ್ರ ಸುರಕ್ಷಿತವಾಗಿರೋ ವಸ್ತು, ನಿರೋಧ್ ಇಲ್ಲ ತಾನೆ.

ಮಂಗ : ನಂಗೆ ಅರ್ಥ ಆಗ್ಲಿಲ್ಲ.

ಐ : ನಿನಗೆ ಅರ್ಥ ಆಗೋದೇ ಬೇಡ ಅದು. ಅರ್ಥ ಆಗೋದೂ ಇಲ್ಲ.

ವಿ : ಈ ಊರಿನಲ್ಲಿ ಆರೋಗ್ಯ ಇಲಾಖೆಯವರು ಈ ಏಡ್ಸ್ ಬಗ್ಗೆ ದೂರ ಇರಿ ಅಂತಾರಲ್ಲ ಅದನ್ನ ಕೇಳಿಲ್ಲ ತಾನೆ.

ಮುಷ್ಯಾ : ಅವ್ರು ಏನೇನೋ ಹೇಳ್ತಾ ಇರ್ತಾರೆ. ಅಷ್ಟಾಗಿ ಗಮನಿಸಿಲ್ಲ. ಆದಿರ್ಲಪ್ತ. ನೀವು ಎಲ್ಲಿಂದ ಬಂದಿದ್ದೀರಿ, ಎಲ್ಲಿಗೋಗ್ತೀರಿ. ಅದನ್ನಾದ್ರೂ ಹೇಳ್ರಿ. ನಮಗೆ ಕೆಲ್ಸ ಇದಾವೆ. ಗ್ಯಾರೇಜಿಗೆ ಹೋಗ್ಬೇಕು. ದುಡಿಮೆ ಮಾಡ್ಬೇಕು (ಮಂಗನಿಗೆ) ಲೇಯ್ ಮಂಗ, ಲೇ ಮಂಗ ಬಾ ಹೋಗೋಣ ಹೊತ್ತಾಯ್ತು.

ಮಂಗ : ಸ್ವಲ್ಪ ತಡಿಯೋ ಮುಷ್ಯಾ, ಇವರು ಏನು ಹೇಳ್ತಾರೋ ಕೇಳೋಣ.

ಮುಷ್ಯಾ : ಏಯ್ ಅದೇನು ಹೇಳ್ತೀರಿ ಹೇಳಿ ಬೇಗ.

ಹೆಚ್‌ಐವಿ : ಹೇಳ್ತೀವಿ, ಹೇಳ್ತೀವಿ, ಅವಸರ ಬೇಡ.

ಹೆಚ್ : ದುಡಿಮೆ ಮಾಡೋದು ಇದ್ದದ್
ನೀವು ಸುಖವಾಗಿರೋದು ಯಾವಾಗ
ನಾವು ಹೋದ ಶತಮಾನದಿಂದ ನಿಮ್ಮೊಂದಿಗೇ ಇದ್ದೀವಿ.

ಐ : ಎಲ್ಲಾ ಕಡೇನೂ ಇರ್ತಿವಿ.

ವಿ : ದೇಶ ವಿದೇಶಗಳನ್ನು ಸಂಚರಿಸುತ್ತಾ ಮುಕ್ತವಾಗಿ ಹರಡಿಕೊಳ್ತಾ ಇದ್ದೀವಿ.

ಮುಷ್ಯಾ : ನೀವು ಹೇಳೋ ಮಾತುಗಳು ನಮಗೊಂದೂ ಅರ್ಥವಾಗ್ತಾ ಇಲ್ಲ. ನಾವು ಒಂದು ಬಸ್ಸು ರಿಪೇರಿ ಮಾಡ್ತೋದ್ವೆತಿ. ಇವತ್ತೇ ರೆಡಿ ಮಾಡಿ ಕೊಡಬೇಕು. ಬಸ್ ಮಾಲೀಕರಿಗೆ ಇವತ್ತು ಕೊಡ್ತೀವಿ ಅಂತ ಹೇಳಿದ್ದೀವಿ.

ಹೆಚ್ : ಓ....ಓ.... ಮನಸ್ಸಿರೋ ಮುಷ್ಕಿಯಣ್ಣ ನಿನಗೋಸ್ಕರ ಒಂದು ಬಸ್ ರೆಡಿ ಮಾಡ್ಕೋ ಅಂದ್ರೆ,

ಮುಷ್ಯಾ : ಏ ಕೆಟ್ಟ ಮುಸಡಿಗಳೇ ಇದನ್ನೆಲ್ಲಾ ನಮಗ್ಯಾಕೆ ಹೇಳ್ತೀರಿ.

ಐ : ಈ ಸುಂದರವಾದ ಮುಸಡಿಗೆ ಕೆಟ್ಟ ಮುಸಡಿಗೆ ಅಂತೀಯಾ, ವರವೇ ಶಾಪ, ಶಾಪವೇ ವರ. ನಿನ್ನ್ ಮನಸ್ಸಿನಲ್ಲಿರುವ ಮತ್ತೆ ಕಾಮವನ್ನು ಕೆರಳಿಸ್ಕೋ.

ಮಂಗ : ನೀವು ಹೇಳ್ತೀರೋ ಮಾತುಗಳನ್ನು ಕೇಳಿದ್ರೆ ವಿಚಿತ್ರವಾಗಿದೆ. ಅದ್ರೂ ಖುಷಿ ಕೊಡ್ತಾ ಇದೆ.

ವಿ : ನಾವು ನಿಮ್ಮೆದುರಿಗೆ ಕಂಡ್ರು, ಕಾಣ್ತಾ ಇರೋ ಸುಖ ಅಂತದ್ದು. ನಿಮ್ಮ ಮನಸ್ಸಿನ ಖುಷಿ ನಿಮಗೆ.

ಹೆಚ್ : ನನ್ನ ಸ್ನೇಹಿತ ಮಿತ್ರ ಶತ್ರುಗಳೇ, ದುರ್ಬಲ ಮನಸ್ಸಿನ ಮನುಷ್ಯರೇ, ನಾವು ಏನೂ.... ಮಾಡಿಲ್ಲ.

ಐ : ನಿಮ್ಮ ಸುಖಕ್ಕೋಸ್ಕರವಾಗಿ ನಿಮ್ಮ ಶರೀರದಲ್ಲಿರುವ ರೋಗ ನಿರೋಧಕ ಶಕ್ತಿಯನ್ನು ನಾಶ ಮಾಡ್ತೀವಿ ಅಷ್ಟೇ. ನಾವುಗಳು ನಿಮಗೆ ಅಂಟಿಕೊಂಡಾಗ ಸ್ವಲ್ಪ ಕೆಮ್ಮು, ನಿಮ್ಮ ದೇಹದ ತೂಕ ಕಡಿಮೆ ಮಾಡ್ತೀವಿ. ಸ್ವಲ್ಪ ಗಂಟಲು ಬಾವು ಇಷ್ಟೇ.

ವಿ : ಒಂದು ತಿಂಗಳು ತನಕ ಅತಿಸಾರ ಭೇದಿ ಮಾಡಿಸ್ತೀವಿ ಅಷ್ಟೇ. ಆಮೇಲೆ ನೀವು ಎಷ್ಟು ಜನರೊಂದಿಗಾದ್ರೂ ದೇಹ ಸಂಪರ್ಕ ಇಟ್ಕೋಬಹುದು.

ಹೆಚ್ : ಅವರಿಗೂ ನೀವು ಸುಖ ಕೊಟ್ಟಿದ್ದೇ ನಿಜವಾದ್ರೆ

ಐ : ನಾನು ನಿಮ್ಮ ಕೊರಳಿಗೆ, ಏನು ತಂದಾಕ್ತೀನಿ ಗೊತ್ತಾ? ಸಾವಿರ ಸಾವಿನ ಸರಮಾಲೆಯ ಸಾವಿನಂಗಡಿಯಿಂದ, ಸಾವಿರ ಸಾವಿನ ಸರಮಾಲೆ ತಂದು ಎಲ್ಲರಿಗೂ ಹಾಕ್ತೀವಿ.

ವಿ : ನಿಮಗೆ ಜೀವಂತ ನರಕದ ಸುಖ ತೋರಿಸ್ತೀವಿ. ಈ ಆರೋಗ್ಯ ಇಲಾಖೆಯವರು ಸುಮ್ ಸುಮ್ನೆ ನಂಬಗ್ಗೆ ಇಲ್ಲದ ಅಪಪ್ರಚಾರ ಮಾಡ್ತಾ ಇದ್ದಾರೆ.

ಹೆಚ್ : ಏಡ್ಸ್ ಏಡ್ಸ್ ಏಡ್ಸ್ ... ಅಂತಾ.

ಐ : ನಮ್ಮಾತು ಕೇಳಿದ್ರೆ ನಿಮಗೆ ಆಗನ್ನುಸ್ತದಾ.

ಮಂಗ : (ಬಹಳ ಸಂತೋಷದಿಂದ) ನೀವು ಹೇಳೋದ್ರಲ್ಲಿ ಏನೂ ತಪ್ಪಿಲ್ಲ (ಸ್ವಗತದಲ್ಲಿ) ನಿಮ್ಮಾತು ಕೇಳ್ತಾ ಇದ್ರೆ ನನಗೆ ಮೊದ್ಲೇನೇ ನನ್ನ ಮನಸ್ಸಿನಲ್ಲಿ ಬಾಳ ಆಸೆಗಳಿದ್ದಾವೆ.
ಈ ಬಸ್ ಮಾಲೀಕರ ಬಸ್ಸನ್ನು ಬೇಗ ರಿಪೇರಿ ಮಾಡಿ ದುಡ್ಡು ಇಸ್ಕೊಂಡು ಸಮ್ಮ ನಿಂಗಿ ಆ ಜಾಲಿ ಮರ್ದ ಪೊದೆಯತ್ತ ಬಾ ಅಂತ ಹೇಳಿದ್ದಾಳೆ. ಅವ್ಳಿಗೆ ೧೦೦ ಕೊಟ್ಟು, ಅಂಗೇನೇ ಕೆಲ್ಸ ಮುಗಿಸಿ ಕೊಂಡು ಮನೆಗೆ ಹೋಗಿ ನನ್ನೆಂಡತಿ ಕೈಯಾಗೆ ೩೦೦ ಕೊಟ್ಟು ಕೋಳಿ ತಿಂದು ಅವಳಿಗೂ ಸುಖ ಕೊಟ್ಟು ಸಂತೋಷವಾಗಿ ಮಲಗೋದು.

ಮುಷ್ಯಾ : (ಮಂಗನನ್ನು ತಿವಿಯುತ್ತಾ) ಏನಲೇ ಮಂಗ್ಯಾ, ಒಬ್ಬನೇ ಮಾತಾಡ್ಕೋತಾ ಹಗಲುಗನಸು ಕಾಣ್ತಾ ಇದ್ದೀಯಾ. ಬಾರಲೇ ಹೋಗೋಣ ಗ್ಯಾರೇಜಿಗೆ.

ವಿ : ಓಹೋ ಮುಷಿಯಣ್ಣಾ ಅವ್ನ ಆಸೆಗೆ ನೀನೇಕೆ ಅಡ್ಡ ಬರ್ತಿಯಾ. ಅವ್ನು ಹಗಲುಗನಸಾದ್ರೂ ಕಾಣ್ಲೀ, ಸಾವಿನಗನಸಾದ್ರೂ ಕಾಣ್ಲೀ. ಓ ಮಂಗಣ್ಣಾ, ನೀನು ನಿಂಗಿಯತ್ತ ಹೋಗುವಾಗ ನಿರೋಧ್ ತಗೊಂಡು ಹೋಗ್ಬೇಡ. ಯಾಕಂದ್ರೆ ಅದನ್ನು ಹಾಕ್ಕೊಂಡ್ರೆ ರೋಗ ಬರುತ್ತೆ.

ಮಂಗ : ನೀನು ಹೇಳ್ತಾ ಇರೋದು ಅಂಗಡಿಯಾಗ ಸಿಕ್ತತಿ. ಅದಕ್ಯಾಕೆ ೧೦ ರೂ. ಖರ್ಚು ಮಾಡ್ಬೇಕು ಅಂತ.

ಹೆಚ್‌ಐವಿ : ನೀವು ಇಬ್ರೂ ಹೋಗ್ಟನ್ನಿ. ಕೆಟ್ಟದ್ರಲ್ಲಿ, ಸುಖದಲ್ಲಿ ನಿಮಗಿಬ್ರಿಗೂ ಒಳ್ಳೆದಾಗ್ಲಿ.

(ಹೆಚ್‌ಐವಿಗಳು ಇದ್ದಕ್ಕಿದ್ದಂತೆ ಮುಷ್ತಾನನ್ನು ಬಿಟ್ಟು ರಂಗದ ಹಿಂಬದಿಗೆ ಕುಳಿತುಕೊಳ್ಳುವರು)

ಮುಷ್ತಾ : ಲೇ ಮಂಗ

ಆವಾಗ್ಲಿಂದ ನೋಡ್ತಾ ಇದ್ದೀನಿ. ಇಬ್ಬರೇ ಇದೀವಿ ಅದೇನೋ ಬಾಳ ನೀನೇನೋ ಮಾತಾಡ್ತಾ ಇದ್ಯಲ್ಲ.

ಮಂಗ : ಏನಿಲ್ಲ ಇವತ್ತು ಬೇಗ ಬಸ್ ಕೆಲ್ಸ ಮುಗ್ಸಿ ನಿನ್ನ ಕರ್ಕೊಂಡು ಒಂದು ಸಂತೋಷದ ಮಜಾ ತೋರಿಸ್ತೀನಿ ಬಾ. ನಡೀ, ನಡೀ ಹೊತ್ತಾಯ್ತು.

(ಎಂದು ನಿರ್ಗಮಿಸುತ್ತಿದ್ದಂತೆ ಜಯ-ವಿಜಯ ಆಗಮಿಸುವರು)

ಜಯ : ನೋಡಿದ್ರಾ. ನನ್ನ ಬಾಂಧವರೇ, ಈ ಏಡ್ಸ್ ರೋಗ ಎಷ್ಟು ಕೆಟ್ಟದ್ದು ಅನ್ನೋದು ನಿಮಗೆಲ್ಲಾ ಗೊತ್ತಾಯ್ತು. ಈ ರೋಗನ ಕಂಡು ಹಿಡಿಯಬೇಕು ಅಂದ್ರೆ ರಕ್ತ ಪರೀಕ್ಷೆ ಮಾಡ್ಸಿದ್ರೇ ಮಾತ್ರ ಈ ರೋಗ ಇರೋದು ಕಾಣುತ್ತದೆ. ಆದರೆ, ಏಡ್ಸ್ ರೋಗ ಬಂದೋನನ್ನು ನಾವು ಅವನನ್ನು ದೂರ ಇಡಬಾರ್ದು. ಇದು ಸಾಂಕ್ರಾಮಿಕ ರೋಗ ಅಲ್ಲ.

ವಿಜಯ : ಏಡ್ಸ್ ರೋಗಿಯ ಜೊತೆ ಕುಳಿತುಕೊಳ್ಳುವುದರಿಂದ ಈ ರೋಗ ಬರೋದಿಲ್ಲ. ಅಂತವರ ಜೊತೆ ಊಟ ಮಾಡುವುದರಿಂದ, ಕೈ ಕುಲುಕುವುದರಿಂದ ಈ ರೋಗ ಬರುವುದಿಲ್ಲ. ಅವನ ಹಾರೈಕೆ, ಶುಶ್ರೂಷೆ ಮಾಡಿದ್ರೆ ಈ ರೋಗ ಬರೋದಿಲ್ಲ. ಅವನು ಕೆಮ್ಮಿದರೆ, ಸೀನಿದರೆ ಈ ರೋಗ ಅಂಟುವುದಿಲ್ಲ.

ಏಡ್ಸ್ ರೋಗಿಗೆ ಕಚ್ಚಿದ ಸೊಳ್ಳೆ, ತಿಗಣೆಗಳು ನಮಗೆ ಕಚ್ಚುವು ದರಿಂದ ಈ ರೋಗ ಬರುವುದಿಲ್ಲ. ಇದನ್ನು ನೀವುಗಳು ತಿಳಿದು ಏಡ್ಸ್ ಬಂದಿದೆ, ಏಡ್ಸ್ ಬಂದಿದೆ ಎಂದು ಅವಮಾನ ಮಾಡುವು ದರಿಂದ ಅವನ ಮನಸ್ಸಿಗೆ ಚಿಂತೆ ಹೆಚ್ಚಾಗಿ ಬೇಗನೇ ಸಾವನ್ನು ಕಾಣುತ್ತಾನೆ.

ಅದ್ಕೆ ಅಂತವರನ್ನು ಸಂತೋಷದಿಂದ ಅವರೊಂದಿಗೆ ಕೂಡಿಕೊಂಡು ಆ ಜೀವವನ್ನು ಕೊನೆಗಾಣಿಸಬೇಕು.

ಸತ್ಯ : ಈ ರೋಗವನ್ನು ತಡೆಗಟ್ಟುವುದು ಹ್ಯಾಗೆ ಅಂತ ನಾನ್ಹೇಳ್ತೀನಿ. ನನ್ನೆಸ್ರು ಸತ್ಯ. ಸತ್ಯವನ್ನು ಹೇಳ್ತೀನಿ ಕೇಳಿ, ಲೈಂಗಿಕ ಜೀವನದಲ್ಲಿ ಒಂದು ಹೆಣ್ಣಿಗೆ ಒಂದು ಗಂಡು ಮಾತ್ರ ದೇಹ ಸಂಪರ್ಕ ಹೊಂದ ಬೇಕು. ಪುರುಷ ಅಥವಾ ಮಹಿಳೆಯರಲ್ಲಿ ಈ ರೋಗದ ಬಗ್ಗೆ ಸಂಶಯ ಇದ್ರೆ ನಿರೋಧನ್ನು ಬಳಸಬೇಕು. ಸ್ತ್ರೀ ಪುರುಷ ವ್ಯಭಿಚಾರಿ ಗಳೊಂದಿಗೆ ಲೈಂಗಿಕ ಸಂಪರ್ಕ ಹೊಂದಬಾರದು. ಮಾದಕ ವಸ್ತುಗಳನ್ನು ತೆಗೆದುಕೊಳ್ಳಬಾರದು. ಹೊಸ ಬ್ಲೇಡಿನಿಂದ ಪ್ರತಿಸಾರಿ ಸೇವಿಂಗ್ ಮಾಡಿಸಬೇಕು. ಹೊಸ ಸೂಜಿಯಿಂದ ಇಂಜೆಕ್ಷನ್ ಮಾಡಿಸಿಕೊಳ್ಳಬೇಕು. ಸ್ತ್ರೀಯರಿಗೆ ಈ ರೋಗ ತಗಲಿದ್ರೆ ಅವರು ಗರ್ಭ ಧರಿಸಬಾರದು.

ವಿಜಯ : ಈ ವಿಷಯವನ್ನು ನಾವು ನಿಮಗೆ ಯಾಕಿಷ್ಟು ಒತ್ತಿ, ಒತ್ತಿ ಹೇಳ್ತೀವಿ ಅಂದ್ರೆ, ನಿವ್ಯಾರೂ ಕೂಡಾ ಈ ಏಡ್ಸೆಂಬ ಮಹಾಮಾರಿಗೆ ಬಲಿ ಯಾಗಬಾರದು. ಈ ಏಡ್ಸ್ ರೋಗವನ್ನು ನಾವೆಲ್ಲ ಸೇರಿ ನಮ್ಮ ದೇಶದಿಂದಲೇ ಹೊರಗಾಕಬೇಕು.

(ವಿಜಯ ಹೇಳುತ್ತಿದ್ದಂತೆ ಏಡ್ಸ್ ಬಂದಾತು ನೋಡಣ್ಣಾ ಎಂಬ ಹಾಡು ಪ್ರಾರಂಭವಾಗುವುದು)

ಜಯ : ಏಡ್ಸು ಬಂದಾತು ನೋಡಣ್ಣಾ
ನಾವೆಲ್ಲಾ ಸೇರಿ ಓಡ್ಸಿ ಹೊರಗಾಕಬೇಕಣ್ಣಾ
ಕೆಮ್ಮು ದಮ್ಮು ಸೀನುಗಳಿಂದ
ಏಡ್ಸು-ಗಿಡ್ಸು ಸುಳಿಯುವುದಿಲ್ಲ
ಕೈಯ ಕುಲುಕಿ, ಮೈಯಮುಟ್ಟಿ ತಬ್ಬಿಕೊಂಡರೆ ತಟ್ಟುವುದಿಲ್ಲ
ಏಡ್ಸ್ ರೋಗಿಯ ಸಂಗದಿಂದ ಮರಣ ಯಾರಿಗೂ ತಪ್ಪಿದ್ದಲ್ಲ ॥
ರಕ್ತ ಕೊಡುವ ಪಡೆಯುವ ಮುನ್ನ
ರಕ್ತ ಪರೀಕ್ಷೆ ಮಾಡಿಸಬೇಕು
ಕುದಿಸಿದ ನೀರಲ್ಲಿ ಸ್ವಚ್ಛಗೊಳಿಸಿದ ಸೂಜಿ ಸಿರಿಂಜು ಬಳಸಲೇಬೇಕು
ಎಚ್ಚರ ವಹಿಸದೆ ಬಳಸಿದ್ದಾದರೆ ಏಡ್ಸ್ ಬಾರದೆ ಬಿಡುವುದೇ ಇಲ್ಲ ॥
ಹೆರುವ ತಾಯಿಗೆ ಏಡ್ಸ್ ಇದ್ದರೆ
ಮಗುವಿಗೂ ತಾನೇ ಹರಡುವುದು
ಅನ್ಯ ಪುರುಷರ ದೇಹಸಂಬಂಧಿ ಹೆಣ್ಣಿಗೂ ಏಡ್ಸ್ ಹರಡುವುದು
ಸಂದಿ-ಗೊಂದಿ ಹಿಡಿದು ಸಾಯುವ ಮಂದಿಗೊಡವೇ ಸಾಕೇ ಸಾಕು ॥

ಮದ್ದು ಮುಲಾಮು ಔಷಧಿಯಲ್ಲ
ಏಡ್ಸ್ ಸೋಂಕಿಗೆ ಇಲ್ಲವೇ ಇಲ್ಲ
ಇದರ ವಾಸಿಗೆ ವೈದ್ಯ ತಜ್ಞರು ಸತತ ಪರಿಶ್ರಮ ಪಡುತ್ತಿಹರಲ್ಲ
ಮುನ್ನೆಚ್ಚರಿಕೆ ನೀತಿ ಒಂದೇ
ಏಡ್ಸ್ ತಡೆಯಲು ಬನ್ನಿರಿ ಮುಂದೆ.

❑



# ವಿಸರ್ಜನೆ

*- ಶಂಕರಯ್ಯ ಆರ್. ಘಂಟಿ*

(ಬೀದಿಯಲ್ಲಿ ಕಲಾವಿದರ ವೃತ್ತದಿಂದ ಎದ್ದು ಜನರನ್ನುದ್ದೇಶಿಸಿ ಮಾತನಾಡಲು ಪ್ರಾರಂಭಿಸುತ್ತಾನೆ)

ಸೂತ್ರಧಾರ : ನಮಸ್ಕಾರ ಮಹಾಜನಗಳಿಗೆ. ನಾವು ಇಲ್ಯಾಕೆ ಸೇರಿದ್ದೀವಿ ಅಂತ ನಿಮಗೆ ಈಗ ಅನಿಸಿರಬಹುದು ಅಲ್ವಾ? ಹೇಳ್ತೀನಿ. 'ವಿಸರ್ಜನೆ' ಅಂತ ಒಂದು ಬೀದಿ ನಾಟ್ಕ ಆಡಲಿಕ್ಕೆ ಬಂದಿದ್ದೀವಿ. ನಿಮ್ಮೆಲ್ಲರ ನಡುವೆ ಈ ನಡು ಬೀದಿಯಲ್ಲಿ ಕುಳಿತಿದ್ದೇವೆ. ನೋಡಿ ನಾವೆಲ್ಲ ನಿಮಗಿಂತ ಚಿಕ್ಕವರು. ಎಷ್ಟಂದ್ರೂ ನೀವು ದೊಡ್ಡವರು. ಈ ನಾಟಕ ದಲ್ಲಿ ಸಣ್ಣಪುಟ್ಟ ತಪ್ಪುಗಳಾದರೆ ನಿಮ್ಮ ತಮ್ಮಂದಿರು ಮಾಡಿದ ತಪ್ಪು ಅಂತ ಹೊಟ್ಟೇಲೀ ಹಾಕ್ಕೊಳ್ಳಿ.
ದಯವಿಟ್ಟು ಗಲಾಟೆ ಮಾಡಬೇಡಿ. ಈ ನಾಟಕಕ್ಕೆ ಕುಂದು ತರಬೇಡಿ. ಕೇಳಿ, ಹಾಂ.. ನೋಡಿ ನಾಟಕ 'ವಿಸರ್ಜನೆ' ಹಾಂ.. ಹಾಂ.. ವಿಸರ್ಜನೆ ಅಂದ ತಕ್ಷಣ ಈ ಗಣಪತಿ ವಿಸರ್ಜನೆ ಅಂದು ಕೊಂಡೀರಾ? ಇದು ಗಣಪತಿ ವಿಸರ್ಜನೆ ಬಗ್ಗೆನೂ ಅಲ್ಲ, ಯಾವ ದೇವಾದಿ ದೇವತೆಗಳ ಬಗ್ಗೆನೂ ಅಲ್ಲ.
ನಮ್ಮ ದೇಶದೊಳಗೆ ದಿನಾ ಬೆಳಗಾದರೆ ಸಾಕು, ಕೋಟ್ಯಾಂತರ ಮಂದಿ ನಮ್ಮ ಅಣ್ಣಾ ತಮ್ಮಂದಿರು ಅಕ್ಕ ತಂಗಿಯರು, ಅನುಭವಿಸುತ್ತಿರುವ ದಿನನಿತ್ಯದ ಸಮಸ್ಯೆ.... ಯಾರಿಗೂ ಹೇಳೋಕ್ಕೂ ಆಗಲ್ಲ ಹೇಳದೇ ಇರೋದಕ್ಕೂ ಆಗಲ್ಲ.... ಅಂತಾ ಸಮಸ್ಯೆಯ ವಿಷಯ ಹೊಂದಿದ ಈ ನಾಟಕ ವಿಸರ್ಜನೆ. ಹಾಂ. ಇದರ ಸೂತ್ರಧಾರ ನಾನೇ.

ಸಾರಥಿ : (ವೃತ್ತದಿಂದ ಎದ್ದು) ಅಥವಾ (ಜನರ ಮಧ್ಯದಿಂದಲೇ ಬಂದು)
ಏನಪಾ ಸೂತ್ರಧಾರ ಮಹಾಶಯ ಏನೇನೋ ಭಾರೀ ಭಾರೀ ಮಾತ ಹೇಳ್ಳೀಕತ್ತಿಯಲಾ? ನೋಡಪಾ ನಮ್ಮ ಊರಾಗ ಅಂತಿಂಥಾ

ಮಂದಿಲ್ಲಾ. ಭಾರೀ ಭಾರೀ ಕುಳಗಳೇ ಇದಾರೆ ನೀನು ಮಾತಾಡಿದ್ದ ರಲ್ಲಿ ಏನಾದರೂ ಸ್ವಲ್ಪ ಹೆಚ್ಚು ಕಮ್ಮಿ ಆಯ್ತೋ ನಿನ್ನ ಕಚ್ಚೇನೇ ಬಿಚ್ಚಿತಾರೆ (ಎಂದು ಕಚ್ಚೆ ಬಿಚ್ಚಲು ಮುಂದಾಗುವನು ಸೂತ್ರಧಾರ ತಪ್ಪಿಸಿಕೊಳ್ಳಲು ಜಿಗಿಯುವನು) ಹುಶಾರ್...

ಸೂತ್ರಧಾರ : ಹೇ ಹೇ ಇಲ್ಲಪ್ಪಾ ಅಂತಾದ್ದೇನು ತಪ್ಪು ನಾನು ಮಾಡಲ್ಲ.

ಸಾರಥಿ : ಅಲ್ಲ ವಿಷಯ ಹೇಳಿದೆ ಹೂ... ಇಲ್ಲಿ ಕೆಲವರಂತೂ ಅದನ್ನು ನೋಡಿ ನಗುವವರೂ ಇದ್ದಾರೆ. ಅದಕ್ಕೆ ಹುಶಾರಾಗಿರು. ಹುಶಾರಾಗಿ ಮಾತಾಡು.

ಸೂತ್ರಧಾರ : ಇಲ್ಲಪಾ ನಾನ್ಯಾಕೆ ಇಲ್ಲದ್ದು ಮಾತಾಡ್ಲಿ? ದಿನನಿತ್ಯ ನಡೀತಾ ಇರೋದರ ಬಗ್ಗೇನೇ ಮಾತಾಡ್ತೀನಿ. (ಇಬ್ಬರು ವ್ಯಕ್ತಿಗಳು ಮಾತಾಡುತ್ತಾ ವಿಸರ್ಜನೆಗೆ ಹೋಗುವ ನಟನೆಯನ್ನು ಮಾಡುತ್ತಾ ಬಂದು ಕುಳಿತುಕೊಳ್ಳುತ್ತಾರೆ. ಇವರು ತಮ್ಮ ಕೈಯಲ್ಲಿರುವ ಚಂಬು ಇಟ್ಟು ಕುಳಿತುಕೊಳ್ಳುತ್ತಿದ್ದಂತೆ - ವಿರುದ್ಧ ದಿಕ್ಕಿನಲ್ಲಿ ಮತ್ತೆ ಇಬ್ಬರು ವಿಸರ್ಜನೆಗೆ ಬರುತ್ತಿರುತ್ತಾರೆ - ಸೂತ್ರಧಾರ ನೋಡಿ) ರೀ ರೀ ಸ್ವಾಮಿ ಎಲ್ಲಿಗೆ?

ವ್ಯಕ್ತಿ ೧ : ಏನು? ಕಣ್ಣು ಕಾಣ್ಸೋದಿಲ್ವಾ?

ಸೂತ್ರಧಾರ : ಅದೇ ಊರ ಹೊರಗಾ?

ವ್ಯಕ್ತಿ ೨ : ಮುಂಜಾಲೆದ್ದು ಮತ್ತೆಲ್ಲಿಗೆ ಹೋಗ್ತಾರೆ ಯಾವನೋ ಇವನು?

ಸೂತ್ರಧಾರ : ನಿಮ್ಮೂರೊಳಗೆ ಶೌಚಾಲಯ ಇಲ್ವ?
(ಈಗ ಮೊದಲು ಬಂದು ಕುಳಿತ ಇಬ್ಬರಲ್ಲಿ ಒಬ್ಬ ಹೊರಡುತ್ತಿರುವುದಾಗಿ ತಿಳಿಸಿ ಹೊರಡುವನು)

ವ್ಯಕ್ತಿ ೩ : ಹೂಂ ನಂದಾಯ್ತು ನಂತರ ಸಿಗ್ತೀನಿ.

ವ್ಯಕ್ತಿ ೪ : ಹೂಂ ನಾನು ನಂತರ ಬರ್ತಿನಿ ನೀನು ಹೋಗು (ವ್ಯಕ್ತಿ ೩ ಹೊರಡುವನು ಸೂತ್ರಧಾರ ನೋಡುತ್ತಲೇ ಇರುತ್ತಾನೆ - ವ್ಯಕ್ತಿ ೨ ಸೂತ್ರಧಾರನನ್ನುದ್ದೇಶಿಸಿ - ವ್ಯಕ್ತಿ ೧ ರಿಂದ ಚಂಬು ಪಡೆಯುತ್ತಾ ಸೂತ್ರಧಾರನಿಗೆ ತೋರಿಸುತ್ತಾ)

ವ್ಯಕ್ತಿ ೨ : ನಿಮಗೆ ಇದಕ್ಕೆಲ್ಲ ಹೊರಗಡೆ ಹೋಗಿ ರೂಢಿ ಇಲ್ಲಾಂತ ಕಾಣುತ್ತೆ - ಹೊರಗಡೆ ಹೀಂಗ ಹೋಗೋದ್ರಿಂದ ಒಳ್ಳೆ ಗಾಳೀನೂ ಸಿಗುತ್ತೆ ಆಮೇಲೆ ಹೆಚ್ಚಿಗೆ ಮಾತಾಡಬಹುದು.

ವ್ಯಕ್ತಿ ೧ : (ಭಾವನಾತ್ಮಕವಾಗಿ ಹಾಡಿನ ಧಾಟಿಯಲ್ಲಿ) ಜಾಗವೆಲ್ಲೂ ನಾನು ಅಲ್ಲೇ...

ಸೂತ್ರಧಾರ : ಜಾಗ ಇಲ್ಲಾಂದ್ರೆ

ವ್ಯಕ್ತಿ ೧ : ಜಾಗ ಇಲ್ಲಾಂದ್ರೆ - ಇಲ್ಲೇ - ಹೇ ಹೇ (ಕುಳಿತುಕೊಳ್ಳುವನು ತಕ್ಷಣ)

ವ್ಯಕ್ತಿ ೨ : ನಾನು ಇಲ್ಲೇ ಹೀ ಹೀ (ಅವನ ಪಕ್ಕ ವಿಸರ್ಜನೆಗೆ ಕುಳಿತುಕೊಳ್ಳುವನು)

ಸೂತ್ರಧಾರ : (ಸಾರಥಿಗೆ) ಏನಯ್ಯಾ ಏನಿದು ಎಲ್ಲಿ ಬೇಕಾದ್ರಲ್ಲಿ ಅದು ಒಟ್ಟೊಟ್ಟಿಗೇನಾ ಬಯಲು ಕಡೆಗೆ ಕೂಡೋದು.

ಸಾರಥಿ : ಹೌದು - ಇದ್ರೊಳಗೆ ಏನಿದೆ - ಹಿಂದಿನಿಂದಲೂ ನಾವು ಹೀಗೆ ಬಂದಿದ್ದೀವಿ - ಈಗಲೂ ಹಿಂಗೇ ಇದ್ದೀವಿ (ಕುಳಿತವರನ್ನು ನೋಡಿ) ಇನ್ನೂ ಮುಂದೂ ಹೀಂಗೆ - ಹೋಗೋದು (ಅವರ ಕಡೆ ಕೈ ಮಾಡಿ ತೋರಿಸುವನು.)

ವ್ಯಕ್ತಿ ೪ : (ಈಗ ತೋಳೆದುಕೊಂಡು ಹೊರಡುವನು - ಚಂಬು ತೆಗೆದುಕೊಳ್ಳುವುದು - ನೀರು ಚೆಲ್ಲಿದಂತೆ - ಖಾಲಿ ಬಂದು ಬೀಸಿದಂತೆ ನಟನೆ)

ಸೂತ್ರಧಾರ : ಇದೇನಪ್ಪಾ ನಾ ಹೇಳೋದೂ - ನಮ್ಮ ದೇಶದೊಳಗೆ ಜನಾ ಬೆಳಿಗ್ಗೆ ಎದ್ದು ಬಯಲ ಕಡೆಗೆ ಊರ ಬಿಟ್ಟು ದೂರನೇ ಹೋಗಲ್ಲ. ಅದ್ರಲ್ಲಿ ಮಹಿಳೆಯರಿಗಂತೂ ತುಂಬ ತೊಂದ್ರೆ ಗಂಡಸರಿಲ್ಲದ ಜಾಗವೇ ಆಗ್ಬೇಕು. ಕತ್ತಲಿದ್ದಲ್ಲೇ ಹೋಗಿ ಕೂಡಬೇಕು - ಇನ್ನ ಕೆಲವು ಹೆಂಗಸರಿಗಂತೂ ರಾತ್ರಿಯೇ ಒಳ್ಳೆ ಸಮಯ - ಸ್ಕೂಲ್ ನೋಡಲ್ಲ, ಸ್ಕೂಲಗ್ರೌಂಡ್ ನೋಡಲ್ಲ. ಊರು ಸೇರೋ ಹಾದಿಲೆಲ್ಲಾ ಕೂತ್ಕೋತಾರಲ್ಲಯ್ಯಾ ಥೂ ಥೂ.

ಸಾರಥಿ : ಏನ್ ಮಾಡೋದಕ್ಕಾಗುತ್ತೇ ಕತ್ತಲಿರಲಿ ಬೆಳಕಿರಲಿ. ನಮ್ಮ ಜನಾ ಇಂತಾದ್ರೊಳಗೆ ಮಾತ್ರ ಒಟ್ಟಾಗೆ ಬರ್ತಾರೆ ಮುಗಸ್ಕೊಂಡು ಒಟ್ಟಾಗಿ ಹೋಗ್ತಾರೆ ಈ ಕೆಲಸದೊಳಗೆ ಮಾತ್ರ ಬಾಳಾ ಒಗ್ಗಟ್ಟು (ವ್ಯಕ್ತಿ ಒಬ್ಬ ವೃತ್ತದಿಂದ ಬಂದು ಬೋರ್‌ವೆಲ್ ಆಗುತ್ತಾನೆ).

ವ್ಯಕ್ತಿ ೧ : (ವ್ಯಕ್ತಿ ೨ನ್ನು ಉದ್ದೇಶಿಸಿ) ನೀನು ನಿನ್ನತ್ರ ಇರೋ ನೀರಲ್ಲಿ ತೊಳಕೋ ನಾನು ಇಲ್ಲೇ ಬೋರ್‌ವೆಲ್ ಇದೆಯಲ್ಲ ಅಲ್ಲಿ ತೊಳಕೋತೀನಿ. (ಎಂದು ಎದ್ದು ವ್ಯಕ್ತಿ ವೃತ್ತದಿಂದ ಬಕೆಟ್ ತಂದಂತೆ ಆದರಲ್ಲಿ ಬೋರ್‌ವೆಲ್ ನೀರು ತುಂಬ್ತಾನೆ ಬಕೆಟ್ಟನ್ನು ತೆಗೆದುಕೊಂಡು ಹೋದಂತೆ ನಟಿಸುವನು -

ಅಷ್ಟೊತ್ತಿಗೆ ವ್ಯಕ್ತಿ ೧ - ಬೋರ್‌ವೆಲ್ ನೋಡುತ್ತಾ ಬಂದು ಬೋರ್‌ವೆಲ್ ಹೊಡೆದು ಓಡಿ ಬಂದು ನೀರು ಬೀಳುವಲ್ಲಿಗೆ ಬಂದು ತೊಳೆದುಕೊಳ್ಳುವಂತೆ ನಟಿಸುವನು).

ಸೂತ್ರಧಾರ : ರೀ ರೀ ಸ್ವಾಮಿ ನಿಮಗ್ಯಾರಿ ಮನುಷ್ಯರು ಅಂತ ಹೇಳಿದವರು ಹೊಟ್ಟೆಗೆ ಏನ್ರೀ ತಿಂತೀರಿ ಅಲ್ಲಾ ಈಗ ತಾನೇ ನಿಮ್ಮ ಎದುರಿಗೇ ಒಬ್ಬ ಕುಡೀಲಿಕ್ಕೆ ಇಲ್ಲಿಂದ ನೀರ ತಗೊಂಡು ಹೋದ್ರು - ನೀವು ನೋಡಿದ್ರೆ ಅಲ್ಲೇ ಆ ಕೆಲಸಕ್ಕೆ ಇದೇ ನೀರನ್ನು ಉಪಯೋಗಿಸ್ತೀರಿ - ಮಕ್ಕಳು ಮರಿ ಓಡಾಡೋದಿಲ್ವಾ? ಜನ ಈ ನೀರನ್ನು ಕುಡಿಯೋದಿಲ್ವಾ?

ವ್ಯಕ್ತಿ ೧ : ಯಾರ್ ಅಷ್ಟೊಂದು ದೂರ ಹೋಗ್ತಾರಣ್ಣೋ - ನಾನಂತೂ ನೀರ ತರಲ್ಲ - ಎರಡೂ ಇಲ್ಲೇ ಆಗುತ್ತಲ್ಲಾ (ಎಂದು ಬೋರ್ ಕಡೆ ನೋಡುತ್ತಾ) ನಾನು ನೀನು ಒಂದಾದ ಮೇಲೆ ನಾನೇಕೆ ದೂರ ಹೋಗಲಿ - (ಎಂದು ಮತ್ತೆ ಬೋರ್ ಹೊಡೆದು ಸೂತ್ರಧಾರನ ಮುಂದೆಯೇ ತೊಳೆಯುವನು).

ಸೂತ್ರಧಾರ : (ಲಬೋ ಲಬೋ ಬಾಯಿ ಬಡಿದುಕೊಳ್ಳುತ್ತಾ - ವೃತ್ತವನ್ನು ಒಂದು ಸುತ್ತು ಸುತ್ತುತ್ತಿದ್ದಂತೆ ವ್ಯಕ್ತಿ ೧ ಮತ್ತು ವ್ಯಕ್ತಿ ೨ ಸೇರುವರು).

ಸಾರಥಿ : ಏ ಏ ಏನಾಯ್ತು ಅಂತಾದ್ದು. ಯಾಕ ಹೊಯ್ಕೊಳ್ಳುತ್ತಿದ್ದೀ?

ಸೂತ್ರಧಾರ : ಇನ್ನೇನಾಗಬೇಕು. ಕಾಣ್ತಿಲ್ವಾ? ಎಲ್ಲಾ ಅದ್ರೊಳಗೆ?

ಸಾರಥಿ : ಹೇ ಎಲ್ಲಾ ಅದ್ರೊಳಗೇ ಎಲ್ಲಿ ನಿಲ್ಲುತ್ತೆ - ಎಲ್ಲಾ ಮಣ್ಣಲ್ಲಿ ಸೇರಿಕೊಳ್ಳುತ್ತಲ್ಲಾ?

ಸೂತ್ರಧಾರ : ಎಲ್ಲಿ ಸೇರಿಕೊಳ್ಳುತ್ತೆ - ನಿನ್ನ ತಲೆ? ಪೂರ್ತಿಯಾಗಿ ಎಲ್ಲಾನೂ ಮಣ್ಣಲ್ಲೇ ಸೇರುತ್ತಾ ಸ್ವಲ್ಪ ಗಾಳೀಲಿ ಸ್ವಲ್ಪ ನೀರಿನಲ್ಲಿ ಸ್ವಲ್ಪ ಮಣ್ಣಲ್ಲಿ ಸೇರಿಕೊಳ್ಳುತ್ತೆ. ಈ ಗಾಳಿಯಿಂದ ಅನೇಕ ತರಹದ ರೋಗಗಳು ಬರುತ್ತೆ. ಇದು ಮನುಷ್ಯರಿಗೆ ಅಷ್ಟೇ ಅಲ್ಲ ಪ್ರಾಣಿಗಳಿಗೂ ರೋಗ ತಗಲುತ್ತೆ. ವಿಸರ್ಜಿಸಿದ ಆ ಹೊಲಸಲ್ಲಿ ಕಿಲುಮೆ ಹುಳು, ಜಂತು ಲಾಡಿ, ಕೊಕ್ಕೆ ಹುಳುಗಳು ಅವುಗಳ ಮೊಟ್ಟೆ ಅಲ್ಲದೇ ಸೂಕ್ಷ್ಮಾತಿ ಸೂಕ್ಷ್ಮ ಕ್ರಿಯಾ ಜೀವಿಗಳು ಇವೆಲ್ಲ ಇರುತ್ತೆ. ಇವು ಬರಿಗಾಲಲ್ಲಿ ಓಡಾಡುವವರ ಕಾಲಿಗೆ ಅಂಟಿಕೊಳ್ಳುತ್ತೆ.

ಆಕಸ್ಮಾತ್ ಅವರ ಕಾಲಲ್ಲಿ ಏನಾದರೂ ಗಾಯ ಇದ್ದರೆ ಆ ಗಾಯದ ಮೂಲಕ ಈ ಕ್ರಿಮಿಗಳು ರಕ್ತನಾಳ ಸೇರಿ ನಾನಾ ರೀತಿಯ ಕಾಯಿಲೆ ತರತಾವಯ್ಯಾ ಪ್ರಾಣಿಗಳಿಗೂ ಹೂಂ.

ಸಾರಥಿ : ಯೋ (ಜೋರಾಗಿ ನಗುವನು). ನಂಬಲಾರೆ - ಬರಿಗಾಲಲ್ಲಿ ಓಡಾಡಿದ್ರೆ ಹುಳು ಸೇರ್ತಾವೆ ಅಂತೀ ಹಾಂಗೆ ಓಡಾಡೋರ ಕಾಲೆಲ್ಲ ಇಷ್ಟೊತ್ತಿಗೆ ಕೊಳತೋಗುತ್ತಿತ್ತು (ನಗುತ್ತ) ದನ, ಎಮ್ಮೆ, ನಾಯಿ, ಹಂದಿ ಗಳಂತೂ ಎಲ್ಲೆಂದರಲ್ಲಿ ಓಡಾಡುತ್ತೆ ಅದಕ್ಕೇನು ಚಪ್ಲಿ ಮಾಡು ಅಂತಿಯಾ?

ನೀನು ಬಿಡು ನಮ್ಮ ಹಳ್ಳಿ ಜನಾ ದಡ್ಡರು ಅಂತಾ ಸರಿಯಾಗಿ ರೈಲು ಬಿಡ್ತೀಯಾ?

ಸೂತ್ರಧಾರ : ಅಪ್ಪಾ ಸಾರಥಿ ಈ ಹಳ್ಳಿ ಜನಕ್ಕೆ ಮರುಳ ಮಾಡಿ ಅವರ ಕಣ್ಣಿಗೆ ಮಣ್ಣೆರಚಿ ನಾನೇನು ಇಲ್ಲಿ ದುಡ್ಡು ಮಾಡೋಕ ಬಂದಿಲ್ಲ. ಮಹಾ ಜನಗಳು ಕ್ಷಮಿಸಬೇಕು. ಇದ್ದ ವಿಷಯಾ ಹೇಳ್ತಿದ್ದೀನಿ. ನಮ್ಮ ಕಣ್ಣಿಗೆ ಕಾಣಲಾರದಂತ ಸೂಕ್ಷ್ಮಾತಿಸೂಕ್ಷ್ಮ ಜೀವ ಜಂತುಗಳು ಇದಾವೆ ಅಂದೆನಲ್ಲಾ ಅವು ಸೂಕ್ಷ್ಮದರ್ಶಕದಲ್ಲಿ ಮಾತ್ರ ಕಾಣ್ತಾವೆ - ಬರೀ ಕಣ್ಣಿಗೆ ಕಾಣೋದಿಲ್ಲ. ಅವು ಸೂಕ್ಷ್ಮದರ್ಶಕದಲ್ಲಿ ಮಾತ್ರ ಕಾಣತಾವೆ ಅದಕ್ಕೆ ಹೇಳಿದ್ದು.

ಸಾರಥಿ : ನೋಡಪಾ - ನಮ್ಮ ಹಳ್ಳಿ ಜನಾ ಸೂಕ್ಷ್ಮದರ್ಶಕಾನೂ ನೋಡಿಲ್ಲ, ಅದರಲ್ಲಿ ಈ ಜೀವ ಜಂತುಗಳು ಹೆಂಗಿರತಾವೆ ಅಂತಾನೂ ಗೊತ್ತಿಲ್ಲ ಅದಕ್ಕೆ ನೀನು ಏನ ಹೇಳಿದ್ರೂ ಅವರು ನಂಬಲ್ಲ. ಅದಕ್ಕೆ ಅವರಿಗೆ ತಿಳಿಸಬೇಕು ಅಂತಿದ್ರೆ ಅದು ಹೆಂಗ ಅಂತ ಒಂದು ದೃಶ್ಯ ಮಾಡಿತೋರಿಸು ಆಗ ಗೊತ್ತಾಗುತ್ತೆ.

ಸೂತ್ರಧಾರ : ಹಾಗಾದರೆ ನೋಡು.

(ವೃತ್ತದಿಂದ ಮೂವರು ವಿಸರ್ಜನೆಗೆ ಕೈಯಲ್ಲಿ ಚಂಬು ಹಿಡಿದು ಇನ್ನೊಂದು ಕೈಯಲ್ಲಿ ಬಡಿಗೆ ಹಿಡಿದು ಬರುತ್ತಾರೆ. ಮೂರು ಹಂದಿಗಳ ಪಾತ್ರಧಾರಿಗಳು ಅವರು ಕುಳಿತುಕೊಳ್ಳುವಲ್ಲಿಗೆ ಬರುತ್ತವೆ ಹಂದಿಗಳು ವಿಸರ್ಜನೆ ತಿನ್ನುವಂತೆ ಮಾಡಿ ಕುಳಿತು ಮೂವರನ್ನು ಮುಗ್ಗರಿಸುವಂತೆ ಮಾಡುತ್ತವೆ)

ಹಾಡು : ರೋಗ ಬಂದಾತು ಜೋಪಾನ

ಓ ರಂಗಣ್ಣಾ ಓ ನಿಂಗಣ್ಣಾ ಓ ಬಸಣ್ಣಾ

ಅರ್ದಾಮರ್ದಾ ಮಾಂಸ ಬೇಯಿಸಿ
ರುಚಿ ರುಚಿ ಅಂತಾ ತಿನ್ನುತ್ತೀಯಾ
ಕೊಕ್ಕೆ ಲಾಡಿ ಜಂತು ಹುಳುಗಳು
ಆಗರವಂತೂ ಆಗುತ್ತೀಯಾ
ಯದ್ವಾತದ್ವಾ ರೋಗ ಬಂದಾಗ
ದೇವರ ಕಾಟ ಎನ್ನುತ್ತೀಯಾ

ಸಾರಥಿ : ಅಪ್ಪಾ ಸೂತ್ರಧಾರ ನಮ್ ಊರಲ್ಲಿ ಹಂದಿ, ಕೋಳಿ, ಮಾಂಸ ತಿನ್ನೋರು ಇದ್ದಾರೆ ಅದ್ರಿಂದ ರೋಗಗಳು ಹೆಂಗ ಬರುತ್ತೆ. ಅಂತಿಯಾ?

ಸೂತ್ರಧಾರ : ಅದೆಂಗಂದ್ರೆ - ಹಂದಿ, ಕೋಳಿ ಮುಂತಾದುವೆಲ್ಲಾ ನಮ್ಮ ಮಲ ವನ್ನು ತಿನ್ನುತ್ತೆ ಅವುಗಳ ಹೊಟ್ಟೆಗೆ ಈ ಜಂತು ಹುಳುಗಳು ಸೇರಿಕೊಳ್ಳುತ್ತವೆ. ಅವು ಅಲ್ಲಿ ಬೆಳಿತಾವೇ ಮರಿ ಮೊಟ್ಟೆ ಇಡು ತ್ತಾವೆ. ಇವುಗಳನ್ನು ಅದೇ ಮಾಂಸ ನಾವು ಸರಿಯಾಗಿ ಬೇಯಿಸದೇ ತಿಂದ್ರೆ ಹಸಿ ಬಿಸಿ ಮಾಂಸದಲ್ಲಿ ಈ ಜಂತುಗಳು ಮೊಟ್ಟೆ ಇಡುತ್ತೆ - ನಾವು ತಿಂದಾಗ ಅವು ನಮ್ಮ ದೇಹದಲ್ಲಿ ಒಡೆದು ಮರಿಯಾಗಿ ಚೆನ್ನಾಗಿ ಬೆಳೆದು ನಾವು ತಿಂದದ್ದನ್ನು ಅವು ತಿಂತಾವೆ. ಅವು ತಿಂತಾವೆ ಜೊತೆಗೆ ನಮ್ಮ ದೇಹದಲ್ಲಿ ಶ್ವಾಸಕೋಶದ ಕಾಯಿಲೆ, ಕರುಳಬೇನೆ, ನಾನಾ ರೀತಿಯ ಸಾಂಕ್ರಾಮಿಕ ರೋಗ ಹರಡುತ್ತವೆ, ಮನುಷ್ಯನನ್ನು ಸೊರಗಿಸ್ತವೆ.

ಸಾರಥಿ : ಓಹೋ ಹೋ ಹಿಂಗಾ ಸರಿ ಸರಿ. ನಮ್ಮ ಹಳ್ಳಿಯಲ್ಲಿ ಹಿಂಗ ಹೊಲಸು ಇರುತ್ತೆ, ರೋಗಾ ಬರುತ್ತೆ ಅಂದೆ, ಒಪ್ಪಿದೆ. ಆದರೆ ಈ ಪಟ್ಣದಲ್ಲಿ ಹೆಂಗ ಬರುತ್ತೆ ರೋಗಾ ಅಲ್ಲಿ ನೋಡಿದ್ರೆ ಎಲ್ಲಾ ಕಡೆ ಸ್ವಚ್ಛವಾಗಿ ಇರುತ್ತೆ. ಆದ್ರೆ ಆ ಆಸ್ಪತ್ರೆ ಮಾತ್ರ ಬೇಡಾ ಒಂದ ಎರಡಾ ರೋಗಿಗಳು ಈ ಬಾಯಿಂದಾ ನನಗೆ ಹೇಳೋಕಾಗಲ್ಲ.

ಸೂತ್ರಧಾರ : ಇದರ ಬಗ್ಗೆ ನಿನಗೆ ಪೂರ್ಣ ವಿವರಣೆ ಬೇಕು ಹೌದಾ?

ಸಾರಥಿ : ಹೂಂ ಅದಿಷ್ಟು ಹೇಳಿ ಬಿಡಿ ಶಿವಾ?

ಸೂತ್ರಧಾರ : ಹಾಗಾದರೆ ಬಾ ನನ್ನ ಜೊತೆ ಒಂದು ಸುತ್ತು ಸುತ್ತುತ್ತಿದ್ದಂತೆ (ಕಲಾವಿದರು ವೃತ್ತದಿಂದ ಎದ್ದು ಬಂದು ಬಸ್‌ಸ್ಟ್ಯಾಂಡ್ ದೃಶ್ಯ ೫-೬ ಜನ ಸೇರಿ ಬಸ್‌ನಂತೆ ನಟಿಸುತ್ತಾ ಬಂದು ಒಂದು ಕಡೆ ನಿಲ್ಲುವರು. ಅವರೇ

ಮಾರುವವ, ಪೇಪರ್, ಒಬ್ಬ ಬಸ್‌ಸ್ಟಾಪಿನಲ್ಲಿ ಬಸ್ಸಿಗಾಗಿ ಕಾಯುತ್ತಿದ್ದಂತೆ ಧ್ವನಿಗಳ ಚೀತ್ಕಾರ ನಡೆಯುತ್ತಿದ್ದಂತೆ ಒಬ್ಬ ಮೂತ್ರಾಲಯಕ್ಕೆ ಬರುವನು. ಮೂತ್ರಾಲಯ ಮಾಡುವವರು ಮೂವರು ಅವರ ಕೈಯಲ್ಲಿ ಮೂರು ಬಡಿಗೆಗಳಿರುತ್ತವೆ ಒಂದು ಕಡೆ ಮೂತ್ರಾಲಯ ಮಾಡಿದಾಗ ಈ ವ್ಯಕ್ತಿ ಬಂದು ಮೂತ್ರ ವಿಸರ್ಜನೆ ಮಾಡುತ್ತಿರುತ್ತಾನೆ. ಇನ್ನೊಬ್ಬ ವ್ಯಕ್ತಿ ಬೂಟ ಪಾಲಿಶ್ ಮಾಡುವವನ ಹತ್ತಿರ ನಿಂತ ವ್ಯಕ್ತಿಯ ಹತ್ತಿರ ಮಾತನಾಡುತ್ತಾ)

ವ್ಯಕ್ತಿ : ರೀ ಸ್ವಾಮಿ ನೋಡ್ರಿ ಅಲ್ಲಿ ಇಲ್ಲಿ ಮೂತ್ರ ವಿಸರ್ಜನೆ ಮಾಡುವವರು ಕತ್ತೆಗಳು ಅಂತಾ ಬಡಕೊತ್ತಿದ್ದರೂ ಇವರು ಅಲ್ಲೇ ಹೋಗ್ತಾರಲ್ಲಾ ಇವರಿಗೆ ಏನನ್ನಬೇಕು. ಛೇ..

ವ್ಯಕ್ತಿ ೨ : (ಮೂತ್ರ ವಿಸರ್ಜನೆ ಮಾಡುವವನನ್ನು ಉದ್ದೇಶಿಸಿ) ರೀ ಅಲ್ಲಿ ಬೋರ್ಡ್ ಇದ್ರೂ ಅಲ್ಲೇ ಹೋಗ್ತಿದ್ದೀರಲ್ಲೀ ಅಷ್ಟು ಗೊತ್ತಾಗೋಲ್ವಾ?

ವ್ಯಕ್ತಿ ೩ : (ಮೂತ್ರ ವಿಸರ್ಜಿಸುತ್ತಿದ್ದವ ಜಿಪ್ ಎಳೆದು ಬರುತ್ತಾ ವ್ಯಕ್ತಿ ೨ರಲ್ಲಿಗೆ ಕ್ಷಣ ನಿಂತು ದುರುಗುಟ್ಟಿ ನೋಡಿ) ಆ ಬೋರ್ಡ್‌ನ್ನು ನಿನ್ನಂತ ಕತ್ತೆಗಳೇ ಬರೆದಿರಬೇಕು (ಎಂದು ತಿವಿದು ಹೋಗುವನು. ಅದನ್ನು ಗಮನಿಸುತ್ತಿದ್ದ ವ್ಯಕ್ತಿ ೧ ವ್ಯಕ್ತಿ ೩ ಹೋದ ರಭಸಕ್ಕೆ ಬೂಟ್ ಪಾಲಿಶ್ ಮಾಡಿಸಿಕೊಳ್ಳುತ್ತಿದ್ದ ವ್ಯಕ್ತಿಯ ಮೇಲೆ ಬೀಳುವನು. ಬೂಟ್ ಪಾಲಿಶ್ ಮಾಡುತ್ತಿದ್ದವ ಇದನ್ನು ಆಶ್ಚರ್ಯದಿಂದ ವೀಕ್ಷಿಸುತ್ತ ಇಬ್ಬರೆಡೆಗೂ ವ್ಯಂಗ್ಯವಾಗಿ ನಗುವನು. ಬೂಟ್ ಪಾಲೀಶ್ ಮಾಡಿಸಿಕೊಳ್ಳುತ್ತಿದ್ದ ವ್ಯಕ್ತಿ ಸಿಟ್ಟಿನಿಂದ ವ್ಯಕ್ತಿ ೧ಕ್ಕೆ) ಏ ಕಣ್ ಕಾಣೋದಿಲ್ಲೇನಯ್ಯಾ ಎಲ್ಲಾ ಕಳ್ರೂ ಬಸ್‌ಸ್ಟಾಂಡಲ್ಲೇ ಇದ್ದೀರಲ್ಲಾ ಹೋಗಯ್ಯಾ (ಎಂದು ಬಯ್ಯುವನು. ಇದರಿಂದ ಉತ್ತೇಜಿತರಾದ ವ್ಯಕ್ತಿ ೨ ವ್ಯಕ್ತಿ ೩ರ ಮುಂದೆ ನಿಂತು ಜೋರಾಗಿ ನಕ್ಕಿದ್ದಕ್ಕೆ ಬಿದ್ದ ವ್ಯಕ್ತಿ ೧ ಅವಮಾನಿತನಾಗಿ ನಿಧಾನವಾಗಿ ಎದ್ದು ವ್ಯಕ್ತಿ ೨ರ ಕಡೆ ಬಂದು ಸಿಟ್ಟಿನಿಂದ ಮೂತಿಗೆ ತಿವಿದು ಹೋಗುವನು. ಬೂಟ್ ಪಾಲಿಶ್ ವ್ಯಕ್ತಿ ಇನ್ನೂ ಜೋರಾಗಿ ನಗುತ್ತಾ ಸರಂಜಾಮು ತೆಗೆದುಕೊಂಡು ವೃತ್ತ ಸೇರುವನು. ವ್ಯಕ್ತಿ ೨ ಅವಮಾನಿತನಾಗಿ ಆ ಕಡೆ ಈ ಕಡೆ ನೋಡುತ್ತಿದ್ದಂತೆ ಮೂತ್ರ ವಿಸರ್ಜನೆಗೆ ಅವಸರವಾದಂತೆ ನಟಿಸುತ್ತಾ) ಏನ್ಮಾಡೋದು ಆ ಕಡೆನೂ ಜನ ಇದ್ದಾರೆ ಈ ಕಡೆ ಹೆಂಗಸರಿದ್ದಾರೆ ಛೇ (ಮೂತ್ರ ವಿಸರ್ಜನೆಯತ್ತ ನೋಡುವನು ವಿಚಾರ ಹೊಳೆದಂತೆ ಒಂದು ಹೆಜ್ಜೆ ಮುಂದೆ ಬಂದು ಬಗ್ಗಿ ಇಟ್ಟಿಗೆ - ಇಜ್ಜಲು ತೆಗೆದುಕೊಂಡಂತೆ ಬಣ್ಣ ತೆಗೆದುಕೊಂಡು ಮುಂದೆ ಬಂದು ಮೂತ್ರ ವಿಸರ್ಜನೆಯ ಮೇಲೆ ಬೋರ್ಡನ್ನು ಓದುತ್ತಾ) ಇಲ್ಲಿ ಮೂತ್ರ ವಿಸರ್ಜನೆ

ಮಾಡುವವರು ಕತ್ತೆ ಅಲ್ಲಾ ಚಾಣರು (ಎಂದು ಓಡುತ್ತಾ ಇಟ್ಟಿಗೆ ಚೂರಿನಿಂದ ಕತ್ತೆಗಳು ಇದ್ದುದನ್ನು ಕಾಟ ಹಾಕಿದಂತೆ ನಟಿಸಿ ಇಟ್ಟಿಗೆ ಚೂರು ಬೀಸಾಕಿ ಅಲ್ಲೇ ಮೂತ್ರ ವಿಸರ್ಜನೆ ಮಾಡುವನು. ನಂತರ ಅಲ್ಲಿಂದ ಹೊರಬರುತ್ತಿದ್ದಂತೆ)

ಸೂತ್ರಧಾರ : ರೀ ಸ್ವಾಮಿ, ಅಲ್ಲಿ ಬರೆದಿದ್ದನ್ನು ಹೊಡೆದಾಕಿ ನೀವೂ...

ಸಾರಥಿ : ಅಲ್ಲೇ ಚಾಣರೂ ಅಂತ ಬರೆದಿದ್ದಲ್ಲದೆ ರೀಸಸ್ ಮಾಡ್ತೀರಲ್ಲ, ಎಷ್ಟು ಧೈರ್ಯ ನಿಮಗೆ.... ನೀವೇನು ಹಂಗ ಮಾಡಿದ್ರೆ ಏನು ಬಾರಿ ದೊಡ್ಡ ಮನುಷ್ಯರು ಅಂದುಕೊಂಡಿದ್ದೀರಾ? ಏನ್ರಿ ಎಲ್ಲಿಟ್ಟಿದ್ದೀರಿ ಬುದ್ಧಿ?

(ವ್ಯಕ್ತಿ ೨ ಇವನನ್ನು ನೋಡಿ) ಆಂ... ಹೂಂ... (ಎಂದು ವ್ಯಂಗ್ಯವಾಗಿ ಹೇಳಿ.. ವೃತ್ತ ಸೇರುವನು).

ಸಾರಥಿ : ಹೇ. ತೆಗೆಯಿಪ್ಪಾ ಪಟ್ಣದಲ್ಲೂ ಹೀಂಗೆ.. ಜನಾ ಅಂತೂ (ಎಂದು ತನಗೆ ಮೂತ್ರ ವಿಸರ್ಜನೆಗೆ ಅವಸರವಾದಂತೆ ಮಾಡಿ ಸೂತ್ರಧಾರನನ್ನು ಕೇಳುವನು ಎಲ್ಲಿ ಎಂದು).

ಸೂತ್ರಧಾರ : ಆಂ. ನೀನು ಅಲ್ಲೇ ಹೋಗಬೇಕಂತ ಮಾಡಿದ್ದೀಯಾ?

ಸಾರಥಿ : ಇಲ್ಲಾ ಇಲ್ಲಾ ನಾನು ಹಿಂದೆ ಆ ಕಡೆ ಆ ಕಡೆ ಒಳಗೆ ಹೋಗಿ ಬರುತ್ತೇನೆ (ಎಂದು ಹೋಗುವನು).

(ಮೂತ್ರ ವಿಸರ್ಜನೆಯ ಪಾತ್ರ ಮಾಡಿದ ಮೂವರು ತಮ್ಮ ಕೈಯಲ್ಲಿದ್ದ ಕೋಲನ್ನು ಸಾರಥಿ ಹತ್ತಿರ ಬರುತ್ತಿದ್ದಂತೆ ಭೂಮಿಗೆ ಸಮಾನಾಂತರವಾಗಿ ಚಾಚುವರು. ಸಾರಥಿ ಅಲ್ಲಿಗೆ ಬಂದು ವಾಂತಿ ಬಂದಂತೆ ಗಾಬರಿಗೊಂಡು ಓಡುತ್ತಾ ಸೂತ್ರಧಾರನಲ್ಲಿಗೆ ಬರುವನು).

ಸೂತ್ರಧಾರ : ಯಾಕೆ? ಏನಾಯ್ತು? (ಸಾರಥಿ ಮುಷ್ಟಿಯಿಂದ ಮೂತ್ರಾಲಯದ ಕಡೆ ಕೈ ತೋರಿಸುವನು. ಬಾಯಲ್ಲಿ ವಾಂತಿ ತುಂಬಿಕೊಂಡವನಂತೆ)

ಸೂತ್ರಧಾರ : ತಡೀ. ನಾನೇ ನೋಡಿ ಬರ್ತಿನಿ. (ಎಂದು ಮೂತ್ರಾಲಯಕ್ಕೆ ಬರುವನು. ಅವನಿಗೂ ತಡೆಯಲು ಆಗುವುದಿಲ್ಲ. ವಾಪಸ್ ಬಂದು ವಾಂತಿಯಾದಂತೆ ನಟಿಸಿ) ನೋಡಪ್ಪಾ ಸಾರಥಿ ಮಹಾಶಯ ಪಟ್ಣ ಸ್ವಚ್ಛವಾಗಿರುತ್ತೆ, ರೋಗ ಹೇಗೆ ಬರುತ್ತೆ ಅಂದಿಯಲ್ಲಾ ಹೀಂಗ ಹೊಲಸ ಇದ್ರೆ ರೋಗಗಳು ಬರದೇ ಇರುತ್ತಾ ನೋಡಿ ರೋಗ ಪಟ್ಣಾನೂ

ನೋಡಲ್ಲಾ ಹಳ್ಳೀನೂ ನೋಡಲ್ಲ. ಎಲ್ಲಿ ಹೊಲಸ ಇರುತ್ತೋ ಅಲ್ಲೆಲ್ಲಾ ರೋಗಗಳು ಇದ್ದಿದ್ದೆ. ಅದಕ್ಕೆ ಮತ್ತೆ ಕಾಮಾಲೆ, ಫ್ಲೂ, ಡಯೋರಿಯಾ, ಟಿ.ಬಿ., ವಾಂತಿ-ಭೇದಿ, ಕಾಲರಾ ಬರೋದು.

ಸಾರಥಿ : ಅಂದ್ರೆ ಇಷ್ಟೆಲ್ಲಾ ಕೊಳಕು ವಾತಾವರಣ ಇರೋದ್ರಿಂದ ಬೇರೆ ಬೇರೆ ಕಾಯಿಲೆಗಳು ಬರುತ್ತೆ ಅಂತೀಯಾ. ಸರಿ ಸರಿ ಅದ ಸರಿ. ಈ ಕಾಲರಾ ಕಾಲರಾ ಅಂದೀಯಲ್ಲ ಈ ವಾಂತಿ-ಭೇದಿ ಎರಡೂ ಜೊತೆ ಯಲ್ಲಿ ಬರುತ್ತಲ್ಲಾ ಕಾಲರಾ? ಅದೆಂಗ ಬರುತ್ತೆ?

ಸೂತ್ರಧಾರ : ಅದೆಂಗ ಬರುತ್ತೆ ಅಂದ್ರೆ.... (ತಕ್ಷಣ)

(ಒಬ್ಬ ತಕ್ಷಣ ವೃತ್ತದಿಂದ ಬಂದು ಮಲಗುವನು (ಹೆಣ). ಇನ್ನುಳಿದ ನಾಲ್ಕು ಕಲಾವಿದರು ಅಳುವುದು, ಗೋಳಾಡುವುದು, ಇತ್ಯಾದಿ)

ಪೂಜಾರಿ : ಸಂತೈಸುತ್ತ, ಏ ಕಾಳಪ್ಪ, ಕಾಲರಾದಿಂದ ಸತ್ತವರನ್ನು ಹಿಂಗೆಲ್ಲಾ ಜಾಸ್ತಿ ಹೊತ್ತು ಊರಲ್ಲಿ ಇಡಬಾರದು. ಅದು ಊರಿಗೆ ಒಳ್ಳೆಯ ದಲ್ಲ. ಮೊದಲು ಮಣ್ಣು ಕಾಣಿಸಿ. ನಾನು ಮೊದಲೇ ಹೇಳ್ದೆ. ನೀವೆಲ್ಲಾ ಕೇಳಿದ್ರಾ. ಇದು ಊರ ದೇವಿ ಶಾಪ. ಹೆಣದಕಾಲಿನ ಹತ್ತಿರ ಇದ್ದವನಿಗೆ ವಾಂತಿ ನಂತರ ಭೇದಿಯ ಅನುಭವ (ನಟಿಸುತ್ತಾ, ಅಲ್ಲೇ ಇದ್ದವರನ್ನು ಚೊಂಬು ನೀರಿಗಾಗಿ ಕೇಳುತ್ತಾನೆ).

ಒಬ್ಬ : ನೋಡ್ರಪ್ಪಾ ಇವನಿಗೇನಾಯ್ತು. ಮೊದಲ ಹೆಂಗಾನಾ ಮಾಡಿ. ಈ ಹೆಣಕ್ಕೆ ಒಂದು ಗತಿ ಕಾಣಿಸ್ರಿ. ಅಳುವನು (ವಾಂತಿ ಭೇದಿ ಆದವನು, ಚಂಬು ನೀರಿಗಾಗಿ ಪರದಾಡುತ್ತಿರುತ್ತಾನೆ. ಹೆಣವನ್ನು ನಾಲ್ಕು ಜನ ಅನಾಮತ್ತಾಗಿ ಎತ್ತಿ, ಹಾಡು ಪೂಜಾರಿ ಪೋಜ್).

ಹಾಡು : ರೋಗ ಬಂದಾತು ಜೋಪಾನ
ಓ ರಂಗಣ್ಣಾ, ಓ ನಿಂಗಣ್ಣಾ ಓ ಬಸಣ್ಣಾ ॥ಪ॥
ಆಸ್ಪತ್ರೆಗೆ ಸೇರ್ಸೊದ ಬಿಟ್ಟು ಐನೂರ ತಾಯ್ತ ಕಟ್ಟಿಸ್ತಾರೆ
ಕಾಯಿಲೆ ಮೀರಿ ಸತ್ತು ಹೋದ್ರೆ ಹಣೆಬರಾ ಅಂತ ಗೋಳಾಡ್ತಾರೆ॥ಪ॥

(ಹೆಣ ಹೊತ್ತವರು, ಸ್ತೃತ ಬರುತ್ತಾರೆ. ಕಾಳಪ್ಪನ ಪಾತ್ರಧಾರಿ ವಾಂತಿ, ಭೇದಿ ಯಾದವನ ಹತ್ತಿರ ಬರುತ್ತ ಸಂತೈಸುತ್ತಾನೆ.)

ಪೂಜಾರಿ : ನಾನ್ ಹೇಳಿದ್ದು ಕೇಳಿದ್ರಾ. ಜಾತ್ರೆ ಮಾಡಿ ಅಮ್ಮನಿಗೆ ಸೀರೆ, ಉಡಿಸಿ, ಒಂದು ಮರಿ ಕಡೀರಿ ಅಂತ. ಯಾರೂ ಕೇಳ್ಲಿಲ್ಲ. ಸದ್ಯಕ್ಕೆ

ಒಂದು ತಾಯ್ತ ಕಟ್ಟಿಸ್ಲೇನು. ಎಲ್ಲಿ ದಕ್ಷಿಣ ತೆಗಿ (ವಾಂತಿ ಭೇದಿ ಯಾಗುತ್ತಿರುವ ವ್ಯಕ್ತಿ ಮತ್ತೆ ವಿಸರ್ಜನೆಗೆ ಕುಳಿತು ವಾಂತಿ ಮಾಡಿ ಸುಧಾರಿಸಿ ಕೊಳ್ಳುತ್ತಾ ಎರಡು ಮೂರು ಬಾರಿ ಮುಗ್ಗರಿಸಿ ಬೀಳುವುದರಲ್ಲಿ ಕಾಳಪ್ಪ ಮತ್ತು ನಾಲ್ಕು ಜನ ಓಡಿ ಬಂದು ಅವನನ್ನು ಹಿಡಿದುಕೊಳ್ಳುವರು. ವ್ಯಕ್ತಿ ನೀರಿಗಾಗಿ ಹಂಬಲಿಸುತ್ತಾನೆ. ಸುಸ್ತಾಗಿ ನೆಲಕ್ಕೆ ಬೀಳುತ್ತಾನೆ.)

ಪುಜಾರಿ : ಅಯ್ಯೋ ಅಯ್ಯೋ ಎಲ್ಲಾದರೂ ಉಂಟಾ. ಯಾರಾದರೂ ನೀರು ಕೊಟ್ಟೀರಿ ಜೋಪಾನ. ಈಗ ನೀರು ಕೊಟ್ರೆ ಅಷ್ಟೆ. ಈಗ ಒಬ್ಬನ್ನ ಮಣ್ಣಲ್ಲಿಕ್ಕಿದ್ದು ಸಾಕಾಗಿಲ್ವ. ನೀರು ಮಾತ್ರ ಕೊಡಬೇಡಿ.

ಹಾಡು : ರೋಗ ಬಂದಾತು ಜೋಪಾನ
ಓ ರಂಗಣ್ಣಾ, ಓ ನಿಂಗಣ್ಣಾ, ಓ ರಾಮಣ್ಣ
ಕಾಲರಾ ರೋಗ ಬಂದ್ರೆ ನೀವು ಕಂಡ ಕಂಡ ದೇವ್ರಿಗೆ ಹರಕೆ ಹೊತ್ತು
ಡಾಕ್ಟರಿಗೆ ತೋರಿಸಿಕೊಳ್ಳೋದ ಬಿಟ್ಟು ಮೂಢನಂಬಿಕೇಲೀ ಸಾಯುತ್ತೀರಿ
ಕಾಯಿಸಿ ಆರಿಸಿದ ನೀರು ಕುಡಿದು ಕಾಯಿಲೆ ಕಳಿಸೋದ ಮರೆಯುತ್ತೀರಿ ॥ಪ॥

(ವಾಂತಿ ಮಾಡಿಕೊಳ್ಳುವನು. ನೀರು, ನೀರು, ಸುಸ್ತು ಅಯ್ಯೋ ಸಾಯ್ತೀನಿ. ಅಯ್ಯೋ ನೀರು (ಒಬ್ಬ ನೀರು ಕೊಡಲು ಹೋಗುವನು))

ಪೂಜಾರಿ : (ಅವನನ್ನು ತಡೆದು) ಯಾರಿಗೆ ನೀರು? (ಚೊಂಬು ಕಸಿದುಕೊಂಡು ಕುಕ್ಕರಿಸಿ) ಆಗಲೇ ಒಬ್ಬನನ್ನು ಸಾಯಿಸಿದ್ದೀರಿ. ಇವನನ್ನೂ ಸಾಯಿಸಿಬಿಡಿ. ತಗೀರಿ ನಾವಿಲ್ವ ಇಲ್ಲಿ ಊರಿಗೆ ಹಿರಿಯ ಪೂಜಾರಿ ಅಂತ. ಎಲ್ಲಾ ನಿಮ್ಮ ಪ್ರತಿಷ್ಠೆಗೆ ಬಡದಾಡತೀರಲ್ರೀ.

ಸೂತ್ರಧಾರ : ಯೋ ಪೂಜಾರಿ ಏನಯ್ಯಾ ನಿಂದು. ನೀರು ಕೊಡಬಾರದು ಅಂತ ಯಾರಯ್ಯಾ ಹೇಳಿದ್ದಾರೆ. ನೀನು ಸುಮ್ಮನೆ ಜನಗಳನ್ನು ಗೋಳು ಹುಯ್ಯಕೊಂತೀಯಾ?

ಪೂಜಾರಿ : ಬಂದಾ ನೋಡ್ರಪ್ಪಾ. ಒಳ್ಳೆ ಡಾಕ್ಟ್ರರಿವನು. ಕೊಡ್ರೋ ನೀರು. ರೀ ಸುಮ್ಮನೆ ಹೋಗಬಾರದಾ? ನಿಮ್ಮಂತಾವರಿಂದ್ಲೆ ನಮ್ಮ ದೇಶದ ಸಂಸ್ಕೃತಿ ಎಲ್ಲಾ ಹಾಳಾಗಿರೋದು. ದೇವರು ದಿಂಡ್ರು ಎಲ್ಲಾ ಹೋಗಿ ಊರಲ್ಲಿ ರೋಗಾ ಹರಡಿಕೊಂಡಿರೋದು.
(ಕಾಲರಾ ವ್ಯಕ್ತಿ ನೀರು ನೀರು ಎಂದು ಗೋಳಾಡುವನು).

ಪೂಜಾರಿ : ನೀರ ಮಾತ್ರ ಕೊಡಕೊಡದು. ನಾನ ಹೇಳಿದ್ದೀನಿ.

ಸೂತ್ರಧಾರ : ಏ ಮುಚ್ಚಿಕೊಳ್ಳಯ್ಯಾ ಬಾಯಿ. ಅಲ್ಲಯ್ಯಾ (ಸಾರಥಿಗೆ ಡಾಕ್ಟರ್ ಕರೆತರಲು ಸೂಚಿಸಿ ಕಳುಹಿಸುವನು.) ಅಲ್ಲಯ್ಯಾ ದೇವರು ದಿಂಡ್ರು, ಶಾಪ ಅಂತೀಯಾ. ಕಾಲರಾ ದೇವರ ಶಾಪನಾ? ಯಾಕ ಜನರಿಗೆ ಮೋಸ ಮಾಡ್ತೀರಿ. ಇದು ನೀನಲ್ಲ ಮಾತಾಡೋದು. ದೊಡ್ಡ ದೊಡ್ಡ ಗುಡಿಯೊಳಗಿದ್ದೀರಿ. ಗುಡಿಗೆ ಬರೋ ಹೋಗೋ ಭಕ್ತಾದಿಗಳು ಕೋಡ್ತಾರಲ್ಲ. ಅದು ಮಾತಾಡ್ಸುತ್ತೆ ನಿನ್ನ. ದೇವರಂತೆ. ಊರ ಹೊರಗಿರೋ ಆ ಹಾಳು ಗುಡಿ ನೋಡ್ಹೋಗು. ಊರಲ್ಲಿರೋ ಕತ್ತೆ, ಎಮ್ಮೆ, ದನಗಳೆಲ್ಲಾ ಅಲ್ಲೇ ಮಲಗಿರ್ತಾವೆ. ಹಾದಿ ಬೀದಿಲಿ ಹೋಗೋ ನಾಯಿ ಬಂದು ದೇವರ ಮೇಲೆ ಕಾಲೆತ್ತುತ್ತೆ. ಕೇಳೋರೆ ದಿಕ್ಕಿಲ್ಲ ಬಂದು ಬಿಟ್ಬಾ ಹೇಳೋಕೆ.

(ಕಾಲರಾ ವ್ಯಕ್ತಿ ನೀರು ನೀರು ಸುಸ್ತು ಅಯ್ಯೋ)

ಅಲ್ಲಯ್ಯಾ ಇಲ್ಲಿ ಜನಗಳಿಗೆ ಕುಡಿಯೋದಕ್ಕೆ ಸ್ವಲ್ಪ ಶುದ್ಧವಾದ ನೀರಿದೆಯಾ?

ಪೂಜಾರಿ : (ವ್ಯಂಗ್ಯವಾಗಿ ನಗುತ್ತಾ) ನೋಡ್ರಪಾ ಇದುವರೆಗೂ ನಾವು ನೀರೇ ಕುಡಿದಿಲ್ಲಾ ಅನ್ನೋ ಹಂಗ ಹೇಳ್ತಾ ಇದ್ದಾನೆ ಈತ, ಅಲ್ಲಿಲ್ವ ಕೆರೆ.

ಸೂತ್ರಧಾರ : ಅದು ಆ ಕೆರೆ ಅಲ್ವೇನಪ್ಪಾ. ಅದನ್ನು ಕುಡಿಯೋ ನೀರಿನ ಕೆರೆ ಅಂತಾರಾ ಅದನ್ನ. ಜನ ಸ್ನಾನ ಮಾಡೋದು ಅಲ್ಲೆ, ಬಟ್ಟೆ ಒಗೆಯೋದು ಅಲ್ಲೆ, ಕುಡಿಯಾಕ ತರೋದು ಅದೇ ನೀರು, ಒಳ್ಳೆ ತಿಪ್ಪೆಗುಂಡಿ ನೀರ ಇದ್ದಂಗಿದೆ.

ಪೂಜಾರಿ : ಓಹೋ. ನಾವೇನ ಅದನ್ನ ಇವತ್ತಷ್ಟೇ ಉಪಯೋಗಿಸ್ತಿರೋದು? ನಮ್ಮ ತಾತ ಮುತ್ತಾತನ ಕಾಲದಿಂದ ಉಪಯೋಗಿಸ್ತಿದ್ದೀವಿ.

(ಕಾಲರಾ ವ್ಯಕ್ತಿ ನೀರು ನೀರು)

ಪೂಜಾರಿ : ನೀರು ಕೊಡಬೇಡಿ. ಜಾಸ್ತಿ ಆಗುತ್ತೆ.

ಡಾಕ್ಟರ್ : (ಸಿಟ್ಟಿನಿಂದ) ಏ ಏಳದಾಕ್ರೋ ಇವನ್ನ. ಯಾರ ನಿನಗೆ ಹೇಳಿದವರು ನೀರ ಕೊಡಬಾರದು ಅಂತಾ. ನಿಮ್ಮಂಥ ಮೂಢನಂಬಿಕೆ ಜನ ಸೇರಿಕೊಂಡು ನಮ್ಮ ದೇಶದ ಮುಕ್ಕಾಲು ಹಳ್ಳಿ ಜನ ಹಾಳಾದದ್ದು.

ನೋಡಿ ವಾಂತಿ, ಭೇದಿ ಜಾಸ್ತಿ ಆದರೆ ವ್ಯಕ್ತಿಗೆ ಆಗಿಂದಾಗ್ಗೆ ನೀರು ಕುಡಿಸ್ತಾ ಇರಬೇಕು. ಯಾಕಂದ್ರೆ ದೇಹದಲ್ಲಿ ನೀರಿನ ಅಂಶ ಕಡಿಮೆ ಆಗಿ ರೋಗಿ ತುಂಬಾ ನಿತ್ರಾಣನಾಗ್ತಾನೆ. ವಾಂತಿ, ಭೇದಿ ಜಾಸ್ತಿ ಆದ್ರೆ ಅದು ಕಾಲರಾದ ಲಕ್ಷಣ. ಎಲ್ಲಿ ರೋಗಿ, ಎಲ್ಲಿ (ನೋಡುವನು). ಮೊದಲು ಇವನಿಗೆ ನೀರು ಅದಕ್ಕೆ ಸ್ವಲ್ಪ ಸಕ್ಕರೆ, ಚಿಟಿಕೆ ಉಪ್ಪು ಹಾಕಿ ನೀರ ತನ್ನಿ. ನೋಡಿ ಎಲ್ರೂ ಕೇಳಿ, ವಾಂತಿ ಭೇದಿ ಜಾಸ್ತಿಯಾದವರಿಗೆ ಒಂದು ಗ್ಲಾಸ್ ನೀರಿಗೆ ಒಂದು ಸ್ವಲ್ಪ ಸಕ್ಕರೆ, ಅದಕ್ಕೆ ಒಂದು ಚಿಟಿಕೆ ಉಪ್ಪು ಸಾಧ್ಯವಾದರೆ ನಿಂಬೆ ಹಣ್ಣಿನ ನಾಲ್ಕು ಹನಿ ರಸ ಸೇರಿಸಿ ಎಷ್ಟು ಸಾರಿ ಬೇಕಾದರೂ ಕುಡಿಸಬಹುದು. ಇದರಿಂದ ರೋಗಿ ಸ್ವಲ್ಪ ಚೇತರಿಸಿಕೊಳ್ಳುತ್ತಾನೆ. ನಂತರ ಡಾಕ್ಟರ್ ಹತ್ತಿರ ತೋರಿಸಬೇಕು. ಈ ಪೂಜಾರಿನ ಮೊದ್ಲು ಹೊರಹಾಕಿ.


ಸೂತ್ರಧಾರ : ನೋಡಿ ನೋಡಿದ್ರಾ ಮಹಾ ಜನಗಳೇ, ಕಾಲರಾದಂಥ ಸಾಂಕ್ರಾಮಿಕ ರೋಗ ಅಶುದ್ಧವಾದ ನೀರು, ಕೊಳೆತ ಹಣ್ಣಿನ ಮೇಲೆ ನೊಣ ಕುಳಿತಂತಾ ಪದಾರ್ಥಗಳನ್ನು ನೋಡದೆ ತಿನ್ನೋದ್ರಿಂದ ಬರುತ್ತೆ ಅಂತ ಗೊತ್ತಾಯ್ತಲ್ಲ. ನಾವು ನಮ್ಮ ಆರೋಗ್ಯ ಕಾಪಾಡಬೇಕಾದರೆ ಸುತ್ತಮುತ್ತಲ ಜಾಗವನ್ನು ಶುದ್ಧವಾಗಿಡಬೇಕು. ಅದರ ಜೊತೆ ಸಾಧಾರಣ ಮಟ್ಟದಲ್ಲಿ ನಮಗೆ ಎಟಕೋ ಹಾಗೆ ಜಾಸ್ತಿ ಖರ್ಚಿಲ್ಲದೆ ನಮ್ಮದೇ ಆದ ಶೈಲಿಯಲ್ಲಿ ಕಟ್ಟಿಸಿಕೊಂಡು ಸುತ್ತಮುತ್ತಲ ಪರಿಸರ ವನ್ನು ಉತ್ತಮವಾಗಿಡುವ ದೃಷ್ಟಿಯಿಂದ ಯುನೆಸ್ಕೋ ಮಾದರಿ ಶೌಚಾಲಯ ಬಂದಿದೆ. ಅದನ್ನು ಪ್ರತಿಯೊಂದು ಮನೆಯವರೂ ಹೆಚ್ಚಿಗೆ ಖರ್ಚಿಲ್ಲದೆ ಕಟ್ಟಿಸಬಹುದು.

ಸಾರಥಿ : ಯೋ ತಡಿ ತಡೀ. ಅದೇನ ಹೊಸ ಶಬ್ದಾ ಯುನೆಸ್ಕೋ ಪನೆಸ್ಕೋ ಅಂದಿಯಲ್ಲಾ ಹಂಗಂದ್ರೇನು?

ಸೂತ್ರಧಾರ : ಯುನೆಸ್ಕೋ ಮಾದರಿ ಶೌಚಾಲಯ ಅಂದ್ರೆ ಕಕ್ಕಸ್ಸಿಗೆ ಹೋಗೋ ದಕ್ಕೆ ಮಾಡಿದ ಒಳ್ಳೆ ವಿಧಾನದ ಶೌಚಾಲಯ. ಇದರ ವಿಧಾನದಲ್ಲಿ ಮುಖ್ಯವಾಗಿ ಎರಡು ಗುಂಡಿಗಳಿರುತ್ತೆ. ನಾವು ವಿಸರ್ಜನೆ ಮಾಡಿ ದಾಗ ಅದನ್ನ ಒಂದು ಗುಂಡಿಗೆ ಹರಿಬಿಡಲಾಗುತ್ತೆ. ಮೂರು ತಿಂಗಳಾದಾಗ ಈ ಗುಂಡಿ ಹೊಲಸಿನಿಂದ ತುಂಬುತ್ತೆ. ಆಗ ಆ ಗುಂಡಿಯನ್ನು ಮುಚ್ಚಿ ಕಕ್ಕಸ್ಸನ್ನು ಇನ್ನೊಂದು ಗುಂಡಿಗೆ

ಹರಿಬಿಡ್ತಾರೆ. ಮೂರು ತಿಂಗಳು ಇದನ್ನ ಉಪಯೋಗಿಸಬಹುದು. ಅಷ್ಟೊತ್ತಿಗೆ ಮೊದಲು ಮುಚ್ಚಿರುತ್ತೇವಲ್ಲ ಅದರಲ್ಲಿರೋ ಹೊಲಸೆಲ್ಲಾ ಕೊಳೆತು ಒಳ್ಳೆ ಗೊಬ್ಬರ ಆಗುತ್ತೆ. ಅದನ್ನು ಕ್ಲೀನ್ ಮಾಡಿಸಿ ಅಥವಾ ತೆಗೆಸಿ ಹೊಲ-ಗದ್ದೆಗಳಿಗೆ ಗೊಬ್ಬರವಾಗಿ ಉಪಯೋಗಿಸಬಹುದು. ಹೀಗೆ ಮೂರು ಮೂರು ತಿಂಗಳು ಇದನ್ನ ಯಾರಿಗೂ ತೊಂದರೆ ಇಲ್ಲದೆ ಬಳಸಬಹುದು. ಜೊತೆಗೆ ನಮ್ಮ ಸುತ್ತಮುತ್ತ ಮನೆ ಮುಂದೆ ಒಳ್ಳೆ ಗಿಡಗಳನ್ನು ನೆಡೋದ್ರಿಂದ ಒಳ್ಳೆ ಹವೇನೂ ಸಿಗುತ್ತೆ. ನಾನಾ ರೀತಿ ರೋಗದಿಂದ ದೂರಾನೂ ಇರ ಬಹುದು ಏನಂತೀರಿ?

ಹಾಡು : ರೋಗ ಬಂದಾತು ಜೋಪಾನ
ಓ ರಂಗಣ್ಣಾ, ಓ ನಿಂಗಣ್ಣ, ಓ ತಿಮ್ಮಣ್ಣಾ ॥ರೋಗ॥
ಊರ ಸುತ್ತ ಸ್ವಚ್ಛತೆ ಬೇಕು, ಮನೆ ಮುಂದ ಗಿಡವ ನೆಡಲೇಬೇಕು
ಶುದ್ಧ ಪರಿಸರ ಬೆಳೆಸಬೇಕು, ವಿದ್ಯೆ ಬುದ್ಧಿ ಕಲಿಯಲೇಬೇಕು
ನಿಮ್ಮ ಆರೋಗ್ಯ ನೀವೇ ತಿಳಕೊಂಡು ಆನಂದದಿಂದ
ಬಾಳಬೇಕು ॥ಪ॥



## ಕಾಲರಾ

(ರಂಗದ ಮೇಲೆ ಹಳ್ಳಿ ಮನೆಯ ದೃಶ್ಯ. ಒಂದು ಮಗು ಕಾಲರಾ ಬೇನೆಯಿಂದ ಸತ್ತಿರುತ್ತದೆ. ಹಳ್ಳಿಯ ಹೆಂಗಸರು ಮತ್ತು ಗಂಡಸರು ವ್ಯಸನದಿಂದ ಕೂಡಿರುತ್ತಾರೆ. ಕೆಲವರು ಅಳುತ್ತಿರುತ್ತಾರೆ. ಪ್ರೇಕ್ಷಕರ ಮಧ್ಯದಿಂದ ಮೂರು ಗುಂಪು ಅಳುತ್ತಾ ರಂಗದ ಮಧ್ಯಕ್ಕೆ ಬಂದು ಎಲ್ಲರೂ ಸೇರಿ ಅಳುತ್ತಾರೆ. ಈ ಮಧ್ಯೆ ಕಾಳಪ್ಪ ಎದ್ದು ಬಂದು ಪ್ರೇಕ್ಷಕರತ್ತ ನೋಡಿ ಯಾರನ್ನೋ ನಿರೀಕ್ಷಿಸು ತ್ತಿರುವಂತೆ ಅಭಿನಯಿಸಿ ಮತ್ತೆ ತನ್ನ ಜಾಗಕ್ಕೆ ಹಿಂತಿರುಗುತ್ತಿರುವಾಗ...)

ಒಬ್ಬ ವ್ಯಕ್ತಿ : ಕಾಳಪ್ಪಾ, ತಡ ಯಾಕೆ ಮಾಡ್ತೀದ್ದೀರ? ಬಿರ್‍ನೆ ಮುಗಿಸಬಾರದ?

ಕಾಳಪ್ಪ : (ಅಳುತ್ತಾ) ಅವರ ಸೋದರ ಮಾವ ಬರಬೇಕಪ್ಪ (ಮತ್ತೆ ತನ್ನ ಜಾಗಕ್ಕೆ ಬರುವನು).

ಪೂಜಾರಿ : (ಪ್ರವೇಶ) ಏನ್ರಪ್ಪಾ, ಎಲ್ಲಾ ಯಾಕೆ ಹಿಂಗ ಕುಂತಿದ್ದೀರಾ? ಬೆಲ್ಲ ಹಚ್ಚಿದ ಕಲ್ನಂಗೆ. ಕಾಳಪ್ಪಾ, ಒಂದು ಎಲೆ ಇದ್ದರೆ ಕೊಡ್ತೀಯಾ? (ಕಾಳಪ್ಪ ಎಲೆಯತ್ತ ತೋರಿಸುವನು. ಪೂಜಾರಿ ಎಲೆ ತೆಗೆದು ಅಡಿಕೆ ಹಾಕಿಕೊಂಡು) ಇಷ್ಟು ಜನಗಳಲ್ಲಿ ನನ್ನ ಮಾತು ಕೇಳೋರು ಯಾರೂ ಇಲ್ಲ. ಎಷ್ಟು ಸಲ ಹೇಳಿದೆ ನಾನು. ಯಾರಾದ್ರೂ ಕೇಳಿದ್ರಾ. ಅಮ್ಮನಿಗೆ ಒಂದು ಬಲಿ ಕೊಡಬೇಕು. ಅದಕ್ಕೆ ಈ ಕಾಯಿಲೆ ಬಂದಿರೋದು. ನನ್ನ ಕೈಲಿ ಯಂತ್ರ ಕಟ್ಸಿಸಿ. ಒಂದು ತಾಯತಾ ಹಾಕಿಸಿ ಅಂತ ಅಂದಿದ್ದೆ. ಕೇಳಿದ್ರಾ? ಈಗ ನೋಡಿ ಏನಾಯಿತು.

೨ನೇ ವ್ಯಕ್ತಿ : ಯೋ, ಇಲ್ಲಿ ಜನಗಳಿಗೆ ಕುಡಿಯೋಕೆ ಒಳ್ಳೆ ನೀರಿದೆಯಾ?

೩ನೇ ವ್ಯಕ್ತಿ : ಬಟ್ಟೆ ಒಗೆಯೋದು ಅಲ್ಲೇ, ದನ ತೊಳೆಯೋದು ಅಲ್ಲೇ, ಎಲ್ಲಾ ತೊಳೆಯೋದೂ ಅಲ್ಲೇ.

೪ನೇ ವ್ಯಕ್ತಿ : ಒಳ್ಳೆ ಕಕ್ಕಸ ಮನೆ ಇದೆಯಾ ಇಲ್ಲಿ. ಬಂದುಬುಟ್ಟಾ ಇಲ್ಲಿ ಹೇಳೋಕೆ.

ಪೂಜಾರಿ : ನಿಮಗೆ ಎಲ್ಲಾ ಗೊತ್ತಿದೆ. ಏನು ದೊಡ್ಡ ಡಾಕ್ಟರು. ಡಾಕ್ಟರ್ ಆಗಿಬಿಟ್ಟಿದ್ದಾರಾ ನೀವು?

ಕಾಳಪ್ಪ : (ಮುಂದೆ ಬಂದು ಪ್ರೇಕ್ಷಕರಿಂದ ಯಾರನ್ನೋ ನಿರೀಕ್ಷಿಸಿ ಹೋಗುತ್ತಾನೆ, ಅಷ್ಟರಲ್ಲಿ ಮತ್ತೊಬ್ಬ ವ್ಯಕ್ತಿ ಕಾಳಪ್ಪನ ಬಳಿ ಬಂದು ಕಕ್ಕಸಿಗೆ ಹೋಗಲು ದಾರಿ ಕೇಳುವಂತೆ ಅಭಿನಯಿಸಿ ಓಡುವನು. ಕಾಳಪ್ಪ ಅವನನ್ನು ಹಿಂದಕ್ಕೆ ಕರೆದು ನೀರು ತೆಗೆದುಕೊಂಡು ಹೋಗಲು ತಿಳಿಸುವನು. ಅವನು ಹೋದ ಕೂಡಲೇ).

ಪೂಜಾರಿ : ಎಂ.ಎಲ್.ಎ. ಸಾಹೇಬರು ಬಂದರು. ನಮಸ್ಕಾರ ಸ್ವಾಮಿ.

ಶಾಸಕರು : (ಬಂದು ಸತ್ತಿರುವ ಮನುಷ್ಯನನ್ನು ನೋಡಿ ಕೃತಕ ದುಃಖ ತೋರಿಸುತ್ತಾ ಕಾಳಪ್ಪನನ್ನು ಕರೆದು)
ಕಾಳಪ್ಪ, ಕಾಳಪ್ಪ.. ಬಾ ಇಲ್ಲಿ.... ತಗೋ. ಇರ್ಲಿ ತಗೋ.. (ಹಣ ನೀಡುವನು) ನಾನು ಬೆಂಗಳೂರಿನಲ್ಲಿದ್ದೆ. ವಿಷಯ ಗೊತ್ತಾಗಿದ್ದೇ ತಡ ಒಂದೇ ಉಸಿರಿಗೆ ಓಡೋಡಿ ಬಂದೆ.  ನಮ್ಮ ಜಿಲ್ಲೆ ಅಭಿವೃದ್ಧಿ ಬಗ್ಗೆ ಡಿ.ಸಿ. ಆಫೀಸಿನಲ್ಲಿ ಒಂದು ಸಭೆ ಕರೆದಿದ್ದೆ. ಡಿ.ಸಿ.ಗೆ ಹೇಳಿದ್ದೆ ಒಂದು ವಾರದ ರೇಷನ್ ಪುಗಸಟ್ಟೆ ಕೊಡಿ ಅಂತ. ಕೊಟ್ಟಿರಬೇಕಲ್ವಾ (ಎಲ್ಲರೂ ಸುಮ್ಮನಿರುವರು).

ಪೂಜಾರಿ : ಕೊಟ್ಟಿದ್ದಾರೆ ಸ್ವಾಮಿ.

ಶಾಸಕ : ಈ ವಿಚಾರವಾಗಿ ಮಂತ್ರಿಗಳ ಜೊತೆ ಮಾತಾಡಿ ಪರಿಹಾರದ ಬಗ್ಗೆ ಮಾತಾಡಲು ಬೆಂಗಳೂರಿಗೆ (ಒಬ್ಬ ವ್ಯಕ್ತಿ ಕಕ್ಕಸಿಗೆ ಓಡುವನು) (ಶಾಸಕರು ಗಾಬರಿಗೊಳ್ಳುತ್ತಾ) ಈ ವಿಷಯ ಮಾತಾಡಲು ಬೆಂಗಳೂರಿಗೆ ಹೋಗಿ ಮಂತ್ರಿಗಳ ಜೊತೆ ಮಾತನಾಡಿ...

ಪೂಜಾರಿ : ಮಂತ್ರಿಗಳ ಜೊತೆ ಮಾತಾನಾಡೋದಾದರೆ ನಂದೊಂದು ಕೆಲಸ ಮಾಡಿಕೊಡಿ ಸ್ವಾಮಿ. ಅಮ್ಮನವರ ಗುಡಿ ಕಟ್ಟಿಸಲು ಸರ್ಕಾರದ ಹಣ ಮಂಜೂರು ಮಾಡಿಸಿಕೊಡಿ.

ಜನಗಳು : (ಕೋಪದಿಂದ) ಹೊಡೀರೋ ಅವನ್ನ. ಇಲ್ಲಿ ಜನ ಕಾಯಿಲೆಯಿಂದ ಸಾಯ್ತಿದ್ದಾರೆ. ಇವನಿಗೆ ಗುಡಿ ಕಟ್ಟಿಸಲು ಹಣ ಬೇಕಂತೆ. ಹಾಕ್ರೋ ನಾಲ್ಕು.

ಶಾಸಕ : (ಎಲ್ಲರನ್ನೂ ಸಮಾಧಾನಪಡಿಸುತ್ತಾ) ನಾನಿದ್ದೀನಿ. ಎಲ್ಲಾ ಸರಿ ಮಾಡ್ತೀನಿ. ಸುಮ್ನಿರಿ. ಈ ಕಡೆ ಬನ್ನಿ ಪೂಜಾರ್ರೆ. ಅವರೇನೊ ಬುದ್ಧಿ ಇಲ್ಲದೋರು. ನೀವಾದರೂ ಯೋಚ್ನೆ ಮಾಡೋದು

ಬ್ಯಾಡ್ರಾ. ತೀರಾ ಕೆಣಕಬಾರದು ಸ್ವಾಮಿ. ಬನ್ನಿ ಈ ಕಡೆ ನಾನು ಎಲ್ಲಾ ಸರಿ ಮಾಡ್ತೀನಿ. (ಜನರನ್ನು ಉದ್ದೇಶಿಸಿ) ನಿಮಗಾದರೂ ಬುದ್ದಿ ಬ್ಯಾಡ್ವಾ. ಬನ್ನಿ ಈ ಕಡೆ. ನಾನು ಡಿ.ಸಿ.ಗೆ ಹೇಳಿ ಎಲ್ಲಾ ಅನುಕೂಲ ಮಾಡ್ಸಿಕೊಡ್ತೀನಿ. ಏನೂ ಯೋಚನೆ ಮಾಡಬೇಡಿ. ಅಲ್ಲಾ ಹೋದ ಎಲೆಕ್ಷನ್‌ನಲ್ಲಿ ನಮ್ಮ ಎದುರು ಪಾರ್ಟಿಯವರು ಎಷ್ಟು ರೇಷನ್ ಕೊಟ್ಟಿದ್ದರು (ಎಲ್ಲರೂ ಸುಮ್ಮನಿರುವರು) ಅಲ್ಲಾ, ಎಷ್ಟು ದಿನದ್ದು ಅಂತ ಕೇಳಿದೆ ಅಷ್ಟೆ.

ಪೂಜಾರಿ : ಎರಡು ವಾರದ್ದು ಸ್ವಾಮಿ ಎರಡು ವಾರದ್ದು.

ಶಾಸಕ : ಎರಡು ವಾರದ್ದಾ. ನಾನು ನಾಲ್ಕು ವಾರದ್ದು ರೇಷನ್ ಪುಗಸಟ್ಟೆ ಕೊಡಿಸ್ತೀನಿ.

ಕಕ್ಕಸಿಗೆ ಹೋಗಿದ್ದ ವ್ಯಕ್ತಿ : ಎಷ್ಟು ವಾರದ್ದು ಸ್ವಾಮಿ?

ಶಾಸಕ : ನಾಲ್ಕು ವಾರದ್ದು?

ಕಕ್ಕಸಿಗೆ ಹೋಗದ್ದ ವ್ಯಕ್ತಿ : ನಾಲ್ಕು ವಾರದ್ದು (ವಾಂತಿ ಮಾಡುವನು).

ಶಾಸಕ : (ಓಡುತ್ತಾ) ಅವನನ್ನು ಹಿಡ್ಕೊಳ್ಳಿ. ಇದು ಕಾಲರಾ ಇರಬೇಕು. ಬೇಗ ಆಸ್ಪತ್ರೆಗೆ ಸಾಗಿಸಿ. ನಾನು ಬೆಂಗಳೂರಿಗೆ ಹೋಗಬೇಕು. ಬರ್ತಿನಿ (ಗಾಬರಿಯಿಂದ ಓಡುವನು).

ಜನಗಳು : (ವ್ಯಕ್ತಿಯನ್ನು ಹಿಡಿದುಕೊಂಡು) ನೀರು ತನ್ನಿ ನೀರು.

ಪೂಜಾರಿ : ನಿಲ್ಲಿಸಿ ನೀರು ಕೊಡಬೇಡಿ. ಕಾಲರಾ ಬಂದವನಿಗೆ ನೀರು ಕೊಡಬಾರದು.

ಡಾಕ್ಟರ್ : (ಪ್ರವೇಶ) ನಿಲ್ಲಿಸಿ. ಇದು ಮೂಢನಂಬಿಕೆ. ಕಾಲರಾ ಬಂದವನಿಗೆ ನೀರಿನ ಅವಶ್ಯಕತೆ ಹೆಚ್ಚಾಗಿರುತ್ತದೆ. ಅವನಿಗೆ ಭೇದಿ ಮತ್ತು ವಾಂತಿಯ ಕಾರಣದಿಂದ ಶರೀರದ ನೀರಿನ ಬಹುಭಾಗ ಹೊರಗೆ ಹೋಗುತ್ತದೆ. ಈ ಸಂದರ್ಭದಲ್ಲಿ ಅವನಿಗೆ ಹೆಚ್ಚಾಗಿ ನೀರನ್ನು ಕೊಡಬೇಕು. ಅವನಿಗೆ ಕೊಡುವ ಪ್ರತಿ ಲೋಟ ನೀರಿಗೆ ಒಂದು

ಚಮಚೆ ಸಕ್ಕರೆ, ಒಂದು ಚಿಟಿಕೆ ಉಪ್ಪು, ಸುಲಭವಾಗಿ ಸಿಕ್ಕಿದರೆ ಎರಡು ಮೂರು ತೊಟ್ಟು ನಿಂಬೆರಸ ಬೆರೆಸಿ ಕೊಡಬೇಕು. ಇಂತಹ ನೀರನ್ನು ಧಾರಾಳವಾಗಿ ಎಷ್ಟು ಬೇಕಾದರೂ ಕೊಡಬಹುದು. ಇದು ಕೇವಲ ಮೊದಲ ಚಿಕಿತ್ಸೆ ಮಾತ್ರ. ತಕ್ಷಣ ರೋಗಿಯನ್ನು ಆಸ್ಪತ್ರೆಗೆ ಸಾಗಿಸಬೇಕು. ಈ ಪೂಜಾರಿಯನ್ನು ಆಚೆಗೆ ಕಳುಹಿಸಿ. ಈ ರೋಗಿಗೆ ನೀರು ಕೊಡಿ (ನೀರು ಕೊಡುವರು).

❑



## ರಕ್ತದಾನ

(ಸುಮಾರು ೫ ಅಥವಾ ೬ ಜನ ಕೂಲಿ ಕೆಲಸಗಾರರು ಒಂದು ದೊಡ್ಡ ಕಲ್ಲು ಚಪ್ಪಡಿಯನ್ನು ಎತ್ತುತ್ತಿರುತ್ತಾರೆ. ಎತ್ತುವಾಗ ರಾಗಿ ರೊಟ್ಟಿ, ಐಸಾ ಎಂಬ ಮಾತುಗಳನ್ನು ಹೇಳುತ್ತಿರುತ್ತಾರೆ. ಅಷ್ಟರಲ್ಲಿ ಒಬ್ಬ ವ್ಯಕ್ತಿ ಚಪ್ಪಡಿಯ ಕೆಳಗೆ ಕಾಲುಗಳು ಸಿಕ್ಕಿಕೊಂಡಂತೆ ಅಭಿನಯಿಸಿ ಬೀಳುವನು. ರಕ್ತಸ್ರಾವವಾಗಿದೆ ಎಂದು ಮಾತನಾಡಿಕೊಂಡು ಆಸ್ಪತ್ರೆಗೆ ಎತ್ತಿಕೊಂಡು ಬರುತ್ತಾರೆ.)

### ಆಸ್ಪತ್ರೆ ದೃಶ್ಯ

ಹೊತ್ತು ತಂದವರಲ್ಲಿ ಇಬ್ಬರು ಬೆಂಚಾಗುತ್ತಾರೆ. ಬೆಂಚಿನ ಮೇಲೆ ಗಾಯಾಳುವನ್ನು ಮಲಗಿಸುವರು. ದಾದಿಯು ಬಂದು ಗಾಯಾಳುವನ್ನು ಪರೀಕ್ಷಿಸಲು ಪ್ರಾರಂಭಿಸುತ್ತಾಳೆ.

ನರ್ಸ್ : (ರಕ್ತ ಪರೀಕ್ಷೆಗೆ ರಕ್ತವನ್ನು ಸಂಗ್ರಹಿಸಿಕೊಳ್ಳುತ್ತಾ) ಇದು ಹೇಗಾಯಿತು?

ಒಬ್ಬ : ಚಪ್ಪಡಿ ಕಲ್ಲನ್ನು ಎತ್ತುತ್ತಿದ್ವಿ. ಚಪ್ಪಡಿ ಜಾರಿ ಹಿಂಗಾಯಿತು.

ನರ್ಸ್ : ಡಾಕ್ಟರ್, ಡಾಕ್ಟರ್ (ಎಂದು ಕೂಗುವಳು).

ಡಾಕ್ಟರ್ : (ಪ್ರವೇಶಿಸಿ ರೋಗಿಯನ್ನು ಪರೀಕ್ಷಿಸಿ, ರಕ್ತದ ಒತ್ತಡ ನೋಡಿ) ರಕ್ತ ಬಹಳ ಹೋಗಿದೆ. ಈತನಿಗೆ ರಕ್ತ ಕೊಡಬೇಕಾಗಿದೆ. ನರ್ಸ್ ಈತನ ರಕ್ತ ಪರೀಕ್ಷೆ ಮಾಡಿದ್ದೀರಾ?

ನರ್ಸ್ : ಹೌದು ಡಾಕ್ಟರ್ ಬಿ ಗುಂಪು

ಡಾಕ್ಟರ್ : ನಮ್ಮ ರಕ್ತದ ಬ್ಯಾಂಕಿನಲ್ಲಿ ಬಿ ಗುಂಪು ರಕ್ತ ಇದೆಯಾ?

ನರ್ಸ್ : ಇಲ್ಲ ಡಾಕ್ಟರ್

ಡಾಕ್ಟರ್ : ಮತ್ತೆ ರಕ್ತಕ್ಕೆ ಏನು ಮಾಡುವುದು?

ನರ್ಸ್ : ಇಲ್ಲೆ ನಿಂತಿದ್ದಾರಲ್ಲ. ಇವರಲ್ಲಿ ಯಾರಾದರೂ ರಕ್ತ ಕೊಟ್ಟರೆ ಆಗಬಹುದು.

ಡಾಕ್ಟರ್ : ಆಗಬಹುದು. ನೀನು ಬಾರಪ್ಪಾ (ಬಂದಿರುವ ಎಲ್ಲರೂ ಗಾಬರಿಗೊಳ್ಳುವರು).

ಒಬ್ಬ : (ಮುಂದೆ ಬಂದು) ಡಾಕ್ಟರ್ ನಾನು ಅವನ ರಕ್ತದ ಕಾರ್ಡು ನೋಡಿದ್ದೀನಿ.

ಅವನದು ಬಿ ನಂದು ಎ ಗುಂಪು.

ಡಾಕ್ಟರ್ : ನೆಕ್ಸ್ಟ್ ನೀನು,

ಮತ್ತೊಬ್ಬ : ಸಾರ್ ನಂದು ಬಿ ಗುಂಪಾಗಿತ್ತು. ಈಗ ಎ ಗುಂಪಾಗಿ ಬದಲಾಗಿ ಬಿಟ್ಟಿದೆ ಸಾರ್.

ಡಾಕ್ಟರ್ : ಏನಯ್ಯಾ ಹೀಗೆ ಹೇಳ್ತೀಯಾ. ದಾರೀಲಿ ಬರುವಾಗ ಬದಲಾಯಿಸ್ತಾ. ಅದೇನು ಗುಂಪು ಬದಲಾಯಿಸೋಕೆ ರಾಜಕೀಯ ಪಕ್ಷ ಅಂತ ತಿಳಿದುಕೊಂಡೆಯಾ?

ಮತ್ತೊಬ್ಬ : ಇಲ್ಲ ಸಾರ್, ಚಿಕ್ಕಾಸ್ಪತ್ರೇಲೀ ತೋರಿಸಿದಾಗ ಬಿ ಅಂತ ಹೇಳಿದ್ರು. ದೊಡ್ಡಾಸ್ಪತ್ರೇಲೀ ತೋರಿಸಿದಾಗ ಎ ಅಂತ ಹೇಳಿದ್ರು, ಸಾರ್.

ಡಾಕ್ಟರ್ : ಸರಿ ಸರಿ ಚೆನ್ನಾಗಿದೆ ನೆಕ್ಸ್ಟ್

ದಪ್ಪ ವ್ಯಕ್ತಿ : (ಮುಂದೆ ಬಂದು) ಸಾರ್ ನಾನು ಬಹಳ ನಿಶ್ಶಕ್ತ ಸಾರ್. ರಕ್ತ ಕೊಟ್ಟರೆ ಅವನಿಗಿಂತ ಮುಂಚೆ ನಾನು ಹೋಗ್ಬಿಡ್ತೀನಿ ಸಾರ್.

ಡಾಕ್ಟರ್ : ಏನಯ್ಯಾ ನೀನು ನಿಶ್ಶಕ್ತನಾ. ಸರಿ ಸರಿ ನೀನು ರಕ್ತ ಕೊಡೋದೂ ಬೇಡ. ಬೇಗ ಹೋಗೋದೂ ಬೇಡ. ನೆಕ್ಸ್ಟ್

ಮಗದೊಬ್ಬ : (ಮುಂದೆ ಬಂದು) ಸಾರ್ ನಂದು ಎಫ್ ಗ್ರೂಪ್ ಸಾರ್.

ಡಾಕ್ಟರ್ : ಎಫ್ ಗ್ರೂಪು ಇದು ಎಲ್ಲಿಂದ ಬಂತಯ್ಯಾ? ಎಫ್ ಗ್ರೂಪು. ನನಗೆ ಗೊತ್ತಿರುವ ಹಾಗೆ ಎ ಗ್ರೂಪು, ಬಿ ಗ್ರೂಪು, ಎಬಿ ಗ್ರೂಪು, ಓ ಗ್ರೂಪು ಅಂತ ನಾಲ್ಕು ಗ್ರೂಪುಗಳು ಇರೋದು. ಎಫ್ ಎಲ್ಲಿಂದ ಬಂತಯ್ಯಾ? ನೋಡಯ್ಯಾ ಎಲ್ಲಿಂದನಾದ್ರೂ ಬರ್ಲಿ, ಹೇಗಾದ್ರೂ ಬರ್ಲಿ. ಈಗ ಬಿ ಗ್ರೂಪು ರಕ್ತ ಬೇಕು. ನಮ್ಮಲ್ಲಿ ಆ ರಕ್ತ ಇಲ್ಲ. ನೀವು ಎಲ್ಲಿಂದನಾದ್ರೂ ರಕ್ತನಾ ತಂದ್ರೆ ರೋಗಿಯನ್ನು ಉಳಿಸಿ ಕೊಳ್ಳಬಹುದು. ಬೇಗ. ನರ್ಸ್ ರೋಗಿಯನ್ನು ಒಳಗೆ ತನ್ನಿ. (ಡಾಕ್ಟರ್ ಒಳಗೆ ಹೋಗುವರು. ನರ್ಸ್ ರೋಗಿಯನ್ನು ಒಳಗೆ ತರುವಂತೆ ತಿಳಿಸುವಳು. ಕೆಲಸಗಾರರು ರೋಗಿಯನ್ನು ಒಳಕ್ಕೆ ಎತ್ತಿಕೊಂಡು ಹೋಗಿ ಬಿಟ್ಟು ಮತ್ತೆ ಬರುವರು)

ಒಬ್ಬ : ಈಗ ರಕ್ತಕ್ಕೆ ಏನು ಮಾಡುವುದು?

ಮತ್ತೊಬ್ಬ : ಹೇ, ರಕ್ತ ಕೊಡುವವರು ಆಸ್ಪತ್ರೆ ಬಳಿ ಸುತ್ತಾಡುತ್ತಿರುತ್ತಾರೆ. ಅಲ್ಲಿಗೆ ಹೋಗಿ ಪ್ರಯತ್ನ ಮಾಡೋಣ ನಡೆಯಿರಿ. (ಸುತ್ತಲು ಪ್ರಾರಂಭಿಸುವರು. ಒಬ್ಬ ರಕ್ತ ಕೊಡುವವನು ಅಲ್ಲಿ ನಿಂತಿರುತ್ತಾನೆ. ಆಗ)

ಒಬ್ಬ : ಸಾರ್ ರಕ್ತ ಬೇಕಿತ್ತು.

ಆತ : ರಕ್ತ ಬೇಕಿತ್ತಾ. ಆಗಲಿ. ನಾನು ಅದೇ ಕೆಲಸಕ್ಕೆ ನಿಂತಿದ್ದೀನಿ. ಆದರೆ ಒಂದು ವಿಚಾರ ನೋಡಿ. ನಮ್ಮ ರಕ್ತ ಜಿಲ್ಲಾಧಿಕಾರಿಗಳಿಂದ ಹಿಡಿದು ಮುಖ್ಯಮಂತ್ರಿಗಳವರೆಗೂ ಸಪ್ಲೆ ಆಗ್ತದೆ. ಆದ್ದರಿಂದ ಬೆಲೆ ಸ್ವಲ್ಪ ಜಾಸ್ತಿ. ವಿಚಾರ ಮಾಡಿ ನೋಡಿ.

ಒಬ್ಬ : ಹೌದೇ ಸ್ವಾಮಿ. ಆಗಲಿ ತಾವಿಲ್ಲೇ ಇರಿ. ಮತ್ತೆ ಬಂದು ಕಾಣ್ತೇವಿ.

ಆತ : ಬೇಗ ಬನ್ನಿ. ನನಗೆ ಟೈಮ್ ಇಲ್ಲ.

(ಎಲ್ಲರೂ ಮತ್ತೊಬ್ಬ ರಕ್ತ ಕೊಡುವವನ ಹತ್ತಿರ ಬರುವರು. ಆತ ಕುಡುಕನಾಗಿರುತ್ತಾನೆ).

ಒಬ್ಬ : ಸ್ವಾಮಿ ರಕ್ತ ಬೇಕಿತ್ತು. (ಹೆಂಡದ ವಾಸನೆ ಸಹಿಸದ ಎಲ್ಲರೂ ಮೂಗು ಮುಚ್ಚಿಕೊಳ್ಳುವರು).

ಕುಡುಕ : ರಕ್ತ ಬೇಕಿತ್ತಾ. ಆಗಲಿ ಕೊಡುತ್ತೇನೆ. ಆದರೆ ಒಂದು ವಿಷಯ ನೋಡಿ. ನನ್ನ ದೇಹದಲ್ಲಿರುವುದು ಶುದ್ಧವಾದ ರಕ್ತ. ಇಂಥ ರಕ್ತಕ್ಕೆ ೫೦೦ ರೂ. ಆಗುತ್ತೆ. ಇಷ್ಟ ಇದ್ದರೆ ತಗೋಬಹುದು.

ಮತ್ತೊಬ್ಬ : (ಒಬ್ಬರ ಮುಖ ಮತ್ತೊಬ್ಬರು ನೋಡಿಕೊಂಡು) ಆಗಲಿ ಸ್ವಾಮಿ ನೀವು ಇಲ್ಲೇ ಇರಿ, ಬೇಗ ಬಂದು ಕಾಣ್ತೇವಿ. (ಹೊರಡುವರು).

ನಿರುದ್ಯೋಗಿ : (ಕೈ ತಟ್ಟಿ ಕರೆದು) ಏನ್ ಸ್ವಾಮಿ ನಿಮಗೆ ರಕ್ತ ಬೇಕಿತ್ತಾ?

ಮತ್ತೊಬ್ಬ : ಹೌದು ಸ್ವಾಮಿ.

ನಿರುದ್ಯೋಗಿ : ನಾನು ರಕ್ತ ಕೊಡ್ತೀನಿ. ನೋಡ್ಕಂಡು ನಿಮಗೆ ತೋಚಿದಷ್ಟು ಕೊಡಿ ಸ್ವಾಮಿ.

(ಎಲ್ಲರೂ ಕುಡುಕ, ಆತ ಮತ್ತು ನಿರುದ್ಯೋಗಿಯನ್ನು ಕರೆದುಕೊಂಡು ಬರುವರು).

ನರ್ಸ್ : ರಕ್ತ ತರೋದಿಕ್ಕೆ ಹೋದವರು ಇನ್ನೂ ಬರಲಿಲ್ಲ?

ಕಾಂಪೌಂಡರ್ : ಇನ್ನೇನು ಬರಬಹುದು ಸಿಸ್ಟರ್. ಆಗೋ ನೋಡಿ ಬಂದ್ರು. ಬನ್ನಿ ಬನ್ನಿ ರಕ್ತ ಕೊಡೋಪವರು ಸಿಕ್ಕಿದರಾ?

ಮತ್ತೊಬ್ಬ : ಹೌದು ಸಾರ್. (ಮೊದಲು ರಕ್ತ ಕೊಡಲು ಬಂದ ಆತನನ್ನು ಮುಂದೆ ಕಳುಹಿಸುವನು).

ಕಾಂಪೌಂಡರ್ : ಬನ್ನಿ ಒಬ್ಬೊಬ್ಬರಾಗಿ ಬನ್ನಿ. (ಮುಂದೆ ಬಂದ ಆತ, ಕುಡುಕ ಮತ್ತು ನಿರುದ್ಯೋಗಿಯ ರಕ್ತವನ್ನು ಪರೀಕ್ಷೆಗಾಗಿ ತೆಗೆದುಕೊಳ್ಳುವನು. ಅಷ್ಟರಲ್ಲಿ ಡಾಕ್ಟರ್ ಪ್ರವೇಶ ಮಾಡುವರು).

ಡಾಕ್ಟರ್ : ರಕ್ತ ಬಂತಾ. ಎಲ್ಲಿ ಸಿಸ್ಟರ್ ಕೊಡಿ ಇಲ್ಲಿ. ಕಾಂಪೌಂಡರ್ ಒಬ್ಬೊಬ್ಬರಾಗಿ ಕರೀರಿ. (ಕಾಂಪೌಂಡರ್ ಕೂಗುವನು. ಮೊದಲು ಆತ ಬರುವನು).

ಡಾಕ್ಟರ್ : ಅರೆ ನೀನಾ. ನೀನು ನಿನ್ನೆ ತಾನೇ ರಕ್ತ ಕೊಟ್ಟಿದ್ದೀಯಾ? ಇವತ್ತು ಹೇಗಯ್ಯಾ ಬಂದೆ?

ಆತ : ಅದು ನಿನ್ನೆ ತಾನೆ. ಇವತ್ತಲ್ವಲ್ಲಾ. ತಗೊಳ್ಳಿ ಡಾಕ್ಟರೆ.

ಡಾಕ್ಟರ್ : ನೋಡಯ್ಯ ರೋಗಿಯ ಜೀವ ಎಷ್ಟು ಮುಖ್ಯವೋ ಹಾಗೆ ನಿನ್ನ ಜೀವಾನೂ ಮುಖ್ಯ. ಗಂಡಸಾಗಿದ್ದರೆ ೪ ತಿಂಗಳಿಗೆ ಒಂದು ಸಲ ಹೆಂಗಸಾಗಿದ್ರೆ ೬ ತಿಂಗಳಿಗೆ ಒಂದು ಸಲ ರಕ್ತವನ್ನು ಕೊಡಬಹುದು. ನೀನು ನಿನ್ನೆ ತಾನೆ ರಕ್ತ ಕೊಟ್ಟಿರುವುದರಿಂದ ರಕ್ತ ತೆಗೆದುಕೊಳ್ಳಲು ಬರುವುದಿಲ್ಲ. ಆದ್ದರಿಂದ ನೀನು ಹೋಗಬಹುದು. ನೆಕ್ಸ್ಟ್ (ಕಾಂಪೌಂಡರ್ ಕುಡುಕನನ್ನು ಕೂಗುವನು; ಕುಡುಕ ಡಾಕ್ಟರನ್ನು ಕಂಡು ಗಾಬರಿಯಿಂದ ನಿಲ್ಲುವನು).

ಡಾಕ್ಟರ್ : ಅರೆ ಇವನಾ. ಇವನನ್ನು ಯಾಕೆ ಕರೆದುಕೊಂಡು ಬಂದಿರಿ. ಇವನು ಕುಡುಕ. ಅಲ್ಲದೆ ಕ್ಷಯ, ಜಾಂಡೀಸ್, ವೀಡಿ ಎಲ್ಲಾ ರೀತಿಯ ಕಾಯಿಲೆಗಳೂ ಇವೆ.

ಕುಡುಕ : ಏನ್ ಡಾಕ್ಟರ್ ಒಂದು ರೇಡಿಯೋಗೆ ಗತಿ ಇಲ್ಲ. ಇನ್ನು ವಿಡಿಯೋ ಎಲ್ಲಿಂದ ತರಲಿ?

ಡಾಕ್ಟರ್ : ನಾನು ಹೇಳಿದ್ದು ನಿನ್ನ ಕಾಯಿಲೆ ವಿಷಯ. ವಿಡಿ ಕಾಯಿಲೆ ಅಂತಾ.

ಕುಡುಕ : ಕಾಯಿಲೆ ಇದ್ರೆ, ನೀವೇ ವಾಸಿ ಮಾಡೋಕೆ ಆಗಲ್ವೇ. ಅಲ್ಲಿ ಒಳಗೆ

ರೋಗಿ ಸಾಯ್ತಾ ಬಿದ್ದಿದ್ರೆ ಇಲ್ಲಿ ನೀವು ವೀಡಿ ಬಗ್ಗೆ ಮಾತಾಡ್ತ ಇದ್ದೀರಲ್ಲ.

ಡಾಕ್ಟರ್ : ಅದು ಹಾಗಲ್ಲಯ್ಯ. ಈ ಕ್ಷಯ, ಜಾಂಡೀಸ್, ವೀಡಿ ಈ ರೀತಿಯ ಕಾಯಿಲೆಗಳು ಇರುವ ರೋಗಿಗಳಿಂದ ರಕ್ತವನ್ನು ತೆಗೆದುಕೊಳ್ಳ ಬಾರದು. ಆ ರಕ್ತವನ್ನು ಬೇರೆಯವರಿಗೆ ಕೊಡಲೂಬಾರದು. ಆದ್ದರಿಂದ ನೀನು ಹೋಗಬಹುದು.

ಕುಡುಕ : ಅಲ್ಲಾ ಡಾಕ್ಟರೇ ಒಂದು ವಿಚಾರ...

ಡಾಕ್ಟರ್ : ಏನ್ರೀ ಇಂತವರನ್ನೆಲ್ಲಾ ಕರೆದುಕೊಂಡು ಬಂದು ನಮ್ಮ ತಲೆ ತಿನ್ನುತ್ತೀರಿ. ಕಳುಹಿಸ್ರೀ ಇವನನ್ನು ಆಚೆಕೆ ನೆಕ್ಸ್ಟ್.
(ನಿರುದ್ಯೋಗಿ ಬರುವನು)

ಡಾಕ್ಟರ್ : ನೋಡಿ ಮಿಸ್ಟರ್ ನಿಮ್ಮ ಗುಂಪು, ಈ ಗುಂಪಿಗೆ ಹೊಂದಿಕೆ ಯಾಗಲ್ಲ. ಆದ್ದರಿಂದ ನಿಮ್ಮ ರಕ್ತ ತೆಗೆದುಕೊಳ್ಳಲು ಬರುವು ದಿಲ್ಲ. ನೀವು ಹೋಗಬಹುದು.

ನಿರುದ್ಯೋಗಿ : ಸಾರ್, ನಾನು ಯಾವ ಗುಂಪಿಗೂ ಸೇರ್ದೋನಲ್ಲ. ಸಾರ್. ಕಡೆ ಪಕ್ಷ ಮಂಡಲ ಪಂಚಾಯ್ತಿ ಸದಸ್ಯ ಕೂಡ ಅಲ್ಲ ಸಾರ್.

ಡಾಕ್ಟರ್ : ನೋಡ್ರೀ, ನಾನು ಪಕ್ಷ ಪಂಗಡದ ವಿಚಾರ ಹೇಳ್ತಿಲ್ಲ. ರಕ್ತದಲ್ಲಿ ಎ ಗುಂಪು ಬಿ ಗುಂಪು ಎಬಿ ಗುಂಪು ಓ ಗುಂಪು ಅಂತ ನಾಲ್ಕು ಗುಂಪುಗಳಿವೆ. ನಿಮ್ಮದು ಎಬಿ ಗುಂಪು. ರೋಗಿಯದು ಬಿ ಗುಂಪು ಆದ್ದರಿಂದ ನಿಮ್ಮ ರಕ್ತ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನೀವು ಹೋಗಬಹುದು.

ನಿರುದ್ಯೋಗಿ : ಸಾರ್ ಹಾಗೆ ಹೇಳ್ಬೇಡಿ ಸಾರ್. ಏನಾದ್ರೂ ಮಾಡಿ ಅಡ್ಜೆಸ್ಟ್ ಮಾಡ್ಕೊಳ್ಳಿ ಸಾರ್. ಪ್ಲೀಸ್.

ಡಾಕ್ಟರ್ : ನೋಡ್ರಿ ಇದ್ರಲ್ಲಿ ಅಡ್ಜೆಸ್ಟ್ ಮಾಡೋಕೆ ಆಗೋಲ್ಲಾರಿ.

ನಿರುದ್ಯೋಗಿ : ಸಾರ್, ನಾನು ಹೊಟ್ಟೆಗೆ ಊಟ ಇಲ್ಲದೆ ಹೀಗ್ಮಾಡ್ತಾ ಇದ್ದೀನಿ ಸಾರ್. ಏನಾದ್ರೂ ಮಾಡಿ ಸಾರ್.

ಕಾಂಪೌಂಡರ್ : ಸಾರ್, ಪೇಷಂಟ್ ಭಾರೀ ಸೀರಿಯಸ್.

ಡಾಕ್ಟರ್ : (ಒಳಕ್ಕೆ ಅವಸರದಿಂದ ಹೋಗಿ ಸಪ್ಪೆ ಮೋರೆಯಿಂದ ಹಿಂತಿರುಗಿ ಬರುವರು.)

ಎಲ್ಲರೂ : ಏನಾಯ್ತು ಸಾರ್.

ಡಾಕ್ಟರ್ : ಆಗೋದೇನು, ಅವನು ಹೋಗ್ಬಿಟ್ಟ. ನೀವೆಲ್ಲ ತಿಳ್ಕೊಂಡಿದ್ದೀರ. ಅವನು ಸತ್ತಿದ್ದು ಅಪಘಾತದಿಂದ ಅಂತಾ. ಅದು ಸುಳ್ಳು. ಅವನು ಸತ್ತಿದ್ದು ನಿಮ್ಮ ಅಜಾಗರೂಕತೆಯಿಂದ, ನಿಮ್ಮ ಬೇಜವಾಬ್ದಾರಿಯಿಂದ ಅಂತ ಹೇಳಿ. ಅದ್ಯಾರೋ ಮೂರು ಜನ ಹಿಡ್ಕೊಂಡು ಬರೋ ಬದಲು ನಿಮ್ಮಲ್ಲಿ ಮೊದಲೇ ಯಾರಾದರೂ ರಕ್ತ ಕೊಟ್ಟಿದ್ದರೆ ಆತ ಬದುಕೋ ಸಾಧ್ಯತೆ ಜಾಸ್ತಿ ಇತ್ತು. ಆದರೆ ನೀವು ಇಲ್ಲದ ಸಬೂಬು ಹೇಳಿ ರಕ್ತ ಕೊಡಲಿಲ್ಲ. ಆತ ಸತ್ತ.

ಬಂಧುಗಳೇ, ನಮ್ಮ ದೇಶದಲ್ಲಿ ಪ್ರತಿನಿತ್ಯವೂ ಈ ರೀತಿಯಲ್ಲಿ ರಕ್ತದ ಅವಶ್ಯಕತೆ ಮೇಲಿಂದ ಮೇಲೆ ಬೀಳುತ್ತಿರುತ್ತದೆ. ರಕ್ತ ಎನ್ನುವುದು ಒಂದು ಜೀವ ದ್ರವ. ಇದನ್ನು ಯಾವ ಕಾರ್ಖಾನೆಯಲ್ಲಿಯೂ ಯಾರೂ ತಯಾರು ಮಾಡುವುದಿಲ್ಲ. ಇದು ನಮ್ಮ ದೇಹದಲ್ಲಿಯೇ ತಯಾರಾಗುತ್ತದೆ. ಒಬ್ಬ ಆರೋಗ್ಯವಂತನ ದೇಹದಲ್ಲಿ ೬ ರಿಂದ ೫ ೧/೨ ಲೀಟರ್ ರಕ್ತವಿರುತ್ತದೆ. ಅದರಲ್ಲಿ ೨೦೦ ಮಿಲಿ ಲೀಟರ್ ಅಥವಾ ೨೫೦ ಮಿಲಿ ಲೀಟರ್ ರಕ್ತವನ್ನು ದಾನ ಮಾಡಿದರೆ ನಮಗೆ ಯಾವ ನಷ್ಟವೂ ಆಗುವುದಿಲ್ಲ. ಹಾಗೆ ದಾನ ಮಾಡಿದ ರಕ್ತ ಮತ್ತೆ ಕೆಲವೇ ಗಂಟೆಗಳಲ್ಲಿ ನಮ್ಮ ದೇಹವನ್ನು ಬಂದು ಸೇರುತ್ತದೆ. ಇದರಿಂದ ನಮಗೆ ಯಾವ ಹಾನಿಯೂ ಆಗುವುದಿಲ್ಲ. ಆದ್ದರಿಂದ ಮುಕ್ತವಾಗಿ ರಕ್ತದಾನ ಮಾಡಿ, ಜೀವಗಳನ್ನು ಉಳಿಸಿ.

ಎಲ್ಲರೂ : ರಕ್ತದಾನ ಮಾಡಿ ಜೀವಗಳನ್ನು ಉಳಿಸಿ
ರಕ್ತದಾನ ಮಾಡಿ ಜೀವಗಳನ್ನು ಉಳಿಸಿ.



## ಪೀಡೆ

(ಹಾಡು)

ಯಾರಿಗೆ ಬೇಕು ಈ ಪೀಡೆ
ಊರೂರಲ್ಲು ಈ ಪೀಡೆ
ಸೊಳ್ಳೆಯೆ ನನ್ನ ದೇವರು
ಬದುಕಲು ನನಗೆ ಬಲು ಉಸಿರು
ನನ್ನೊಡನಿದ್ದರೆ ಎಲ್ಲರಿಗೂ ಒಂದೇ ಬರುವುದು ಕೊನೆ ಉಸಿರು.

ಪೀಡೆ : ನಾನು...ಪೀಡೆ, ನನ್ನ ಹೆಸರು ಮಲೇರಿಯಾ ಅಂತ, ನಾನು ಹಳ್ಳಿ ಜನರಿಗೆ ತುಂಬಾ ಸ್ನೇಹಿತ. ಯಾಕೆಂದರೆ ನನಗೆ ಇರಲಿಕ್ಕೆ ಜಾಗ ಕೊಡ್ತಾರೆ, ನಾನು ಬದುಕಲಿಕ್ಕೆ ಬೇಕಾದ ವ್ಯವಸ್ಥೆ ಮಾಡ್ತಾರೆ. ನನಗೆ ಅನ್ನ ನೀರು ಎಲ್ಲ ಕೊಟ್ಟು ಸಾಕ್ತಾರೆ. ನಿಮಗೆ ನಂಬಿಕೆ ಇಲ್ಲದಿದ್ದರೆ ಈಗ ಒಂದು ಹಳ್ಳಿಗೆ ಹೋಗೋಣಾ ಬನ್ನಿ, ನಿಮಗೂ ತೋರುಸ್ತೀನಿ.

(ಹಾಡುತ್ತಾ ಹೋಗುವುದು)

(ಹಳ್ಳಿಯ ದೃಶ್ಯ.....Borewell. ಅಲ್ಲಿ ಬಟ್ಟೆ ಒಗೆಯುವುದು, ದನ ತೊಳೆಯುವುದು, ನೀರು ತರುವುದು)

ಬಟ್ಟೆ ಒಗೆಯುವವಳು : ಏನೆ, ಲಕ್ಷ್ಮಿ ನೀರು ಸಾಕ

ಲಕ್ಷ್ಮಿ : ಇಲ್ಲ ಕಣಕ್ಕ ಇನ್ನು ೪ ಬಿಂದಿಗೆ ಬೇಕು. ಇವತ್ತು ನಮ್ಮ ಮನೆಗೆ ನೆಂಟರು ಬಂದವರೆ, ಬರಲಾ?

ಶಂಕರಪ್ಪ : ಲೇ....ಈ ಕಡೆ ಬನ್ನರ್ಲ......ದನ ತೊಳೆಯ ಜಾಗದಲ್ಲೆ ಹಲ್ಲು ಉಜ್ಜಿಕೊಂಡು ನಿಂತು ಬಿಟ್ಲು.

ಹುಡುಗಿ : ಬೋರ್‌ವೆಲ್ ಏನು ನಿಂದ? ನಾನು ಎಲ್ಲಿಯಾದ್ರು ತೊಳುಕೋತೀನಿ ನಿಂಗೇನು.

(ಎಲ್ಲರೂ ಬೋರ್‌ವೆಲ್ಲ, ಮುಂದೆ ಗೊಟ್ಟಿಮಾಡುವಾಗ ಸ್ಟಿಲ್, ಹಾಡು)

(ಹಾಡು)

ಊರ ಮುಂದೆ ಬೋರ್ ಒಂದೈತೆ
ಅದರ ಸುತ್ತಲು ನಾರುತ್ತೈತೆ
ಕೇಳೋರು ಯಾರಿಲ್ಲ, ಊರಲ್ಲಿ ಬಿಗಿಯಿಲ್ಲ,
ಇಂಗಾದ್ರೆ ಈ ಊರು ಉಳಿಯೊಲ್ಲ.

ಪೀಡೆ : ನೋಡಿದ್ರಾ, ನಮ್ಮ ಹಳ್ಳಿ ಜನ ಎಷ್ಟು ಒಳ್ಳೆಯವರು ಅಂತ, ನಾನು ಇರಲಿಕ್ಕೆ ಬೇಕಾದ ಅನುಕೂಲ ಎಂಗೆ ಮಾಡಿಕೊಟ್ಟವರೆ. ಈಗ ನಾನು ಇದರ ಮೂಲಕ ಈ ಊರಿಗೆ ಪ್ರವೇಶ ಮಾಡ್ತಿನಿ.

(ಹಾಡು ಹೇಳುತ್ತಾ ೨ ಸುತ್ತು ಸುತ್ತಬೇಕು)
(ತಕ್ಷಣ ಎರಡು ಮನೆ ನಿರ್ಮಾಣವಾಗಬೇಕು)

ಪೀಡೆ : ಹಾಂ....ಸರಿಯಾದ ಜಾಗಕ್ಕೆ ಬಂದೆ.....ಈ ಮನೆಗಳಲ್ಲಿ ಮಕ್ಕಳು ಇದ್ದಾವೆ. ನಾನು ಸೀದಾ ಅವರಿಗೆ ಪ್ರವೇಶ ಮಾಡ್ತಿನಿ.

ಮಗು : ಕೆಮ್ಮುವುದು, ಅಳುವುದು, (ಎಲ್ಲರು ಮಲಗಿರುವರು)

ಅಪ್ಪ : ಲೇ....ವಳೆ ಮೇಲೆ.... ಮಗು ಯಾಕೋ ಅವಾಗಿನಿಂದ ಕೆಮ್ಮುತ್ತಾ ಅವನೆ.....ಎದ್ದು ನೋಡೆ.

ತಾಯಿ : ಏನಪ್ಪ....ಅಯ್ಯೋ, ರೀ ಸಕತ್ತಾಗಿ ಜ್ವರ ಬಂದಾವೆ, ಏನ್ರಿ ಮಾಡುದು ಈಗ, ನಡೀರಿ ಹೋಗಿ ಆಸ್ಪತ್ರೆಗೆ ಹೋಗಿ ಬರೋಣ.

ಮಗು : ಅಪ್ಪಾ ಅಪ್ಪಾ ಸಕತ್ ಸುಸ್ತಾಗೈತೆ. ಸ್ವಲ್ಪ ನೀರು ಕುಡುಸಮ್ಮ.

ತಂದೆ : ಲೇ ಲೇ....ಸುಮ್ಮಿರೆ ನೀರು ಕುಡಿಸಬೇಡ, ಜ್ವರ ಬಂದೋರಿಗೆ ನೀರು ಕುಡಿಸಬಾರದು, ನಾನು ಬೇಗ ಹೋಗಿ ಐನಾರ್ ಕರಕೊಂಡು ಬರ್ತಿನಿ....ಶಾಂತಿ ಮಾಡಿಸಿದರಾಯ್ತು ಇಲ್ಲೇ ಇರು. (ಹೋಗುವನು)

ಪಕ್ಕದ ಮನೆಯವಳು : ಏನೆ ಅಕ್ಕ ಅದು. ಮಗು ರಾತ್ರಿಯಿಂದ ಒಂದೇ ಸಮನೆ ಅಳ್ತಾ ಇದೆ. ಬೇಗ ಹೋಗಿ ಆಸ್ಪತ್ರೆಗೆ ತೋರ್ಸಿ ಬನ್ನಿ.

ತಾಯಿ : ಆಸ್ಪತ್ರೆಗೆ ಬೇಡವಂತೆ. ನಮ್ಮ ಮನೆಯವರು ಐನಾರ್ ಕರಕೊಂಡು ಬರೋಕೆ ಹೋಗಿದ್ದಾರೆ.

ಪಕ್ಕದ
ಮನೆಯವಳು : ಅಯ್ಯ ಮೊನ್ನೆಯಿಂದ ನಮ್ಮೂರಲ್ಲಿ ಮೂವತ್ತು ನಲವತ್ತು ಜನ ಇಂಗೆ ಮಲಗವರೇ. ಇದು ಊರಲ್ಲಿ ಅರಿಯೊ ಕಾಯಿಲೆ ಅಲ್ಲ. ಸುಮ್ಮನೆ ಆಸ್ಪತ್ರೆಗೆ ಹೋಗಿ...ನಮ್ಮೂರವರೆಲ್ಲ ಹೋಗಿ ರಕ್ತ ಪರೀಕ್ಷೆ ಮಾಡಿಕೊಂಡು, ಔಷಧಿ ಮಾತ್ರೆ ತಗೊಂಡು ಬಂದವರೇ.

ಅಪ್ಪ : ಹೇ......ಸುಮನಿರಮ್ಮ.....ಕೆಲಸ ಇಲ್ಲದೆ ಆಸ್ಪತ್ರೆಗೆ ಹೋಗ ಬೇಕು ಅಷ್ಟೇ, ಸುಮ್ನೆ ದುಡ್ಡು ದಂಡ ಮಾಡಕೆ, ಸ್ವಾಮಿ.... ಬನ್ನಿ.... ಬನ್ನಿ....
ನೋಡಿ ರಾತ್ರಿಯಿಂದ ಒಂದೇ ಸಮನೆ ನರಳುತ್ತಾ ಅವನೆ.

ಐನಾರು : (ಪಂಚಾಂಗ ನೋಡಿ) ನೋಡ್ರಿ ಈ ಮಗುವಿಗೆ ಶ್ರವಣದೋಷ ಇದೆ. ಅದಕ್ಕೆ ಶಾಂತಿ ಮಾಡಬೇಕು.

ಅಮ್ಮ : ಅಯ್ಯೋ ಸ್ವಾಮಿ....ಬೇಗ ಮಾಡಿ....ಆ ಹುಡುಗ ಗೋಳಾಡದು ನೋಡಕ್ಕಾಗಲ್ಲ.

ಐನಾರು : ಎಲ್ಲಿ, ಹುಡುಗನನ್ನು ಎಬ್ಬಿಸಿ ಕೂರಿಸಿಕೊಳ್ಳಿ. ಓಂ ಹ್ರೀಂ, ರೂಂ.... (ಮುಖಕ್ಕೆ ನೀರು ಹಾಕುವನು) ಇವನಿಗೆ ಅನ್ನ ನೀರು ಏನೂ ಕೊಡ ಬೇಡಿ..... ಹಾಗೆ ಮಲಗಿಸಿ, ಸಂಜೆವೊಳಗೆ ಸರಿಯಾಗ್ತನೆ, ನಾನು ಬರಲಾ. (ತಕ್ಷಣ ಮಗು ಒದ್ದಾಡಿ ಸಾಯುವುದು) ಎಲ್ಲರೂ ಅಳುವರು.

(ಹಾಡು)
ಚಂದ್ರಣ್ಣನ ಮಗುವಿಗೆ ಚಳಿಜ್ವರ ಬಂದೈತೆ
ಮನೆ ಮಂದಿಗೆಲ್ಲ ಗಾಬರಿಯಾಗ್ಯೆತೆ
ಐನೋರು ಕರೆಸಿಬಿಟ್ರು, ಯಂತ್ರಾವ ಕಟ್ಟಿಸಿಬಿಟ್ರು
ಮಗು ಸತ್ತೋದ ಮ್ಯಾಲೆ ಕಣ್ ಕಣ್ ಬಿಟ್ರು
(ರಂಗೇನಹಳ್ಳಿಯ ೨೦ ಜನ ಆಸ್ಪತ್ರೆಲಿರುವರು)

ಗೌಡ್ರು : ಡಾಕ್ಟ್ರೆ ಡಾಕ್ಟ್ರೆ.... ಏನಾಗಿದೆ ಒಂದೇ ಸಾರಿ ನಮ್ಮೂರರೊಗೆಲ್ಲ ಇಂಗಾಗಿದೆಯಲ್ಲ.

ಡಾಕ್ಟರು : ಏನ್ರಿ, ನಿಮಗೇನು ಬುದ್ಧಿ ಗಿದ್ದಿ ಇದಿಯೇನ್ರಿ ಊರವರೆಲ್ಲ ಇಷ್ಟು ಜನ ಕಾಯಿಲೆ ಮಲಗಿದ್ರು, ಶಾಸ್ತ್ರ, ಮಂತ್ರ, ತಾಯ್ತ, ಅಂತ

ಅನ್ಯಾಯವಾಗಿ ೫ ಜನ ಸಾಯಂಗೆ ಮಾಡಿದ್ರಲ್ಲರಿ.... ನಿಮ್ಮೂರಿಗೆ ಮಲೇರಿಯಾ ಹರಡೈತೆ.

ಗೌಡ್ರು : ಇದೇನು ಡಾಕ್ಟ್ರು....ಯಾವ ಊರಿಗೂ ಇಲ್ಲದಿರೋ ಮಲೇರಿಯಾ ನಮ್ಮೂರಿಗೆ ಎಂಗೆ ಬಂತು.

ಡಾಕ್ಟರು : ಎಂಗೆ ಬಂತು ಅಂದ್ರೆ... ನಿಮ್ಮದು ಒಂದು ಊರು ಏನ್ರಿ.... ಅದೇನು ಗೊಜ್ಜೆ. ನಿಮ್ಮೂರ ನೀರಿನ ಟ್ಯಾಂಕ್ ತೊಳೆದು ಎಷ್ಟು ದಿನ ಆಯ್ತುರಿ.

ಗೌಡ : ಅದಿನ್ಯಾಕೆ ತೊಳಿಬೇಕು ಮ್ಯಾಲಗಡೆ ಸ್ವಲ್ಪ ಮುಚ್ಚಿಬಿಟ್ಟಿದಿವಲ್ಲ.

ಡಾಕ್ಟರು : ಅದಕೆ ಇಂಗಾಗಿರೋದು...ಕುಡಿಯೋ ನೀರಿನ ಟ್ಯಾಂಕನ್ನ ಒಂದು ವಾರಕ್ಕೊಂದು ಸಾರಿನಾದ್ರು ತೊಳೆದು ಒಣಗಿಸಿ ಆಮ್ಯಾಲೆ ನೀರು ಬಿಡಬೇಕು. ಅದು ಅಲ್ಲದೆ...ನಿಮ್ಮೂರ ಬೋರ್‌ವೆಲ್ ಹತ್ರ ಏನಾಗಿದೆ ನೋಡಿದ್ರೇನ್ರಿ......ಅಲ್ಲೆ ಬಟ್ಟೆ ಒಗೆಯದು, ಅಲ್ಲೆ ದನ ತೊಳೆಯೋದು. ಅಲ್ಲೆ ನೀರು ತಂದು ಕುಡಿಯೋದು.

ಗೌಡ್ರು : ಅದು ಊರೊಳಗಿಲ್ಲ ಬಿಡಿ. ಆ ಕಾಲೋನಿ ಹತ್ರ ಅಂಗಿರಬಹುದು.

ಡಾಕ್ಟರು : ಊರೊಳಗೆ ಇಲ್ಲದೆ ಇರಬಹುದು. ಊರಿನಿಂದ ೫ ಕಿಲೋಮೀಟರ್ ವರೆಗೆ ಈ ರೋಗ ಹಬ್ಬುತ್ತೆ. ನಿಮ್ಮೂರ ಮನೆ ಮುಂದೆ ಅದೇನು ವಾಸನೆ, ಅದೇನು ಸೊಳ್ಳೆ. ಇಂಗಾದ್ರೆ ಕಾಯಿಲೆ ಬರದೇ ಏನು ಮಾಡ್ತದೆ.....ಸಾಯದೆ ಏನು ಮಾಡ್ತರೆ.

ನಾಗೇಗೌಡ : ಡಾಕ್ಟರೇ, ನಿಜವಾಗಲು ಇದು ನಮಗೆ ಗೊತ್ತಿರಲಿಲ್ಲ. ಇನ್ನು ಮುಂದೆ ಅಂಗಾಗಕ್ಕೆ ಬಿಡಾಕಿಲ್ಲ, ನಾಳೆ ನಮ್ಮೂರಿನ ಜನನೆಲ್ಲಾ ಸೇರುಸ್ತೀನಿ ನೀವೆ ಸ್ವಲ್ಪ ಅವರಿಗೆ ತಿಳುವಳಿಕೆ ಹೇಳಿ.

ಕಾಂಪೌಂಡರ್ : ಸಾರ್.....ರಂಗೇನಹಳ್ಳಿಯವರು ಇನ್ನಿಬ್ಬರು ಪೇಶಂಟ್‌ಗಳು ಸತ್ತು ಹೋದರು.

ಡಾಕ್ಟರು : ಹೌದಾ...ನೋಡಿದರೇನ್ರಿ ಸ್ವಾಮಿ ಏನಾಯ್ತು.

(ಹಾಡು)
ಕಾಯಿಲೆಯು ಬಂದಾಗ ಕಣ್ಣು ಬಿಟ್ಟು ನೋಡಲಿಲ್ಲ
ಊರಿನಾ ಸ್ವಚ್ಛತೆಯ ಯಾರು ಕಾಪಾಡಲಿಲ್ಲ.

ಅಟ್ ಮ್ಯಾಲ್ ಒಲೆ ಉರಿದಂಗೆ
ಕೆಟ್ ಮ್ಯಾಲ್ ಬುದ್ಧಿಬಂತಲ್ಲ.
ಊರ ಹಾಡು, ಇವರು ಊರ ಗೌಡ್ರು,
ಊರ ಜನರು ಇವರು ಊರ ಜನರು

## ೨ನೇ ದೃಶ್ಯ

(ಅರಿವಿನ ಆಂದೋಲನ, ವೈದ್ಯಾಧಿಕಾರಿಗಳು ಗ್ರಾ.ಪಂ. ಅಧ್ಯಕ್ಷರು, ಸಮಾಜ ಸೇವಕರು ಇರುವರು)

ನಾಗೇಗೌಡ್ರು : ಈ ಕೆಂಪಾಪುರದ ಎಲ್ಲಾ ನನ್ನ ಬಂಧುಗಳೇ ಕೇಳಿ.....ನಮ್ಮೂರಿಗೆ ಒಂದು ದೊಡ್ಡ ಗಂಡಾಂತರ ಬಂದು ಬಿಟ್ಟೈತೆ. ನಮ್ಮ ದಡ್ಡತನ ದಿಂದ ಅನ್ಯಾಯವಾಗಿ ೬ ಮಕ್ಕಳು, ೩ ಜನ ಗರ್ಭಿಣಿಯರು, ಇಬ್ಬರು ಹಿರಿಯರು ಮಲೇರಿಯಾ ರೋಗಕ್ಕೆ ಬಲಿಯಾಗಿ ನಮ್ಮನ್ನೆಲ್ಲ ಬಿಟ್ಟು ಹೋದರು. ಇನ್ನು ಊರಿಗೆ ಊರೆ ಸಾಯ ಬೇಕಾಗಿತ್ತು. ಆದರೆ ನಮ್ಮ ಈ ಡಾಕ್ಟರು ಸಾಹೇಬ್ರ ಪ್ರಯತ್ನದಿಂದ ಕೆಲವರ್ನ ಬದುಕಿಸಿದರು. ಇವತ್ತು ನಿಮ್ಮನ್ನೆಲ್ಲ ಇಲ್ಲಿಗೆ ಕರೆಸಿದ ಉದ್ದೇಶ ಏನಪ್ಪ ಅಂದ್ರೆ.....ಈ ಮಲೇರಿಯಾ ಕಾಯಿಲೆ ಎಂತದು, ಇದು ಎಂಗೆ ಬರುತ್ತೆ, ನಾವು ಏನು ಮಾಡಬೇಕು ಅನ್ನೋ ವಿಚಾರನ ತಿಳಿಸುತ್ತಾರೆ. ಊರವರೆಲ್ಲ ಗಮನ ಇಟ್ಟು ಕೇಳಿ, ಅದರಂಗೆ ನಡಕಳ್ಳಿ ಅಂತ ಹೇಳ್ತಾ ಇಲ್ಲಿ ಬಂದೀರೋ ಎಲ್ಲಾ ಗಣ್ಯರನ್ನು ಸ್ವಾಗತಿಸು ತ್ತೇನೆ (ಚಪ್ಪಾಳೆ)
ಈಗ ನಮ್ಮ ಡಾಕ್ಟರು ಸಾಹೇಬ್ರು ನಮ್ಮ ಜನಗಳಿಗೆ ನಾಲ್ಕು ತಿಳುವಳಿಕೆ ಹೇಳಬೇಕುಂತ ಕೇಳಿಕೊಳ್ಳುತ್ತಿನಿ.

ಡಾಕ್ಟರು : ಕೆಂಪಾಪುರದ ಬಂಧುಗಳೇ....ನಿಮಗೇ ತಿಳಿದಂಗೆ ನಿಮ್ ಒಂದು ದೊಡ್ಡ ಗಂಡಾಂತರ ಬಂದೋಯ್ತು. ಇನ್ನು ಮ ತುಂಬಾ ಹುಷಾರಾಗಿರಬೇಕು.
ಈ ಮಲೇರಿಯ ಈಗಿನ ಕಾಲದ ಕಾಯಿಲೆಯಲ್ಲ. ತ ತಲಾಂತರದಿಂದಲೂ ಇರೋ ಕಾಯಿಲೆ. ಕೆಲವರು ಹೇಳ್ತಾ ನೀರಲ್ಲಿ ಸೊಳ್ಳೆ ಕುಳಿತು ಕಡಿದು ಈ ಕಾಯಿಲೆ ಬರುತ್ತೆ ಅಂತ. ಅದು ಅಲ್ಲ ಅನಾಫಿಲೀಸ್ ಅನ್ನೋ ಹೆಣ್ಣು ಸೊಳ್ಳೆ ಶುದ್ಧ ನೀರಲ್ಲೆ

ಕೂರೋದು. ಆ ನೀರಿನೊಳಗಡೆ ವೈರಸ್‌ನ್ನು ಬಿಟ್ಟು, ಅದನ್ನು ಕುಡಿದರೆ ಈ ರೋಗ ಉತ್ಪತ್ತಿಯಾಗುತ್ತೆ. ಆದ್ದರಿಂದ ಮುಖ್ಯವಾಗಿ ಮನೆಯ ಒಳಗಾಗಲಿ, ಹೊರಗಾಗಲಿ ಸೊಳ್ಳೆಗೆ ನೀರು ಸಿಗದಂಗೆ ಮಾಡಬೇಕು.

ಒಬ್ಬ : ಅಲ್ಲಾ ಸಾರ್....ಮನೆ ಮುಂದೆ ಹೋಗಲಿ ಈ ಕೆರೆಲಿ, ಕಟ್ಟೆಲಿ ಎಂಗೆ ಮಾಡೋದು.

ಡಾಕ್ಟರ್ : ಸರಿಯಾದ ಪ್ರಶ್ನೆ ಕೇಳಿದೆ.....ಅದಕ್ಕೂ ಈಗ ಹೊಸ ವಿಧಾನ ಬಂದಿದೆ. ಮೀನುಗಾರಿಕೆ ಇಲಾಖೆಲಿ ಗಪ್ಪಿ, ಗ್ಯಾಂಬೂಸಿ ಅಂತ ಮೀನು ಇದವೆ....ಅವನ್ನ ತಂದು ನಿಮ್ಮ ಕೆರೆ ಕಟ್ಟೆಗೆ ಬಿಟ್ರೆ ಸೊಳ್ಳೆ, ಕುಂತು ಮೊಟ್ಟೆ ಮರಿಗಳು, ನಾಶ ಮಾಡುತ್ತವೆ.

ಇನ್ನೊಬ್ಬ : ಸಾರ್....ಸಮ್ಮೂರರು ಕಳ್ಳ ಬಡ್ಡಿ ಮಕ್ಕಳು....ಮೀನು ತಂದು ಬಿಟ್ರೆ ರಾತ್ರಿ ಹೊತ್ತು ಹೋಗಿ ಇಡುಕೊಂಡು ತಿಂದುಬಿಡ್ತಾರೆ.

ಡಾಕ್ಟರ್ : ಸಾಧ್ಯಾನೆ ಇಲ್ಲ....ಈ ಮೀನುಗಳನ್ನು ಪ್ರಾಣಿ, ಪಕ್ಷಿ, ಮನುಷ್ಯರು ಯಾರು ತಿನ್ನೋಕ್ಕಾಗಲ್ಲ. ಆದ್ದರಿಂದ ಇವು ನಾಶ ಆಗಲಿಕ್ಕೆ ಸಾಧ್ಯಾನೆ ಇಲ್ಲ.

ಒಬ್ಬ : ಅಲ್ಲಾ ಸಾರ್, ಅಪ್ಪಿ ತಪ್ಪಿ, ಈ ಕಾಯಿಲೆ ಬಂದ್ರೆ ತಕ್ಷಣ ಗ್ಲೂಕೋಸ್ ಹಾಕಿಸಿಕೊಂಡ್ರೆ, ಹೋಗುತ್ತಂತೆ.

ಡಾಕ್ಟರು : ಖಂಡಿತ ತಪ್ಪು....ಮಲೇರಿಯಾ ಕಾಯಿಲೆ ಬಂದ್ರೆ, ಡಾಕ್ಟರು ಕೂಡಾ ಮಲೇರಿಯ ಮಾತ್ರೆ ಬಿಟ್ಟು ಯಾವುದೇ ಇಂಜಕ್ಷನ್ ಗ್ಲೂಕೋಸ್ ಬೇರೆ ಮಾತ್ರೆ ಯಾವುದನ್ನು ಮುಟ್ಟಬಾರದು. ಅದು ಕಾಣಿಸಿಕೊಂಡ ತಕ್ಷಣ ಆಸ್ಪತ್ರೆಗೆ ಹೋಗಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು. ಅನಂತರ ಡಾಕ್ಟರು ಏನು ಹೇಳ್ತಾರೊ ಅದರಂತೆ ಖಡ್ಡಾಯವಾಗಿ ಪಾಲಿಸಲೇಬೇಕು. ಇದೆಲ್ಲ ಬಿಟ್ಟು ದೇವರು, ದಿಂಡ್ರು, ಶಾಸ್ತ್ರ, ಮಂತ್ರ ಅಂತ ಅನ್ಯಾಯವಾಗಿ ಜೀವ ತೆಗೆಯಬೇಡಿ. ಇನ್ನು ಮುಂದಾದರು ತಾವೆಲ್ಲ ಒಳ್ಳೆ ರೀತಿಲಿ ನಡಕೊಂತಾ ಹೋಗ್ತಿರಿ ಅಂತ ಹೇಳಿ ನನ್ನ ಮಾತ ಮುಗುಸ್ತೀನಿ.

ಗೌಡ : ಈಗ ನಮ್ಮ ಗ್ರಾ.ಪಂ. ಅಧ್ಯಕ್ಷರು ನಾಲ್ಕು ಮಾತಾಡ್ತಾರೆ.

ಅಧ್ಯಕ್ಷರು : ಬಂಧುಗಳೇ....ನಿಜಕ್ಕೂ ಇವತ್ತು ಈ ಊರಿಗೆ ಅದೃಷ್ಟ. ಇಷ್ಟೆಲ್ಲ ತಿಳುಕೊಂಡಿದ್ರು ನಮಗೆ ಕೆಲವು ವಿಷಯ ತಿಳಿದಿರಲಿಲ್ಲ. ಇವತ್ತು ನಮ್ಮ ಡಾಕ್ಟರು ನಿಜಕ್ಕೂ ಈ ಊರಿನಲ್ಲಿ ಎಷ್ಟು ಜನಕ್ಕೆ ಜೀವದಾನ ಮಾಡಿದ್ದಾರೆ. ನಾಳೆನೇ ನಮ್ಮ ಗ್ರಾಮ ಪಂಚಾಯಿತಿಲಿ ಸ್ವಚ್ಛತೆ ಬಗ್ಗೆ ಕಮಿಟಿ ಮಾಡಿ ಪ್ರತಿ ಊರಿಗೂ ಭೇಟಿ ನೀಡಿ ಡಾಕ್ಟರ್ ಕೊಟ್ಟ ಸಲಹೇನ ಎಲ್ಲ ಸದಸ್ಯರು, ನಾಗರೀಕರು ಸೇರಿ ಮಾಡ್ತೀವಿ ಅಂತ ಹೇಳ್ತಾ ನನ್ನ ಮಾತು ಮುಗುಸ್ತಿನಿ.


ಸಮಾಜ ಸೇವಕರು : ಇವತ್ತು ನಡೆದ ಸಭೆಯಿಂದ ಈ ಊರಿಗೆ ಜ್ಞಾನೋದಯ ಆದ್ರೆ.... ನಾವು ಇಷ್ಟು ಮಾಡಿದ್ದಕ್ಕೂ ಸಾರ್ಥಕ. ಇಲ್ಲಿ ಇಷ್ಟೊತ್ತು ಇದ್ದು ನಮ್ಮೂರಿನ ಜನಕ್ಕೆ ಸಾಕಷ್ಟು ವಿಷಯ ತಿಳಿಸಿದ್ದಕ್ಕೆ ಎಲ್ಲರಿಗೂ ವಂದಿಸುತ್ತೇನೆ.

(ಹಾಡು)

(ಘೋಷಣೆ : ಓಡಿಸಿ ಓಡಿಸಿ ಮಲೇರಿಯಾ ಓಡಿಸಿ)

ಬದಕಲಿಕ್ಕೆ ಮನೆಯು ಇರಬೇಕು, ಮನೆ. ಸುತ್ತ ನೀರು ನಿಲ್ಲದಂತೆ
ನಿಗಾ ವಯಿಸಬೇಕು.
ಊರಿನ ಜನರು ಒಂದಾಗಬೇಕು ದಿನ ನಿತ್ಯವು ಗ್ರಾಮದ ಆರೋಗ್ಯ
ಕಾಪಾಡಬೇಕು.

❑



# ಜವಾಬ್ದಾರಿ

- *ಗ್ಯಾರಂಟಿ ರಾಮಣ್ಣ*

(ರಂಗಣ್ಣನ ಮನೆ. ಅವನ ಹೆಂಡತಿ ನಿಂಗಿ ಒಳಗಡೆ ಅಡುಗೆ ಮಾಡುತ್ತಿರುವಳು. ಅವನ ಮಗಳು ಹೊರಗಡೆ ಪಾತ್ರೆ ತೊಳೆಯುತ್ತಿರುವಳು)

ರಂಗಣ್ಣ : (ತಲೆಯ ಮೇಲೆ ಹುಲ್ಲು ಹೊರೆ ಹೊತ್ತು) ಅಬ್ಬಾಬ್ಬಾ ಬೆಳ ಬೆಳಗ್ಗೇನೆ ಏನು ಬಿಸಿಲು ಅಂತೀನಿ. ಒಳ್ಳೆ ಅಂಚಿನ ಮ್ಯಾಲೆ ರೊಟ್ಟಿ ಸುಟ್ಟಾಂಗಾಗುತ್ತೆ. (ಮಗಳನ್ನು ನೋಡಿ) ಲೇ....ಮನೆ ಮುಂದೇನೆ ಪಾತ್ರೆ ತೊಳೆದು ಗೊಜ್ಜೆ ಮಾಡ್ತಾ ಇದೀಯಾ, ಕಣ್ಣು ಕಾಣಾಕಿಲ್ವಾ ನಿನಗೆ.

ಮಗಳು : ಅಮ್ಮಾನೆ ಇಲ್ಲೆ ತಿಕ್ಕು ಅಂತ ಹೇಳಿದಳು.

ರಂಗಣ್ಣ : ಅಹಹ....ಅವಳು ಸರಿಯಾಗಿ ಬುದ್ದಿ ಕಲ್ತಿದ್ರೆ ತಾನೇ ನಿನಗೆ ಕಲಸೋದು...ಹೋಗು ಒಳಗೆ ಹೋಗಿ ಒಂದು ಚಂಬು ನೀರು ತಗಂಡು ಬಾ. (ತಂದುಕೊಡುವಳು) ಲೇ ಏನೆ ಅದು ನಿಮ್ಮ ಅಮ್ಮ ಒಳಗೆ ಗೊಣಗುಡ್ತಾ ಅವಳೆ...

ಮಗಳು : ಅಪ್ಪಾ....ಯಾಕೋ ನಿನ್ನ ಬೈತಾ ಅವಳೆ ಅಮ್ಮ.

ರಂಗಣ್ಣ : ಬೈದೆ ಏನ್ ಮಾಡ್ತಾಳೆ...ಹೊತ್ತಿಗೊತ್ತಿಗೆ ತಂದು ಹಾಕ್ತಿನಲ್ಲ ಅದು ಕುಣುಸುತ್ತೆ. ನಿಮಗೆಲ್ಲ ಮಾಡ್ತೀನಿ ತಡೇರಿ (ಒಳಗೆ ಬಂದು) ಲೇ ನಿಂಗಿ ನಿನಗೇನಾರ ಮಾನ ಮಾರ್ಯಾದಿ ಇದಿಯಾ....ಮನೆಮುಂದೆ ಗೊಜ್ಜೆ ಮಾಡಿಕೊಂಡು ಅದರ ತುಂಬಾ ಸೊಳ್ಳೆ ಕುಂತಕೊಂಡು ಎಷ್ಟೋಂದು ರಂಪ ಮಾಡಿದಿಯಲ್ಲೆ.

ನಿಂಗಿ : ಒ ಹೊ ಹೊ.....ಬಾರಿ ಅರಮನೆ ಕಟ್ಟಿಸಿದಿಯಾ ಅಂತ ದೂರ ಹೋಗಿ ತೊಳಿಬೇಕಾಗಿತ್ತು...ಊರೆಲ್ಲ ಮನೆ ಮುಂದೆ ತೊಳಿತಾರೆ... ನಿಮ್ಮದೇನು ಸ್ಪೆಶಲ್ ಅಲ್ಲಾತಗಳಿ.

ರಂಗಣ್ಣ : ಅಬ್ಬಬ್ಬಾ....ಅದ್ಯಾವ ನನ್ನ ಮಗ ನಿನ್ನ ಬಾಯಿ ಮಾಡಿದನೋ ಏನೋ ಯಾವಾಗ್ಲೂ ಕಪ್ಪೆ ವಡಗುಟ್ಟಂಗೆ ವಟ ವಟ ಅಂತಿಯಲ್ಲೇ .....ಊಟ ತಗಂಡು ಬಾ.

ನಿಂಗಿ : (ತಟ್ಟೆ ಇಟ್ಟು ತಟ್ಟೆಗೆ ನೀರು ಕೊಡುತ್ತ)....ಅಯ್ಯೊಯ್ಯೊ.....ಏನು ಗಂಡಾಸಾಗಿ ಹುಟ್ಟಿದಿಯೋ ಮಾರಾಯ. ನಿನ್ನ ಕೈ ನೋಡು ಆ ಸಗಣಿ, ಮಣ್ಣು ಅಂಗೆ ಐತೆ. ಅದರಲ್ಲೆ ಉಣ್ತಾ ಇದೀಯಲ್ಲ, ನೀನು ಮಾಡೋದು ಇಂಗೆ, ಊರಿಗೆಲ್ಲ ಬುದ್ಧಿ ಹೇಳೋಕೆ ಬರ್‍ತಿರಲ್ರೀ.

ರಂಗಣ್ಣ : ಸುಮ್ಮನೆ ತಗಂಡು ಬಾರೆ....ಕೈ ಮೇಲೆ ಏನು ದನ ಕಟ್ಟಾಕಿತ್ತಾ..... ದಿನಕೆ ಇಪ್ಪತ್ತು ಸಾರಿ ತೊಳಿಯಾಕೆ? ನನಗೆ ಹೇಳಾಕೆ ಬಂದು ಬಿಟ್ಲು (ಮಗಳು ಪಾತ್ರೆ ತರುವಳು) (ಮಗ ರಮೇಶ ಬರುವನು)

ರಮೇಶ : ಅಪ್ಪಾ....ಅಪ್ಪಾ....ಸ್ಕೂಲು ಬಿಟ್ರು....ಅಪ್ಪ ನಮ್ಮ ಸ್ಕೂಲಲ್ಲಿ ಎಲ್ಲಾ ಹುಡುಗರು...ಕಲ್ಲಂಗಡಿ ಹಣ್ಣು ತಿಂದ್ರು ಗೊತ್ತಾ ಅವ್ವ ನನಗೆ ದುಡ್ಡೆ ಕೊಡ್ಲಿಲ್ಲ.

ರಂಗಣ್ಣ : ನನ್ನ ಮಗ ಚಾಣಮರಿ....ಲೇ ನಿಂಗಿ ಒಂದ್ಯೆವತ್ತು ಪೈಸೆ ಕೊಟ್ಟಿದ್ರೆ ನಿನ್ನ ಗಂಟು ಹೋಗ್ತಿತ್ತಾ.

ನಿಂಗಿ : ಆ ಹ ಹ ಅವನು ಕೇಳ್ತಾನೆ...ನಾನು ಕೊಟ್ಟು ಬಿಡಬೇಕು. ಅವನು ಮಾರೋ ಹಣ್ಣಗೆ ಅದೆಷ್ಟು ಸೊಳ್ಳೆ, ನೊಣ ಮುತ್ತಿಕೊಂಡಿರ್‍ತಾವೋ, ಅವನೆ ತಿನ್ನಲಿ...ಮಲಗಿದ್ರೆ, ಆಸ್ಪತ್ರೆಗೆ ಹೊರೋಳು ನಾನು.

ರಂಗಣ್ಣ : (ಊಟ ಮುಗಿಸಿ)....ಲೇ ಪುಟ್ಟಿ....ಬಾಯಿಲ್ಲಿ.....ಆ ಕೊಟ್ಟಿಗೆ ಮನೇಲಿ ಗುದ್ದಲಿ ಐತೆ ತಗಂಡು ಬಾ.... ಮನೆ ಮುಂದೆ ಅದೆಷ್ಟೊಂದು ಗೊಜ್ಜೆ ಆಗ್ಯೆತೆ. ಆ ನೀರನೆಲ್ಲಾ ಹೊರಗೆ ಕಳಿಸಾನ

ಮಗಳು : ಅಪ್ಪಾ.....ಬೆಳಿಗ್ಗೆ ಅವ್ವ ನೀರ ಆಚೆಗೆ ಕಳಿಸೊಕೋಗಿ ಪಕ್ಕದ್ಮನೆ ತಿಮ್ಮಕ್ಕನ ಜೊತೆ ಜಗಳ ಮಾಡಿದ್ಲು.

ರಂಗಣ್ಣ : ಯಾಕೇ....ಅವಳಿಗೇನಾಗೇತಂತೆ ಜಗಳ ಆಡಕೆ......

ನಿಂಗಿ : ನಿಮ್ಮ ಮನೆ ಮುಂದಲ ನೀರು ನಮ್ಮ ಮನೆ ಮುಂದಕೆ ಯಾಕೆ ಕಳುಸ್ತಿರಾ.... ಬೇಕಾದ್ರೆ ಎತ್ತಿ ಆಚೆಗೆ ಉಯ್ಕರಿ ಅಂತ ಕಾಲ

ಕೆರೆಕೊಂಡು ಜಗಳಕ್ಕೆ ಬಂದಿದ್ಲು. ಅವಳಿಗೆಲ್ಲೊ ಗಾಚಾರ, ಅವಳ ಗಂಡನು ಅಂತಾವನೇ ಮನೆ ಮುಂದೆ ಆ ಪಾಟಿ ಕೊಚ್ಚೆ ಐತೆ. ಸುಮ್ನೆ ತಿರುಗಾಡ್ತಾನೆ. ಇವತ್ತು ಮಾಡ್ತೀನಿ ತಡಿ (ಹೊರಗೆ ಬಂದು ಕೆಲಸ ಮಾಡುವನು)

ಕೆಂಚ : (ಪಕ್ಕದಮನೆ).....ಲೇ.....ರಂಗ.....ತಲೆ ಗಿಲೆ ಕೆಟ್ಟೈತೇನ್ಲ..... ಬೆಳಿಗ್ಗೆಯಿಂದ ನೋಡ್ತಾ ಇದೀನಿ ಗಂಡ ಆದ ಮೇಲೆ ಹೆಂಡ್ತಿ, ಹೆಂಡ್ತಿ ಆದ ಮ್ಯಾಲೆ ಗಂಡ, ಬೇಕೂಂತಲೇ ಕಿತಾಪತಿ ಮಾಡ್ತಾ ಇದೀರಾ?

ರಂಗ : ಅಲ್ಲಾ ಕಣ್ಲಾ ಕೆಂಚ.....ಮುಂದಿನ ನೀರ ಚರಂಡಿಲಿ ಕಳಿಸೋದು ಬಿಟ್ಟು, ಬೇರೆ ಇನ್ನೆಲ್ಲಿ ಕಳುಸೋಕ್ಕಾಗುತ್ತೆ.

ಕೆಂಚ : ಎಲ್ಲಾದ್ರು ಕಳಸು.....ನನ್ನ ಮನೆ ಮುಂದೆ ಮಾತ್ರ ಕಳಿಸಬ್ಯಾಡ, ನಿಮ್ಮ ನೀರೆಲ್ಲ ಬಂದು ನಮ್ಮ ಮನೆ ಮುಂದು ನಿಲ್ಲಬೇಕಾ.

ರಂಗ : ಅದೆಂಗೆ ನಿಮ್ಮ ಮನೆ ಮುಂದೆ ನಿಂತುಕೊಂಡು ಬಿಡ್ತವೆ ನಿಮ್ಮ ಮನೆ ಪಕ್ಕದ ಕರಿಯನ್ನ ಆ ನೀರ್ನ ಆಚೆಗೆ ಹಳ್ಳಕೆ ತಿರುವು ಅನ್ನು ಯಾರಿಗೂ ತೊಂದರೆ ಇರಲ್ಲ.

ಕೆಂಚ : ಆ ನನ್ನ ಮಗನ್ನ ನಾನು ಕೇಳಬೇಕಾ.....ಬೇಕಾದ್ರೆ ನೀನು ಕೇಳು.... ನನ್ನ ಮನೆ ಮುಂದ್ಲು ಕೆಲಸ ನಂದು

ರಂಗ : ಸ್ವಲ್ಪ ತಡಿ ನಾನೇ ಕೇಳ್ತೀನಿ. ಲೇ ನಿಂಗ, ನಿಂಗ (ಕೂಗುವನು) ಬಾರ್ಲ ಇಲ್ಲಿ....ಅಲ್ಲಾ ಕಣ್ಲಾ...ಮ್ಯಾಗಲಿಂದ ಚರಂಡಿ ನೀರು ಬರ್ತಾ ಇದೆ.... ನೀನು ಸ್ವಲ್ಪ ಕೆಳಗೆ ಹರಿಸಿದ್ರೆ, ಎಲ್ಲಾರ ಮನೆ ಮುಂದೆನು ಕ್ಲೀನ್ ಆಗುತ್ತೆ. ಅಷ್ಟು ಬುದ್ದಿ ಬೇಡವೇನ್ಲ ನಿನಗೆ.

ನಿಂಗ : ಲೋಯ್.....ನೀನ್ಯಾವನ್ಲ ನನಗೆ ಹೇಳೋಕೆ....ನಿನ್ನ ತಿಕ ನೀನು ತೊಳಕೋ...ನನ್ನ ಮನೆ ಮುಂದೆ ನನ್ನ ಮಕ್ಕಳು ಕೂರಿಸಿ ಕಕ್ಕಸ್ಸು ಮಾಡುಸ್ತೀನಿ ಅದು ನೀನ್ಯಾವನು ಕೇಳಾಕೆ.

ಕೆಂಚ : ಥೂ ನನ್ನ ಮಗನೆ.....ಉದ್ದುಕೂ ನಿಂದು ಇದೇ ಆಯ್ತು. ನೋಡು ಒಳ್ಳೆ ಮಾತ್ನಲ್ಲಿ ಹೇಳ್ತಾ ಇದೀನಿ ಮರ್ಯಾದಿಲಿ ಮನೆ ಮುಂದೆ ಅಚ್ಚುಕಟ್ಟು ಮಾಡು ಇಲ್ಲಂದ್ರೆ, ಮುಂದಕೆ ನೋಡು ನಿನ್ನ ಕಥೆಯ.

ನಿಂಗ : ಏನ್ಲಾ ಮಾಡ್ತಿಯ.... ಇಬ್ಬರು ಸೇರಿಕೊಂಡು ಹೊಡಿಯಾಕೆ

ಬಂದಿದಿರೇನ್ಲಾ.... ಬನ್ನಿರ್ಲ ಅದೆಷ್ಟು ಜನ ಕರುಕೊಂಡು ಬರ್‍ತಿಯ ಬಾರ್ಲ.

ನಿಂಗ ಹೆಂಡತಿ : ಅಯ್ಯೊ ಅಯ್ಯೊ..... ನಿನ್ನ ಬಾಯಿಗೆ ಮಣ್ಣಾಕ. ಬೆಳಿಗ್ಗೆಯಿಂದ ನಿನ್ನೆಂಡ್ತಿದಾಯ್ತು. ಈಗ ನಿಂದು ಶುರುವಾಯ್ತು.

ನಿಂಗಿ : ಅ ಹ ಹ ತಾಟಗಿತ್ತಿ ನಿನ್ನ ಕೊಳಕ ಮೊದಲು ಸರಿಮಾಡಿಕೊಂಡು ಆಮೇಲೆ ಇನ್ನೊಬ್ಬರಿಗೆ ಹೇಳು (ಹೆಂಗಸರು, ಗಂಡಸರು, ಜಗಳ ಮಾಡುತ್ತಿರುವಾಗ Still)

(ಹಾಡು)
ಚಿಕ್ಕ ಚಿಕ್ಕ ವಿಷಯಕ್ಕೆ ಕಿತ್ತಾಟ ಮಾಡುತಾರೆ
ಮನೆ ಮುಂದಿನ ಜಾಗವನ್ನು ಗಬ್ಬುನಾತ ಮಾಡುತ್ತಾರೆ
ಕೊಚ್ಚೆಯಲ್ಲಿ ಸೊಳ್ಳೆ ಕುಂತು ಮಲೇರಿಯ ಹರಡುತಾರೆ
ರಾಕ್ಷಸರು...ಇವರು.....ರಾಕ್ಷಸರು

ದೃಶ್ಯ ೨

(ಪಂಚಾಯತಿ ಕಟ್ಟೆ, ಊರಿನವರೆಲ್ಲ ಸೇರಿರುವರು, ಊರಿನ ಗೌಡ ಕೇಳುವನು)

ಗೌಡ : ಏನಿರ್ಲ.... ಏನಿರ್ಲ ಇವತ್ತಿನ ಪಂಚಾಯಿತು ಯಾರುದ್ರೂ ಪಂಚಾಯಿತಿ.

ಒಬ್ಬ : ಆ.....ನಿಂಗಣ್ಣನ್ನ ಕರಿಯಣ್ಣನು, ರಂಗಣ್ಣನು ಸೇರಿಕೊಂಡು ಓಗ್ಗಾಮುಗ್ಗಾ ಹೊಡದರಂತೆ ಅದಕೆ ನಿಂಗಣ್ಣ ಪಂಚಾಯಿತಿಗೆ ಸೇರಿಸ್ಯಾನೆ.

ಗೌಡ : ಏನ್ಲ ನಿಂಗ ಅದು...ವಸಿ ಏಳಲಾ ಊರವರೆಲ್ಲ ಕೇಳಿಸಿಕೊಳ್ಳಿ. ಯಾಕಲಾ? ಜಗಳ ಮಾಡಿದಿರಿ.

ನಿಂಗ : ನೋಡಿ ಗೌಡ್ರೆ.....ನನ್ನ ಪಾಡಿಗೆ ನಾನು ಮನೇಲಿ ಇದ್ದೆ. ಈ ರಂಗ ಬಂದು ನಿನ್ನ ಮನೆ ಮುಂದೆ ಗೊಜ್ಜೆ ಐತೆ ಆ ನೀರ್‍ನೆಲ್ಲಾ ಹೊರಗೆ ಕಳಸು ಅಂದ, ಅದಕೆ ನಾನು, ನಾನೇನು ನಿನ್ನ ಮನೆ ಹತ್ರ ಗೊಜ್ಜೆ ಮಾಡಿದಿನಾ....ನನ್ನ ಮನೆ ಹತ್ರ ನಾನು ಕಳುಸ್ತಿನೋ ಅಂಗೆ ಬುಟ್ಟುಕೊಂತಿನೋ.....ಅದು ನಿನಗ್ಯಾಕೆ ಹೋಗು ಅಂದೆ. ಅದಕೆ ಈ ಕೆಂಚ ಬಂದು ಎದ್ದಾ ತದ್ದಾ ಮಾತಾಡಿ ಅವರು, ಅವರ

ಹೆಂಗಸರೆಲ್ಲ ಬಂದು, ಹಿಗ್ಗಾಮುಗ್ಗಾ ಹೊಡಿತರಲ್ಲಾ ಇದು ನ್ಯಾಯಾನಾ? ನಾವೇನು ಊರಾಗೆ ಇರಬೇಕೋ ಬ್ಯಾಡವೊ ನೀವೇ ಹೇಳಿ?

ಕೆಂಚ : ಬರಿ ಹೊಡಿಯೋದಲ್ಲ ಹಿಂಗೆ ಮಾಡ್ತಾ ಇದ್ರೆ ಕೈ ಕಾಲು ಮುರಿತಿನಿ. ಸೋಮಾರಿ ನನ್ನ ಮಗನೆ ಕೋತಿ ತಾನು ಕೆಡೋದಲ್ದೇ ಇಡೀ ವನಾನೆ ಕೆಡುಸ್ತಂತೆ. ಅಂಗೇ ನನ್ನ ಮಗ ನೀನು?

ಗೌಡ : ಲೋಯ್..... ಯಾಕ್ಲ ಮುರಿತೀಯ... ನೀನೇನು ಪಾಳೇಗಾರ್ನ, ಅವನ ಮನೆ ಮುಂದೆ ಅವನು ಏನಾದ್ರು ಮಾಡಿಕೊಳ್ತಾನೆ ಅದು ಕೇಳಾಕೆ ನೀನು ಯಾರ್ಲ?

ರಂಗಣ್ಣ : ಏನು ಗೌಡ್ರೆ....ಊರಿಗೆ ಬುದ್ದಿ ಹೇಳೊ ನೀವೇ ಇಂಗಂದ್ರೆ ಊರ ಗತಿ ಏನು. ಮನೆ ಚೆನ್ನಾಗಿದ್ರೆ ಊರು ಚೆನ್ನಾಗಿರುತ್ತೆ, ಊರು ಚೆನ್ನಾಗಿದ್ರೆ ದೇಶ ಚೆನ್ನಾಗಿರುತ್ತೆ. ಇದನ್ನ ಯೋಚ್ನೆ ಮಾಡದೆ ಅವನಂಗೆ ನೀವು ಮಾತಾಡ್ತ ಇದ್ರೀರಲ್ಲಿ, ಇಂಗಾದ್ರೆ ಊರಗತಿ ಏನು ನೀವೆ ಹೇಳಿ.

ಒಬ್ಬ : ಲೋಯ್, ಗೌಡ್ರು ಬಗ್ಗೇನೆ ತಿರುಗಿ ಮಾತಾಡ್ತಿಯ ಅವರು ಏನು ಹೇಳ್ತಾರೋ, ಅದೇ ನಮ್ಮೂರಲೀ ನಡಿಬೇಕು. ಯಾವನೂ ದೂಸರಾ ಮಾತಾಡಕೂಡದು.

ಇನ್ನೊಬ್ಬ : ಗೌಡ್ರು ಹೇಳಿದ ಮ್ಯಾಲೆ ಮುಗಿದು ಹೋಯ್ತು. ಯಾವನು ಹೆಚ್ಚಿಗೆ ಮಾತಾಡಂಗಿಲ್ಲ. ಯಾವನಾದ್ರು ಮಾತಾಡಿದ್ರೆ ಕೈ ಕಾಲು ಒಂದು ಉಳಿಯಾಕಿಲ್ಲ.

ಕೆಂಚಣ್ಣ : ಏನ್ಲ ಮಾಡ್ತಿಯ.... ನಾವೇಳಿದ್ರಲ್ಲಿ ಏನ್ಲ ತಪ್ಪೈತೆ. ಊರ್ ಚನ್ನಗಿರ್ಲಿ ಎಂದು ಹೇಳೂದ್ ತಪ್ಪಾ, ಅವನ್ ಮನೆ ಮುಂದೆ ಇರೋ ಕೊಳೆ ತಕ್ಕಂಡರೆ ಊರ್ ಕೋಳೆನೆ ಹೋಗುತ್ತೆ. ಅಂತದ್ರಲ್ಲಿ ಅವನ್ ಇಂಗ್ಯೆ ಮಾಡ್ತನಲ್ಲ ಅವನ್ ಮಾಡಿದ್ನೆ ಸರಿಯಾಂತಿರಲ್ಲ ಇದು ನ್ಯಾಯನ.

ಒಬ್ಬ : ಲೇ ಈ ನನ್ನ ಮಗನಿಂದ ಊರ್ ಹಾಳಗಿರಾದ್ ಇಂಥ ನನ್ನ ಮಕ್ಕಳನ್ನ ಇರೋಕ್ ಬಿಟ್ಟರೆ ಇಡೀ ಊರ್ನೆ ಕೆಡಿಸುತ್ತಾರೆ. ಮೊದಲು

ಇಡಿದು ಇವನ್ನ ಕಂಬಕ್ಕೆ ಕಟ್ರಲ್ಲ. (ಎಲ್ಲಾರು ಇಡಿದು ಅವನನ್ನು ಕಂಬಕ್ಕೆ ಕಟ್ಟಲಿಕ್ಕೆ ಹೋಗುವರು. ಅಷ್ಟರಲ್ಲಿ ಸಮಾಜ ಸೇವಕ ಬರುವನು.)

ಸಮಾಜ ಸೇವಕ : ನಿಲ್ಲಿ ಏನ್ ಮಾಡ್ತಯಿದ್ದಿರಾ ಯಾವನ್ ಒಬ್ಬನ್ನ ಉಳಿಸಿ ಕಳುಕ್ಕೊಂಗಿ ಇಡಿ ಊರ್ನ ಹಾಳ್ ಮಾಡ್ತಾಯಿದ್ದಿರಾ. ಮನೆ ಮುಂದೆ ಕೊಚ್ಚೆ ಇದ್ದರೆ ಅದು ಚರಂಡಿ ಮನೆ ಮುಂದೆ ಅರಿದು ಹೋಗ ಬೇಕು. ಅದನ್ನ ಎಲ್ಲಾ ಮನೆರೇ ಊರಿಂದ ಆಚೆಗೆ ಅರಿಸಬೇಕು. ಆದರೆ ಈ ನಿಂಗಣ್ಣಾ ಹೇಳಂಗೆ, ಇದು ನನ್ನ ಮನೆ ನಾನು ಹೆಂಗಾರ ಅರಿಸಿಕೊಳ್ತಿನಿ. ನಿನ್ ಯಾವನ್ ಕೇಳಕೆ ಎಂದು ಹೇಳ್ತನೆ. ಇದು ನ್ಯಾಯನ ಮನೆ ಮುಂದೆ ಕೊಚ್ಚೆ ಇದ್ರೆ ಸೊಳ್ಳೆ ಹುಳುತುಕೊಳ್ಳು ತ್ತವೆ. ಮಲೇರಿಯಾ ಬರುತ್ತದೆ. ಮಲೇರಿಯ ಬಂದ್ರೆ ಕೆಂಚಣ್ಣನ ಮನೆಗೆ ಒಬ್ಬನ ಮನೆಗೆ ಅಲ್ರೀ ಇಡೀ ಊರಿಗೆ ಬರುತ್ತದೆ. ಆಗ ಇಡೀ ಊರಿನ ಜನನೆ ಕಾಯಿಲೆಯಲ್ಲಿ ಮಲಗುತ್ತಾರೆ. ಅದನ್ನ ನೀವ್ ಅರ್ಥ ಮಾಡಿಕೊಳ್ಳಬೇಕು. ಊರಿನ ಚರಂಡಿ ನೀರು ಒಂದು ಕಿ.ಮೀ. ದೂರದಲ್ಲಿ ಇದ್ರು ಕೂಡ ಈ ಕಾಯಿಲೆ ಬರುತ್ತೆ. ಇದನ್ನು ನೀವು ಅರ್ಷಮಾಡಿಕೊಳ್ಳಬೇಕು.

ರಂಗಣ್ಣ : ಸ್ವಾಮಿ, ನೀವ್ ಇಷ್ಟು ಬುದ್ದಿ ಹೇಳ್ತಿರಿ ನಮ್ಮೂರಲ್ಲಿ ಇದನ್ನು ಕೇಳೋದ್ ಯಾರು ಅಯ್ಕರೆ, ಅವನಿಗೆ ಎಂದು ಜನರ ಸಪೋರ್ಟ್ ಇನ್ನೊಬ್ಬರಿಗೆ ಇನ್ನೊಂದು ಜನ ಸಪೋರ್ಟ್ ಇಂಗಾಗಿ ಊರಲ್ಲಿ ಯಾವುದು ಒಳ್ಳೆದಾಗುತ್ತೆ. ಅದಕ್ಕೆ ನಮ್ಮೂರು ಇಂಗಾಗಿರೋದು.

ಸೇವಕ : ಒಂದು ಊರ ಆರೋಗ್ಯವಾಗಿ ಇರಬೇಕಾದರೆ ಒಬ್ಬನಿಂದ ಸಾಧ್ಯ ವಿಲ್ಲ. ಎಲ್ಲಾ ಒಂದಾಗಿ ಊರಿನ ಅಭಿವೃದ್ಧಿಗಾಗಿ ಶ್ರಮಿಸಬೇಕು. ಆರೋಗ್ಯ ಕಾಪಾಡಬೇಕು. ಮಕ್ಕಳಿಗೆ ಒಳ್ಳೆ ಶಿಕ್ಷಣ ಕೊಡಬೇಕ ಒಳ್ಳೆ ಆಹಾರ ತಿನ್ನಬೇಕು. ಕಾಯಿಲೆ ಬಂದಾಗ ನರಳುವುದಕ್ಕಿಂ ಕಾಯಿಲೆ ಬರದಂಗೆ ನೋಡಿಕೊಳ್ಳಬೇಕು. ಇದನ್ನ ಊರಿ ಹಿರಿಯರು ಮೊದಲು ಯೋಚನೆ ಮಾಡಬೇಕು. ಊರಿನ ಜನ ಚೆನ್ನಾಗಿದ್ದರೆ, ಇಡೀ ಊರೆ ಚೆನ್ನಾಗಿರುತ್ತೆ. ಇದನ್ನು ನೀವೆಲ್ಲ ಅರ್ಥ ಮಾಡಿಕೊಳ್ಳಿ.

ನಾನು ಹೇಳ್ತಿನಿ ಅಂತ ಬೇಜಾರು ಮಾಡಿಕೊಳ್ಳಬೇಡಿ ಇದು ಊರಿನ ಒಳ್ಳೆಯದಕ್ಕೆ ಹೇಳ್ತಿದ್ದಿನಿ.

ಗೌಡ : ತಮ್ಮ ನೀನು ಚಿಕ್ಕವನು. ಆದ್ರೂ ಕೂಡ ನನ್ನ ಕಣ್ಣು ತೆರಿಸಿದೆ. ಒಂದು ಊರು ಚನ್ನಾಗೀರಬೇಕಾದರೆ ಒಬ್ಬ ಚನ್ನಾಗಿದ್ದಾರೆ ಸದ್ದಾ ಎಲ್ಲಾರು ಚನ್ನಾಗಿರಬೇಕು. ಅಗ್ಲೆ ಊರು ಚನ್ನಾಗಿರೋದು ಅದು ನನಗೆ ಈಗ ಅರ್ಥವಾಯಿತು. ನಮ್ಮೂರಿನ ಎಲ್ಲಾ ಬಂಧುಗಳೇ ಕೇಳಿ, ಎಲ್ಲಾರು ಕೂಡ ಮನೆ ಮುಂದೆ ಸ್ವಚ್ಛವಾಗಿ ಇಟ್ಕುಕೊಳ್ಳ ಬೇಕು. ಊರಿನ ಕೊಚ್ಚೆ ನೀರನ್ನ ಊರಿನ ಆಚೆಗೆ ಬಿಡಬೇಕು. ಊರಿನ ಆರೋಗ್ಯವನು ಪಡೆಯೋಣ ಮಲೇರಿಯವನ್ನು ಹೊಡೆದು ಓಡಿಸಬೇಕು.

ಸಮಾಜ ಸೇವಕ : ಅಷ್ಟೇ ಅಲ್ಲ, ಹೇಳ್ತಿನಿ ಕೇಳಿ..... ಈ ಮಲೇರಿಯ ಕೊಳಚೆ ನೀರಲ್ಲಿ ಮಾತ್ರ ಅಲ್ಲ. ಶುದ್ಧ ನೀರಿನಲ್ಲೂ ಬರುತ್ತೆ. ಅನಾಫಿಲಿಸ್ ಅನ್ನೋ ಹೆಣ್ಣು ಸೊಳ್ಳೆಗೆ ನೀರು ತುಂಬ ಇಷ್ಟ. ನೀರಿನ ಮೇಲೆ ಕುಂತು ಮರಿ ಮಾಡುತ್ತೆ.

ಒಬ್ಬ : ಅಲ್ಲಾ ಸ್ವಾಮಿ, ಆ ಸೊಳ್ಳೆ ಕಚ್ಚಿದ ತಕ್ಷಣ ಮಲೇರಿಯಾ ಬರುತ್ತಾ?

ಸಮಾಜ ಸೇವಕ : ಇಲ್ಲ. ಕಚ್ಚಿದ ಮೇಲೆ ಶುರು ಆಗುತ್ತೆ. ಜ್ವರ ನಡುಕ, ಮೈಯೆಲ್ಲ ಬೆವರೋದು ಇದೆಲ್ಲಾ ೪ ದಿನ ೪ ದಿನ ಬಿಟ್ಟು ಬರುತ್ತೆ. ತಕ್ಷಣ ನೀವು ಆಸ್ಪತ್ರೆಗೆ ತೋರಿಸದಿದ್ರೆ, ಖಂಡಿತ ಮನುಷ್ಯ ಉಳಿಯೋ ದಿಲ್ಲ. ಅದರಲ್ಲೂ ನಿಮ್ಮೂರಿನಂಗೆ ಬೋರ್‌ವೆಲ್, ನೀರಿನ ಟ್ಯಾಂಕ್ ಇಂಗೆ ಇಟ್ಕುಕೊಂಡ್ರೆ ಇಡೀ ಊರಿಗೆ ಊರೇ ಮಲೇರಿಯಾ ಹರಡುತ್ತೆ.

ಗೌಡ : ಅಪ್ಪಾ ಪುಣ್ಯಾತ್ಮ ನೀನು ಬಂದು ಒಳ್ಳೆ ಕೆಲಸ ಮಾಡಿದೆ. ನಮ್ಮ ಕಣ್ಣು ತೆಗೆಸಿದೆ. ನೋಡ್ರಪ್ಪಾ ಇನ್ನು ಮೇಲೆ ನಾವು ಎಲ್ಲಾ ಒಂದಾಗಿ ಸೇರಿ ಸೋಮವಾರ ಊರ ಕೆಲಸ ಮಾಡಿ, ಈ ಸ್ವಾಮೇರು ಹೇಳಿದಂಗೆ ಯಾರ ಮನೇತಲೇ ನೀರು ನಿಂತಿರ್‍ಲಿ, ಅವನಿಗೆ ಬುದ್ಧಿ ಹೇಳಿ. ಸ್ವಚ್ಛ ವಾಗಿಟ್ಕುಕೊಳ್ಳೋಣ. ನೀರಿನ ಗುಂಡಿ ಮುಚ್ಚಿಸಿ - ಮಲೇರಿಯ ಓಡಿಸಿ.

(ಹಾಡು)

ಬನ್ನಿರೋ ಬನ್ನಿರೋ ಸ್ವಚ್ಛತೆ ಮಾಡುವ ಬನ್ನಿ
ಈ ನಮ್ಮ ಊರಿನಲ್ಲಿ ಕೊಳಚೆಯನ್ನೆಲ್ಲಾ ತೆಗೆದು

ಟ್ಯಾಂಕುಗಳನ್ನು ತೊಳೆದು
ಆರೋಗ್ಯ ಗ್ರಾಮ ಮಾಡ್‌ಬೇಕ್ರಣ್ಣಾ
ಕಾಯಿಲೆಯನ್ನು ಕಳಿಬೇಕ್ರಣ್ಣಾ
ಆಗ ನೀವ್ ನೋಡ್ರಣ್ಣಾ
ಮಲೇರಿಯಾ ಓಡುವ್ರುದಣ್ಣಾ

❑



## ಒಂದು ರೋಗದ ಕಥೆ

- ಡಾ|| ಬಿ.ವಿ. ರಾಜಾರಾಂ

ಸೂತ್ರಧಾರ/Group : (ಮೊದಲು)

ಕಥೆಯೊಂದ ಹೇಳುತೀನಿ, ಕೇಳಿರಣ್ಣಾ
ನಿಂತ ಮಂದಿ ಆಹಾ ಕುಂತ ಮಂದಿ
ಓಡೋ ಮಂದಿ ಆಹಾ ನೋಡೋ ಮಂದಿ
ಎಲ್ಲಾರೂ ಕೇಳಿರಣ್ಣಾ..... || ಪ ||
ಒಂದಾನೊಂದು ಊರಿನಾಗೆ
ಊರಿನಾಗೆ
ಒಂದಾನೊಂದು ಕೇರಿಯಾಗೆ
ಕೇರಿಯಾಗೆ
ಒಬ್ಬ ಹುಡುಗ ಇದ್ದಾನಂತ
ಅವನ ಹೆಸ್ರು ಏನಪ್ಪಾಂದ್ರೆ ಸಿದ್ರಾಮ
ದೊಣ್ಣೆ ಸಿದ್ರಾಮ /ಧಡಿಯ ಸಿದ್ರಾಮ/ಡುಮ್ಮ ಸಿದ್ರಾಮ/ಅಂತ
ಗಿಡ್ಡ ಸಿದ್ರಾಮ/ ಅಂತ
ಆದ್ರೆ ಅವನು ನೋಡಾಕೆ
ಕಡ್ಡಿ ಇದ್ಹಾಂಗ ಇದ್ದಾನಂತ,
ಬರೇ ಕಡ್ಡಿ ಅಲ್ರಪ್ಪಾ.... ಹಂಚೀ ಕಡ್ಡೀ ಇದ್ಹಾಂಗ್ ಇದ್ದನಂತ
ಬರೇ ಹಂಚೀ ಕಡ್ಡಿ ಅಲ್ರಪ್ಪಾ.... ಸೋಗೇ ಕಡ್ಡಿ ಇದ್ಹಾಂಗ್
ಇದ್ದನಂತ
ನೋಡೋದಕ್ ಹೀಗೆಲ್ಲಾ ಇದ್ರೂ ಆಟ, ಊಟ, ಪಾಠದಾಗ
ಮೊದಲೇ ಅಂತ
ಮರ ಹತ್ತೋದ್ರಲ್ಲಿ ಮಂಗ,
ಈಜು ಹೊಡಿಯೋದ್ರಲ್ಲಿ ಮೀನು
ನಂಬಿಕೆ, ನಿಯತ್ತಿನಲ್ಲಿ ನಾಯಿ

ಪೈರು ಪಚ್ಚೆ ಕಾಯೋದ್ರಾಗೆ ಗೂಬೆ
ಅಂಗಿದ್ದೋನು, ಆಗ ಹಾಗಿದ್ದೋನು, ಈಗ
ಹಿಂಗ್ಯಾಕಾದನಂತ?.....

ಅಂಜಿಕೆ ಬಂದ್ಯೆತಪ್ಪಾ ಅಂಜಿಕೆ ಬಂದ್ಯೆತೆ
ನಂಬಿಕೆ ಹೋಗಯ್ತಪ್ಪಾ, ನಂಬಿಕೆ ಹೋಗ್ಯೆತೆ.......
ರೋಗ ಬಂದ್ಯೆತೆ, ಖಾಯಿಲೆ ಬಂದ್ಯೆತೆ
ಮೂರ್ಛೆ ರೋಗ ಬಂದ್ಯೆತ, Fits ಖಾಯಿಲೆ ಬಂದ್ಯೆತೆ
ಹೆದರಿ ಬಿಟ್ಟಾನಪ್ಪಾ, ಹೆದರಿ ಬಿಟ್ಟಾನೆ
ಬೆದರಿ ಬಿಟ್ಟಾನಪ್ಪಾ ಬೆದರಿ ಬಿಟ್ಟಾನೆ ॥ ಪ ॥

ಒಂದು ಖಾಯಿಲೆ ಕಥೆ

ಖಾಯಿಲೆ ೧ : ನಾನು ಮಲೇರಿಯಾ, ಒಂದು ಕಾಲದಲ್ಲಿ ಪ್ರಪಂಚದಲ್ಲಿ ನನ್ನದೇ ಸಾಮ್ರಾಜ್ಯ ಇತ್ತು. ಒಂದು ಸಾರಿ ನಾನು ಕಾಣಿಸಿಕೊಂಡ್ರೆ, ಸಾಕು, ಸಾವಿರ, ಸಾವಿರ ಜನರು ಸಾಯುತ್ತಿದ್ದರು. ನನ್ನ ಜಾಲದಿಂದ ತಪ್ಪಿಸಿಕೊಳ್ಳಲು ಮಾನವರಿಗೆ ಸಾಧ್ಯವೇ ಆಗುತ್ತಿರಲಿಲ್ಲ..... ನಾನೇ ಶಕ್ತಿವಂತ.....ಹ... ಹ...

ಖಾಯಿಲೆ ೨ : ನಾನು ಕಾಲರ, ನನ್ನಷ್ಟು ಶಕ್ತಿಶಾಲಿ ಯಾರೂ ಇಲ್ಲ. ನನ್ನ ಅಬ್ಬರ, ಆಟಾಟೋಪಗಳಿಗೆ ಜನಜಂಗುಳಿ ನಡುಗಿ ಹೋಗುತ್ತಿತ್ತು. ಸುಸ್ತು, ನಡುಕ, ವಾಂತಿ, ಭೇದಿಗಳಿಂದಾಗಿ ಮಾನವ ಪ್ರಾಣ ಥರಗುಟ್ಟುತ್ತಿತ್ತು. ಯಾವುದೇ ಔಷಧೋಪಚಾರಗಳಿಂದಲೂ ಚೇತರಿಸಿಕೊಳ್ಳಲಾಗದೆ ಸಾವು ನಿಶ್ಚಿತವಾಗಿತ್ತು. ನಾನು ಸಾಂಕ್ರಾಮಿಕ.... ಸಾರ್ವಕಾಲಿಕ.... ಸರ್ವನಾಶಕ..... ಹ... ಹ...

ಖಾಯಿಲೆ ೩ : ನಾನು ಕ್ಯಾನ್ಸರ್, ಮಾನವರ ನರನಾಡಿಗಳನ್ನು ಹಿಂಡಿ, ಹಿಂಡಿ ನೋಯಿಸಿ, ಸಾಯಿಸಿ ಆನಂದ ಪಡುವವನು ನಾನು. ಮಾನವನ ಅತಿಯಾದ ಅಭ್ಯಾಸಗಳಿಗೆ ಅವನನ್ನೇ ಬಲಿ ತೆಗೆದುಕೊಂಡು ನನ್ನ ಹೊಟ್ಟೆ ಭರ್ತಿ ಮಾಡಿಕೊಳ್ಳುವವನು ನಾನು. ಒಂದು ಎರಡಾಗಿ, ಎರಡು ನಾಲ್ಕಾಗಿ, ಹತ್ತು ನೂರಾಗಿ ಬೆಳೆದು ರಕ್ತಬೀಜಾಸುರನಂತೆ ಹರಡಿ ಜೀವ ಹಿಂಡುವವನು ನಾನು.... ನನ್ನ ನಾಶ ಸಾಧ್ಯವೇ ಇಲ್ಲ....ಹ... ಹ...

ಖಾಯಿಲೆ ೪ : ನಾನು ಕ್ಷಯ....ರೋಗಗಳ ರಾಜ. ಜೀವನದಲ್ಲಿ ಇರುವ ಸತ್ವ ವನ್ನು ಹೀರಿಕೊಂಡು, ಬೆಳೆದು ಹೆಮ್ಮರವಾಗುತ್ತೇನೆ. ನಾನು ಹಬ್ಬಿ ಬೆಳೆದಂತೆ ಈ ಮಾನವ ಕ್ಷೀಣಿಸಿ, ಕ್ಷೀಣಿಸಿ, ಎಲಬುಗಳ ಗೂಡಾಗಿ, ಸೊರಗಿ, ಸೊರಗಿ ನರಳಿ ನೋಯುತ್ತಿರುತ್ತಾನೆ, ಕೆಮ್ಮುತ್ತಾನೆ...... ರಕ್ತ ಕಾರುತ್ತಾನೆ.....ಹ.... ಹ....

ಖಾಯಿಲೆ ೫ : ನಾನು ಮೂರ್ಛೆ ಖಾಯಿಲೆ (Fits). ನಾನು ಹಿಂದಿನಿಂದಲೂ ಇದ್ದೀನಿ. ನನ್ನನ್ನು ನಿಯಂತ್ರಿಸೋದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ನನ್ನಿಂದ ಜನಕ್ಕೆ ಅಷ್ಟಿಷ್ಟಲ್ಲ ತೊಂದರೆ. ನನ್ನ ಭಯದಲ್ಲೇ ಅವನು ಇರಬೇಕು. ಯಾವಾಗ, ಎಲ್ಲಿ, ಏನು ತೊಂದರೆ ಮಾಡ್ತೀನಿ ಅಂತ ಯಾರಿಗೂ ತಿಳಿದಿರಲಿಲ್ಲ. ಒಂದೇ ಒಂದು ಕ್ಷಣದಲ್ಲಿ ಮಾನವನ ಧೈರ್ಯ, ಉತ್ಸಾಹ, ಹಿರಿಮೆ ಎಲ್ಲವನ್ನೂ ತಿಂದು ತೇಗಿಬಿಡ್ತೀನಿ. ನನ್ನ ಮುಂದೆ ನಿಲ್ಲೋರು ಯಾರೂ ಇಲ್ಲ.... ಹ... ಹ....

### ದೃಶ್ಯ - ೨

(ದನಕಾಯುವ ಹುಡುಗರು ಕಬಡ್ಡಿ ಆಡುತ್ತಿರುತ್ತಾರೆ. ಆಡುತ್ತಿರುವಂತೆಯೇ ಸಿದ್ರಾಮನಿಗೆ Epilleptic attack ಆಗುತ್ತದೆ. ಅದನ್ನು ಕಂಡು ಹುಡುಗರೆಲ್ಲಾ ಗಾಬರಿಗೊಳ್ಳುತ್ತಾರೆ. ಜನರೆಲ್ಲಾ ಮುತ್ತಿಕೊಳ್ಳುವರು.)

೧ : ಅಗೋ ಅಲ್ಲಿ ಸಿದ್ರಾಮ ಬಿದ್ದ....

೨ : ಯಾಕೆ?......ಯಾಕೆ ಬಿದ್ದ.....?

೩ : ಪಾಪ ನಡುಗುತಾ ಇದ್ದಾನೆ.....

೪ : ಗಟ್ಟಿಯಾಗಿ ಹಿಡಕೊಳ್ಳಿ....

೧ : ಅವನಿಗೆ ಛಳಿರೋಗ ಬಂದಿರಬೇಕು......

೨ : ಹೌದೌದು ಛಳಿ ರೋಗಾನೇ ಇದು. ನೋಡು ಹೇಗೆ ನಡುಗುತ್ತಾ ಇದಾನೆ.....?

೧ : ಏ.... ಕಬ್ಬಿಣ ಕೊಡಿ... ಬೀಗದ ಕೈ ಕೊಡಿ...

೪ : ನಿಂಬೇ ಹಣ್ಣು ಮೂಸ್ನೋಡ್ರೋ...

೩ : ಏ.... ಚಪ್ಪಳಿ ಮೂಸ್ಕೋಡ್ಲೊ....

೨ : ಏ.... ಎಲ್ಲಿಂದಲಾದರೂ ಕಂಬ್ಳಿ ತಂದು ಹೊದ್ಸೊ... ಚಳಿ ಅನ್ಸುತ್ತೆ....

೧ : ಬಾಯಿಂದ ಬಿಳಿ ನೊರೆ ಬರ್‍ತಿದೆ... ಅದನ್ನ ವರ್‍ಸೊ....

೪ : ಒಂದು ಲೋಟ ಬಿಸಿ ಕಾಫಿ ತಂದು ಕೊಡ್ರೊ...?

೩ : ಅವನ ಮನೆ ಎಲ್ಲಿ ಗೊತ್ತಾ.....?

೪ : ಏ...., ನಮ್ಮ ಮನೆ ಹತ್ರಾನೇ ಇವನ ಮನೆ. ನಡಿಯೋ ಕರ ಕೊಂಡು ಹೋಗಣಾ.....

೧ : ಇಲ್ಲಪ್ಪಾ, ನಾನು ಕಡೇ ಬಸ್ಸಿಗೆ ಹೋಗಲೇಬೇಕು ಹೊತ್ತಾಗುತ್ತೆ.

೨ : ನಮ್ಮ ಮನೆ ಪಕ್ಕದಲ್ಲೇ ಇವನ ಮನೆ..... ಅದೇ ಮೂಲೆ ಚಿನ್ನಪ್ಪಣ್ಣನ ಮನೆ ಪಕ್ಕದ ಮನೆ.....

೩ : ಆಯ್ತು, ಬನ್ರಪ್ಪಾ, ಸ್ವಲ್ಪ ಕೂರಿಸ್ರಿ...... (ಕೂರಿಸುವರು)

೧ : ಏ ಸಿದ್ರಾಮ, ಏನಾಯ್ತೋ... ಚಳಿ ಬಂತೇನೋ?

ಸಿದ್ರಾಮ : ಗೊತ್ತಿಲ್ಲ.....

೧ : ತಲೆ ಸುತ್ತುತ್ತೇನೋ ?....

ಸಿದ್ರಾಮ : ಗೊತ್ತಿಲ್ಲ....

೪ : ಇವನು ಹೀಗೆ ಯಾವಾಗಲೂ ಹೀಗೆ ಬೀಳ್ತಾನೇ ಇರ್‍ತಾನೆ.

೧ : ನಾನು ಎಷ್ಟು ಸರಿ ಅಂತ ಇವನನ್ನು ಕರಕೊಂಡು ಮನೆಗೆ ಬಂದಿದ್ದೀನಿ ಗೊತ್ತಾ?....

೨ : ಆದರೆ ಏನೂ ಪ್ರಯೋಜನ ಇಲ್ಲ. ಅವರ ಮನೆಯವರು ಇವನ ಬಗ್ಗೆ ಆಸಕ್ತಿನೇ ತೋರಿಸಲ್ಲ. ರೋಗದ ಮುಂಡೇದು, ಎಲ್ಲಾದ್ರೂ ಹಾಳಾಗಿ ಹೋಗ್ಲಿ ಅಂತ ಬಿಟ್ಟುಬಿಟ್ಟಿದ್ದಾರೆ.

ನಾಗರಾಜ (೧) : ಏ ಚೆನ್ನಾಗೆ ಇದ್ದಾನಲ್ಲೋ..... ಮೊನ್ನೆ ತೋಟದ ಹತ್ರ ಸಿಕ್ಕಿದ್ದ, ಮರಹತ್ತಿ ತೆಂಗಿನಕಾಯಿ ಕೀಳ್ತಾ ಇದ್ದ. ಸಿದ್ರಾಮು ನಾನೂ ಇಬ್ರೂನು ಜೊತೇಲಿ ಎಳನೀರು ಕುಡುದ್ವೀ. ಆಮೇಲೆ ನಾನು ಕೆರೆ ಏರಿ ಕಡೆ ಹೋದೆ. ಇವನು ಕಾಯಿ ಹಿಡಕೊಂಡು ಮನೆ ಕಡೆಗೆ ಬಂದ.

ಮಂಜಣ್ಣ (೪) : ಇವತ್ತೇನಪ್ಪಾ ನಾನು ಇವನ್ನ ಈ ರೀತಿ ನೋಡ್ತಾ ಇರೋದು. ಮೊನ್ನೆ ತಿಮ್ಮನ ಮದುವೆ ಮನೆಗೂ ಬಂದಿದ್ದ. ಅದೇ ನಾವೆಲ್ಲಾ ಟ್ರ್ಯಾಕ್ಟರ್‌ನಾಗೆ ಹೋಗಿದ್ವಲ್ಲ ಆವಾಗ. ನಾವು ೭-೮ ಜನ ಹೋಗಿದ್ವಿ. ಇವನು ಆರಾಮಾಗೇ ಇದ್ದ. ಎಷ್ಟು ಚೆನ್ನಾಗಿ ಹಾಡ್ದ, ಕುಣದ ಗೊತ್ತಾ. ಈಗ ಒಳ್ಳೆ ಪಂಚಾಯ್ತಿ ಆಯ್ತಲ್ಲ.

ರುದ್ರಪ್ಪ (೩) : ನಾವೆಲ್ಲಾ ಒಂದೇ ವಯಸ್ನೋರಲ್ಲ, ಒಟ್ಟಿಗೆ ಆಡ್ನೋರು. ಯಾವತ್ತೂ ಹಿಂಗಾಡಿದ್ನ ಕಂಡಿರಲಿಲ್ರಪ್ಪ. ಈಜಾಡೋದು, ಮರ ಹತ್ತೋದು, ಗುಡ್ಡಕ್ಕೋಗೋದು, ದನ ಕಾಯೋದು, ಕೆಲಸ ಮಾಡೋದು ಎಲ್ಲಾದ್ರಲ್ಲೂ, ಸೈ. ಆಟ ಗೀಟಾ ಆಡ್ಕಂಡು ಚೆನ್ನಾಗೇ ಇದ್ನಲ್ಲ.

(೨) : ಏ ನಡೀಲೆ ಅವರ ಅಪ್ಪ, ಅಮ್ಮಂಗೆ ಸರೀಗೆ ನೋಡ್ಕೋಂತ ಹೇಳನ.

### ದೃಶ್ಯ-೩ – ಮನೆ

(ಸ್ನೇಹಿತರೊಂದಿಗೆ ಸಿದ್ರಾಮ ಮನೆಗೆ ಬರುವನು. ಅವನ ಅಪ್ಪ ಸಿದ್ರಾಮನಿಗೆ ಕಾಯುತ್ತಿರುವನು)

ಅಪ್ಪ : ಎಲ್ಲೆ ಸಿದ್ರಾಮು, ಬೆಳಗಾಗೆದ್ದು ಎಲ್ಲಿ ಹೋಗಿದಾನೆ. ದನಕರ ಯಾರು ನೋಡಾರು. ಇಲ್ಲೇ ತೋಟದ ಕಡೆ ಹೋಗಿ ಬರ್ತೇನೆ ಅಂತ ಹೋದ, ಅದ್ಯಾವಾಗ ಬರತಾನೋ ಏನೋ....?

ಗೆಳೆಯರು (೧) : ಏ ನೀವೇನು ಮನುಸ್ರೋ ಏನು, ಸಿದ್ರಾಮ ಬಿದ್ದು ಒದ್ದಾಡತಾ ಇದಾನೆ ನೋಡತಾ ಸುಮ್ಮನಿದ್ದೀರಲ್ಲ.

(೩) : ಏನಾಗಯ್ತೆ? ಅಂತ ಇಚಾರಿಸಿ, ಏನಾರ ಮಾಡದಲ್ಲ.

ರುದ್ರಪ್ಪ (೨) : ಏ ದೆವ್ವ ಮೆಟ್ಟಿಕಂಡದೇ ಕಣ್ಲಾ, ನಾನು ಆಪತ್ತೇ ಏಳಿದ್ದೆ ಆ ಏರಿಮ್ಯಾಲೆ ಹೋಗಬ್ಯಾಡ, ದೆವ್ವ, ಪಿಶಾಚಿ ಇರ್‍ತಾವೆ, ಹಿಡಕಂಬಿಡ್ತವೆ ಅಂತ. ಏನೋ ಭಲೇ ಧೀರ ಅಂತ, ಅಲ್ಲಿಗೇ ಹೋಗ್‌ಬಂದ. ಆಗ್ಲೆ ಅಂದಕಂಡೆ, ಏನಾರ ಹೆಚ್ಚು ಕಡಿಮೆ ಆಯ್ತದೆ ಅಂತ. ಈಗ ನೋಡು ಇಂಗೆ ಆಡ್ತಾ ಇದಾನೆ.

ನಾಗರಾಜ (೪) : ಏ ಮಂತ್ರವಾದಿನ ಕರಕಂಡು ಬಾರಲೇ.....ಎಲ್ಲಾ ಭೂತ, ದೆವ್ವ ಒಂದೇ ಏಟಿಗೆ ಬಿಡುಸ್ತಾನೆ, ಮೊನ್ನೆ ಏನಾಯ್ತು ಅಂತೀಯಾ....

ಮಂಜಣ್ಣ (೩) : ಅದೇ ತಾನೆ ನಿನ್ನ ಹಳೇ ಕಥೆ. ಆ ದ್ಯಾಮಪ್ಪಂಗೆ ದೆವ್ವ ಮೆಟ್ಟಿ ಕೊಂಡಿತ್ತು. ನಿಮ್ಮ ಆ ಮಂತ್ರವಾದಿನ ಕರ್‍ಕಂಬಂದೇ. ಅವನು ದನ ಬಡಪಂಗೆ ಬಡಿದು, ಆ ದೆಯ್ಯದ ಕೈಲಿ ಮಾತಾಡ್ದ. ನಾನು ಓಯ್ತಿನೀ, ಓಯ್ತಿನೀ, ಇನ್ ಬರಾಕಿಲ್ಲಾ ಅಂತು ಅಲ್ವೇನ್ಲಾ

(೨) : ಹೂಂ....ನಿನಗೆ ಹೆಂಗೆ ಗೊತ್ತು.

(೩) : ಮೂರೊತ್ತು ಅದೇ ಕಥೆ ಹೇಳ್ತಾ ಇರ್ತೀಯಾ. ನಿನ್ನ ಕಥೆ ಎಲ್ರಿಗೂ ಗೊತ್ತು.

(೨) : ಸರಿ ಸರಿ....ಬಾ ಆ ಮಂತ್ರವಾದಿಗೆ ಹೇಳಿ ಬರಾನ ಒಂದೇ ಕಿತ ವಾಸಿ ಮಾಡಿ ಬಿಡ್ತಾನೆ.

ಗೆಳೆಯರು (೨) : ನಿಮ್ಮ ಸಿದ್ರಾಮ ಅಲ್ಲಿ ಊರ ಮುಂದೆ ಅಂಗೇ ಬಿದ್ದ. ಛಳಿ ಬಂದ್ಹಂಗೆ ಒದ್ದಾಡ್ತಿದ್ದ. ವಸಿ, ಛಳಿಜ್ವರ ಬಂದಿರಬೇಕು. ಇವ್ನ ಡಾಕ್ಟ್ರ ಹತ್ರ ಕರಕೊಂಡು ಹೋಗಣ.

ಅಪ್ಪ : ಇವ್ನು ಮುಂಚೆನೂ ಹಿಂಗೇ ಬೀಳ್ತಿದ್ದ. ಅದಕ್ಕೇ ನೋಡು ಇವ್ನಿಗೆ ಬರೆ ಹಾಕ್ಸಿದ್ದೀನಿ, ತಾಯ್ತ ಕಟ್ಸಿವ್ನಿ.... ಹಸಿರು ಔಷಧಿ ಬೇರೆ ಕೊಡ್ಸಿವ್ನಿ.

೩ : ಅದಕ್ಕೇ ಹೇಳದು, ಡಾಕ್ಟ್ರಹತ್ರ ಹೋಗಣಾಂತ.

ಮನೆಯವರು : ನಾನು ಬೆಳಿಗ್ಗೇನೇ ಎಲ್ಲಿ ಹೋದ ಅಂತ ನೋಡ್ತಾ ಇದ್ದೀನಿ. ತೋಟದ ಕಡೆ ಹೋಗ್‌ಬರ್ತೀನೀಂತ ಹೋದ. ಎಲ್ಲಿ ಬಿದ್ದ? ಅದ್ಯಾಕೆ ಚೆನ್ನಾಗೇ ಇದ್ದನಲ್ಲಾ?

(ಮಂತ್ರವಾದಿ ಪ್ರವೇಶ)

ಗೆಳೆಯರು (೨) : ಹಾ ಬನ್ನಿ ಬನ್ನಿ ಇಲ್ಲೆ ಇದಾನೆ.

ಮಂತ್ರವಾದಿ : ಹ್ರಾಂ....ಹ್ರೀಂ.....ಇದು ಅಂತಿಂಥ ದೆವ್ವ ಅಲ್ಲ. ಹಿಡ್ಕಳಿ ಅವನ್ನ, ಫೂಂ...ಫೂಂ....ಫ್ರಾಂ.....ಫ್ರೀಂ....ನೋಡಿದ್ರಾ ಒಳ್ಳೆ ದೆವ್ವ ಬಡಕಂಡಾಂಗೆ ಕುಂತವ್ನೆ ರಾಂ....ರೀಂ.....ರೋಂ...... ಪಕ್ಕದ ಹಳ್ಳೀಲಿ ಇಂಥಾ ದೆವ್ವ, ಇಬ್ರಿಗೆ ಹಿಡಕಂಡಿತ್ತು. ಭೂತ ಬಿಡಿಸಿಬಿಟ್ಟೆ. ಈಗ ಚೆನ್ನಾಗವ್ರೆ. ಈಗ ಮಾತಾಡಿಸ್ತೀನಿ....ಏ ಭೂತ, ಪಿಶಾಚಿ, ತೋಗೋ ಇಲ್ಲಿಗ್ಯಾಕ್ ಬಂದೇ..... ಬಿಡು....ಬಿಟ್ಟು ತೊಲಗು....

(ತಂದಿದ್ದ ಬೇವಿನ ಸೊಪ್ಪಿನಿಂದ ಹೊಡೆಯುವನು)

ಸಿದ್ರಾಮ : ಬಿಡಿ ನನ್ನ ಬಿಟ್ಟುಬಿಡಿ. ನನಗೇನೂ ಆಗಿಲ್ಲ.... ಚೆನ್ನಾಗಿದ್ದೀನಿ, ಈಗ ಆರಾಮಾಗಿದೀನಿ.

ಮಂತ್ರವಾದಿ : ನೋಡಿದ್ರಾ.... ಬಿಡಿ ನನ್ನ ಬಿಟ್ಟು, ಬಿಡಿ ಅಂತಾವ್ನೆ, ಗಟ್ಟಿಯಾಗಿ ಹಿಡ್ಕಳಿ ಸರಿಯಾಗಿ ಮಂತ್ರ ಹಾಕ್ತೀನಿ.

ಸಿದ್ರಾಮ : ಬಿಡಿ ನನ್ನ ಬಿಟ್ಟು, ಬಿಡಿ.

ಮಂತ್ರವಾದಿ : ಆಯ್ತು, ಆಯ್ತು ಇನ್ನೊಂದ್ಸಲಿ ಈ ಮನೆಗೆ ಬರಬೇಡ ತೊಲಗು. ಹೂಂ.....ದುಡ್ಡುಕೊಡಿ. ದವಸ ಧಾನ್ಯ, ತೆಂಗಿನಕಾಯಿ ಎಲ್ಲಾ ಕಳುಹಿಸಿಕೊಡಿ. ಏ ತಮ್ಮಾ ನೀನು ಅವನ್ನೆಲ್ಲಾ ಇಸ್ಕಂಬಾರ್ಲ.

ಗೆಳೆಯರು (೧) : ಈ ಮಂತ್ರವಾದಿ ಹೊಡೆದು ಹೊಡೆದು ಬದ್ಕಿರೋರ್ನ ಸಾಯಿಸಿ ಬಿಡ್ತಾನೆ ಕಣ್ಲಾ. ನಾವು ಸಿದ್ರಾಮನ್ನ ಒಳ್ಳೆ ಸಿಟಿ ಡಾಕ್ಟ್ರ ಹತ್ರ ಕರಕೊಂಡು ಹೋಗನಾ. ಅವರೇ ಸರಿ ಹೀಗೆಲ್ಲಾ ಹೊಡ್ದು, ಬಡ್ದು ಮಾಡಲ್ಲಾ....

(೩) : ನಾನಾಗ್ಲೇ ಹೇಳಿದ್ರೆ, ಕೇಳಿದ್ರಾ, ನಮ್ಮಾತು, ನಡಿ ಡಾಕ್ಟ್ರ ಹತ್ರ ಹೋಗಣ.

(೪) : ನಡಿ ನಡಿ ಅಂಗೇ ಮಾಡನಾ.

ಅಪ್ಪ : ಏನೂ ಬ್ಯಾಡ ಬಿಡಪ್ಪ. ನಾಟಿ ಔಷಧಿ ಹಾಕ್ಸಿದ್ರೆ, ಅದೇ ಸರಿ

ಹೋಗ್ತಾನೆ. ನಾವು ಅಂಗೇ ಮಾಡದ. ಮೂರು ದಿನ ಅರದು ಕುಡಿದ್ರೆ ವಾಸಿ ಆಗ್ತದೆ.

(೧) : ನೀವು ಅದೇನು ಮಾಡೀರೊ ಮಾಡಿ ನಾವು ಈಗ ಪೇಟೆ ಡಾಕ್ಟ್ರ ಹತ್ರ ಹೋಗ್ತಾಲ್ರೀವಿ. ಅವರ್ನೂ ಒಂದಪ ಕೇಳಿದ್ರಾತು.... ನಾಟಿ ಔಷ್ಧೀನೇ ಸರಿ ಅಂದ್ರೆ, ಅದ್ನೇ ಹಾಕ್ದ..... ನಡಿಯೋ ಸಿದ್ರಾಮು.....

ದೃಶ್ಯ - ೪

(ಎಲ್ಲರೂ ಡಾಕ್ಟ್ರ ಹತ್ರ ಬರುವರು. ಡಾಕ್ಟ್ರ ಕ್ಲೀನಿಕ್)

ಸಿದ್ರಾಮು / ಗೆಳೆಯರು (೩) : ಡಾಕ್ಟರೇ.....ಈ ನಮ್ಮ ಸಿದ್ರಾಮನ್ನ ನೋಡಿ ಇದ್ದಕ್ಕಿದ್ದಾಗೆ ಬಿದ್ದುಬಿಡ್ತಾನೆ. ಸ್ವಲ್ಪ ಹೊತ್ತು ಒದ್ದಾಡ್ತಾನೆ. ಆಮೇಲೆ ಸರಿ ಆಗ್ತಾನೆ.

(೪) : ಆದ್ರೆ, ತುಂಬಾ ಸುಸ್ತು. ಮಂಕಾಗಿರ್ತಾನೆ. ಭೂತದ ಕಾಟ ಅಂತ ಮಂತ್ರಾನೂ ಆಕ್ಸಿದ್ವಿ.

(೨) : ಬಿದ್ದಾಗ, ಅವನ ಬಾಯಲ್ಲಿ ಬಿಳಿ ನೊರೆ ಬಂತು ಡಾಕ್ಟ್ರೆ. ಚಳಿಯಿಂದ ವಿಲ, ವಿಲ, ಒದ್ದಾಡತಾ ಇದ್ದ.

ಡಾಕ್ಟರ್ : ಇದು ಅಪಸ್ಮಾರು ಅಂತ ಒಂದು ಖಾಯಿಲೆ. ಮೂರ್ಛೆ ಖಾಯಿಲೆ ಎಂತ. ಭೂತ, ಪಿಶಾಚಿ ಕಾಟ ಅಲ್ಲ. ಮೆದುಳಿನಲ್ಲಿ ಆಕಸ್ಮಾತ್ತಾಗಿ ಮಿತಿ ಮೀರಿದ ವಿದ್ಯುತ್ ಚಲನೆ ಆದಾಗ ಬರುವ ಖಾಯಿಲೆ ಮೂರ್ಛೆ.

ರುದ್ರಪ್ಪ : ಓ ಹಂಗಾ, ಅದ್ಕೇಳಿ ಮತ್ತೆ. ನಾನು ನೋಡಿವ್ನಿ. ಹಿಂಗೆ ಬಿದ್ದ ತಕ್ಷಣ ಕಬ್ಬಿಣ, ಚಪ್ಪಳಿ, ಬೀಗದ ಕೈ ಕೊಡ್ತಾರಲ್ಲ, ಆಮೇ ಅವ್ನು ಎದ್ದು ಕುಂತಕತಾನೆ ಅಲ್ವಾ?

ಡಾಕ್ಟರ್ : ರೋಗಿ ಬಿದ್ದಾಗ ಕಬ್ಬಿಣ, ಬೀಗದ ಕೈ, ಚಪ್ಪಲಿ ಏನೂ ಕೆ. ಬೇಕಾದ್ದಿಲ್ಲ. ೨ - ೩ ನಿಮಿಷ ಇರುತ್ತೆ ಅಷ್ಟೇ, ಆಮೇಲೆ ಸ. ಆಗುತ್ತೆ. ಆದರೆ ಜನ ಅವನ ಸುತ್ತಾ ಸುತ್ತಿಕೊಂಡು, ಬೀಗದ ಕೈ ಕೊಟ್ಟು, ಗಟ್ಟಿಯಾಗಿ ಹಿಡಿದುಕೊಂಡು ಇನ್ನೂ ತೊಂದರೆ ಮಾಡ್ತಾರೆ. ಹಾಗೆ ಮಾಡಬಾರ್ದು. ಗಾಳಿ ಆಡಕ್ಕೆ ಬಿಡಬೇಕು.

ಗಟ್ಟಿಯಾಗಿ ಹಿಡ್ಕೋಬಾರ್ದು. ಇದು ಒಂದು attack ಥರ, ಬಂದು ಹೋಗಿಬಿಡುತ್ತೆ.

ನಾಗರಾಜ : ಅಷ್ಟೇನಾ....ಮತ್ತೆ ಬರಾಕಿಲ್ವಾ? ಒಂದೇಸರಿ ಬರ್ತದಾ? ಎಲ್ಲರಿಗೂ ಬರ್ತದ? ನಂಗೆ ಬಂದೇ ಇಲ್ಲಾ....

ಡಾಕ್ಟರ್ : ಎಲ್ಲರಿಗೂ ಬರಲ್ಲಾ....Heridetary ಅಂದ್ರೆ ವಂಶ ಪಾರಂಪರ್ಯ ವಾಗಿ ಬರಲ್ಲ. ತಂದೆ-ತಾಯಿಗಿದ್ರೆ ಮಕ್ಕಳಿಗೆ ಬರುತ್ತೆ ಅಂತ ಏನೂ ಇಲ್ಲ.

ರುದ್ರಪ್ಪ : ಅಂಗಾದ್ರೆ ಸರಿಬಿಡಿ. ಮದುವೆ, ಹೆಂಡತಿ ಮಕ್ಕಳು ಎಲ್ಲಾ ಆಗ ಬಹುದು ಅನ್ನಿ......

ಮಂಜಣ್ಣ : ಹೂ ಕಣ್ಲಾ.....ಕೆಲಸ ಗಿಲಸ ಮಾಡಬೇಡ.....ಮದುವೆ ಹೆಂಡತಿ ಮಕ್ಕಳು ಅಂತ ಊರು ಮುಂದೆ ದನ ಕಾಯಕೊಂಡು ಕುಂತಿರು ಆಗ್ತದೆ.....

ನಿಮ್ಮಪ್ಪ ಹೇಳ್ದಂಗೆ ನ್ಯಾಯವಾಗಿ ದುಡಿಮೆ ಮಾಡಿಕೊಂಡಿದ್ರೆ. ಮದುವೆ ಮಾಡದು, ಇಲ್ಲಾಂದ್ರೆ, ಹೀಗೇ ಬೀದಿ ಬಸವನ ಹಾಗೆ ತಿರುಗಾಡಿಕೊಂಡಿರಬೇಕು ಅಷ್ಟೇ.....

ಡಾಕ್ಟರ್ : ಈ ರೋಗಕ್ಕೆ ೩-೪ ವರ್ಷ ದಿನಾ ಔಷಧಿ ತೆಗೆದುಕೊಳ್ಳೊದನ್ನ ತಪ್ಪಿಸಬಾರದು. ಒಂದು ದಿನ ತಪ್ಪಿಸಿದರೂ ಮತ್ತೆ Attack ಆಗುವ ಸಾಧ್ಯತೆ ಇರುತ್ತದೆ. ಮಾತ್ರೆ ಮಧ್ಯದಲ್ಲಿ ನಿಲ್ಲಿಸಿದರೆ, ಆನಂತರ ಏನಾದರೂ ಈ attack ಬಂದರೆ ಅಲ್ಲಿಂದು ಇನ್ನೂ 3-4 ವರ್ಷ ಮಾತ್ರೆ ತೆಗೆದುಕೊಳ್ಳಬೇಕು. ಆಗ ಯಾವುದೇ ತೊಂದರೆ ಇಲ್ಲದೆ ಈ ರೋಗ ನಿಯಂತ್ರಣಕ್ಕೆ ಬರುತ್ತೆ....

ನಾಗರಾಜ : ನಮ್ಮ ಸಿದ್ರಾಮನಿಗೂ ಮದುವೆ ಎಲ್ಲಾ ಮಾಡಬಹುದು.

ಡಾಕ್ಟರ್ : ಅದಕ್ಕೇನು ತೊಂದರೆ ಇಲ್ಲ....ಆದರೆ ಪ್ರತಿದಿನ ಔಷಧಿ ಮಾತ್ರೆ ತೆಗೆದುಕೊಳ್ಳಬೇಕು. ಹೆಂಗಸ್ರು ಮನೆ ಕೆಲಸ ಮಾಡಬಹುದು. ಗಂಡಸರು ಹೊಲಗದ್ದೆ ಕೆಲಸ ಮಾಡಬಹುದು. ಸಂತೋಷವಾಗಿ, ನೆಮ್ಮದಿಯಾಗಿ ಇರಬಹುದು ಏನೂ ತೊಂದರೆ ಇಲ್ಲಾ.

ರುದ್ರಪ್ಪ : ಈ ನಮ್ಮ ಸಿದ್ರಾಮಂಗೆ ಒಬ್ಬನಿಗೇ ಈ ರೋಗ ಇರೋದು, ನಾವೆಲ್ಲಾ ಅವನ ಜತೆ ಇರ್ತೀವಲ್ಲ, ಅವ್ನ ಮುಟ್ಟಿದರೆ ನಮಗೂ ಬಂದು ಬಿಡ್ತದಾ ?

ಡಾಕ್ಟರ್ : ಇಲ್ಲ, ಇದು ಅಂಟುರೋಗ ಅಲ್ಲ. ಬೇರೆ ಯಾರಿಗೂ ಹಾಗೆ ಸಾಂಕ್ರಾಮಿಕ ರೋಗದ ಹಾಗೆ ಹರಡುವುದಿಲ್ಲ. ಒಂದ್ಸರಿ ಮೂರ್ಛೆ ಬಂದ್ರೆ, ಅದೇನೂ ರೋಗ ಅಲ್ಲ. ಪದೇ ಪದೇ ಬೀಳ್ತಾ ಇದ್ರೆ, ಬಾಯಲ್ಲಿ ನೊರೆ ತರಹ ಬಂದ್ರೆ, ಡಾಕ್ಟರ್ ಹತ್ರ ಬಂದು, ಪರೀಕ್ಷೆ ಮಾಡ್ಸಿ ಔಷಧಿ ಪಡೀಬೇಕು.

ರೋಗಿ : ಈ ರೋಗಕ್ಕೆ ಏನು ಪಥ್ಯ ಇರಬೇಕು?

ಡಾಕ್ಟರ್ : ಪಥ್ಯ ಏನೂ ಇರಬೇಕಾಗಿಲ್ಲ. ಬೇಕಾದ ತಿಂಡಿ, ತಿನಿಸು ಊಟ ಮಾಡಬಹುದು.

ರೋಗಿ : ಡಾಕ್ಟ್ರೆ, ನಾನು ಈಜುವಾಗ ಹೀಗಾದ್ರೆ ಏನು ಮಾಡಬೇಕು?

ಡಾಕ್ಟರ್ : ಹಾಂ... ಈ ರೀತಿ ಈಜುವಾಗ, ಬೆಂಕಿಯಲ್ಲಿ ಕೆಲಸ ಮಾಡುವಾಗ, ಮಿಷಿನ್‌ಗಳ ಮೇಲೆ ಕೆಲಸ ಮಾಡುವಾಗ ಎಚ್ಚರಿಕೆಯಿಂದ ಇರಬೇಕು. ತಮ್ಮ ಜೊತೆಗಿರುವವರಿಗೆ ತಮ್ಮ ಖಾಯಿಲೆಗಳ ಬಗ್ಗೆ ಹೇಳಿರಬೇಕು. ನೀವು ಎಲ್ಲೇ ಹೋಗಿ, ಎಲ್ಲೇ ಓಡಾಡಿ, ಏನೇ ಕೆಲಸ ಮಾಡಿ ಆದ್ರೆ, ಸರಿಯಾಗಿ ಕಾಲಕಾಲಕ್ಕೆ ನೀವು ಔಷಧ ತೆಗೆದುಕೊಳ್ಳಬೇಕು.

(ಸಿದ್ರಾಮ attack-ಅಭಿನಯಿಸುತ್ತಾನೆ)

ಗೆಳೆಯರು : ಲೋ ಹಿಡ್ಕೊಳೋ, ಗಟ್ಟಿಯಾಗಿ ಹಿಡ್ಕೊ, ಅಲುಗಾಡಕ್ಕೆ ಬಿಡಬೇಡಾ ಚಪ್ಪಳಿ ಕೊಡೋ...ಏ ಚಪ್ಪಳಿ ಬೇಡ....ಬೀಗದ ಕೈ ಕೊಡೋ.....ಏ ಈರುಳ್ಳಿ ಮೂಗಿಗೆ ಹಿಡಿಯೋ.....ನೀರು ಕುಡಿಸ್ರೋ.....ಕಂಬ್ಳಿ ಹೊದಿಸ್ರೋ ಬೇಗ.... ಬೇಗ ಛಳಿ ಬಿಡುತ್ತೆ ಕಣೋ. ಬಿಸಿ ಬಿಸಿ ಕಾಫಿ ಕುಡಿಸೋ.....

ಡಾಕ್ಟರ್ : ನೋಡಿ ನೋಡಿ ನಿಮಗೆ ಆಗ್ಲೇ ಎಲ್ಲಾ ವಿಷಯ ತಿಳಿಸಿ ಹೇಳಿದೀನಿ. ಸುತ್ತ ಮುತ್ತಗೋಬೇಡಿ. ಅವನಿಗೆ ಗಾಳಿ ಬಿಡಿ.....

ಗಟ್ಟಿಯಾಗಿ ಹಿಡಕೋಬೇಡಿ.....ಬೇಡಿ
ಕಬ್ಬಿಣ, ಬೀಗದ ಕೈ, ಈರುಳ್ಳಿ ಏನೂ ಬ್ಯಾಡ, ರಗ್ಗು ಹೊದ್ದಿಸ ಬೇಡಿ.
ಬಾಯಲ್ಲಿ ಚಮಚ ತುರುಕೋದು ಬೇಡ
ಕಾಫಿ, ನೀರು, ಜ್ಯೂಸು ಏನೂ ಕೊಡಬೇಕಾಗಿಲ್ಲ.
೨-೩ ನಿಮಿಷದಲ್ಲಿ ಅವನು ಆರಾಮಾಗ್ತಾನೆ. ಬಿಟ್ಟುಬಿಡಿ. ಆದ್ರೆ ನೀರ ಹತ್ರ ಇದ್ರೆ... ಬೆಂಕಿ ಹತ್ರ ಇದ್ರೆ ಸ್ವಲ್ಪ ದೂರ ತಂದು ಮಲಗಿಸಿ ಬಹಳ ಮುಖ್ಯ ಅಂದರೆ attack ಬಂದಾಗ ಅವರು ಬಿದ್ದು ಪೆಟ್ಟಾಗಬಾರದು ಹಾಗೆ ನೋಡಿಕೊಳ್ಳಬೇಕು.

ಅಪಸ್ಮಾರ : ಹುಂ ನನ್ನನ್ನು ಹಿಡಿಯೋದಕ್ಕೆ ಈ ಬಿಳೀ ಅಂಗಿಯವರು ನೋಡ್ತಾ ಇದಾರೆ. ನಾನು ಇವರ ಕೈಗೆ ಸಿಕ್ತೀನಾ. ನನ್ನ ಶಕ್ತಿ, ಪೌರುಷ ಇವರಿಗಿನ್ನೂ ತಿಳಿದಿಲ್ಲ ಅಂತ ಕಾಣತ್ತೆ.
ಮತ್ತೆ ಅವನ ಮೇಲೆ ಎಗರಿದ್ರೆ, ಎಲ್ಲಾ ಸರಿ ಹೋಗತ್ತೆ. ಮತ್ತೆ ಭೂತ, ಪಿಶಾಚಿ ದೆವ್ವ ಅಂತ ಹೆದರಿ ಕಂಗಾಲಾಗುತ್ತಾರೆ. ಡಾಕ್ಟರೆ ಡಾಕ್ಟರೆ ಅಂತ ಓಡ್ತಾರೆ. ಆದ್ರೆ ಯಾರೂ ಏನೂ ಮಾಡಕಾಗಲ್ಲ.

ಡಾಕ್ಟರ್ : ನಿನ್ನನ್ನು ನಾವು ಗುರುತಿಸಿದ್ದೀವಿ.....ಔಷಧವನ್ನು ಕಂಡು ಹಿಡಿದಿದ್ದೀವಿ. ನಿನ್ನ ಕಥೆ ಈಗ ಮುಗಿಯಿತು. ನೀನು ಇಲ್ಲಿ ಇದೀನಿ ಅಂತ ತೋರಿಸು ನಿನ್ನ ಮುಖ. ಅಲ್ಲಿ ನಿನ್ನ ಕಥೆ ಮುಗಿಸುತ್ತೀನಿ.

ಅಪಸ್ಮಾರ : ಸಣ್ಣ ಗುಳಿಗೆ ಕೊಟ್ಟು ನನ್ನನ್ನು ಮುಗಿಸ್ತೀರಾ....? ಬೇಡ ಬೇಡ...

ಡಾಕ್ಟರ್ : ನೋಡಿ...... ಭಾರತದ ೧೦೦ ಕೋಟಿ ಜನಸಂಖ್ಯೆಯಲ್ಲಿ ಸುಮಾರು ೬೦-೭೦ ಲಕ್ಷ ಜನ ಈ ರೋಗಕ್ಕೆ ತುತ್ತಾಗಿರುತ್ತಾರೆ. ಇವರಲ್ಲಿ ಸುಮಾರು ೫೦ ಲಕ್ಷ ಜನ ಹಳ್ಳಿಯಲ್ಲಿ ವಾಸಾ ಮಾಡ್ತಾರೆ. ದೆವ್ವದ ಕಾಟಾಂತ ಇವತ್ತೂ ನಂಬ್ತಾರೆ. ಆದ್ರೆ, ನಿಯಮಿತವಾಗಿ ಔಷಧಿ ತೆಗೆದುಕೊಂಡ್ರೆ, ವಾಸಿ ಆಗುತ್ತೆ. ಸುಖವಾದ, ನೆಮ್ಮದಿಯ, ಸಾಂಸಾರಿಕ ಜೀವನ ನಡೆಸಬಹುದು. ಕೆಲಸ ಕಾರ್ಯ ಮಾಡಿಕೊಂಡು ಇರಬಹುದು. ಇದನ್ನ ನೀವು ತಿಳಿದಿರಿ. ನಿಮ್ಮ ಸುತ್ತಮುತ್ತಲಿನ ಜನರಿಗೆ ತಿಳಿಸಿ. ಯಾರಾದರು ರೋಗದಿಂದ ಬಳಲುವವರು ಇದ್ದರೆ ಅವರಿಗೆ ಈ ಮಾಹಿತಿ ನೀಡಿ.

ಸಕ್ಕರೆ ಖಾಯಿಲೆ, ಅದೇ Sugar, ರೋಗಗಳಿಗೆ ರಕ್ತದೊತ್ತಡ (B.P) ಖಾಯಿಲೆಗಳಿಗೆ ಹತ್ತಾರು ವರ್ಷ ಔಷಧಿ ತಗೋಬೇಕು. ಆದ್ರೆ ಈ ಮೂರ್ಛೆ ಖಾಯಿಲೆಗೆ ಕೇವಲ ೩-೪ ವರ್ಷ ನಿಯಮಿತವಾಗಿ ಔಷಧ ತಗೊಂಡ್ರೆ, ಖಾಯಿಲೆ ಗುಣವಾಗ್ತದೆ. ಯಾವ ತರಹದ ತೊಂದ್ರೇನೂ ಇಲ್ಲದೆ ಆರಾಮವಾಗಿ ಎಲ್ಲರ ತರಹನೇ ಜೀವನ ನಡೆಸಬಹುದು. ಗಾಬರಿಗೊಳ್ಳಬೇಕಾಗಿಲ್ಲ. ಯಾವ ಕಾರಣಕ್ಕೂ ನಿಮ್ಮ ಖಾಯಿಲೆಯ ಇರುವಿಕೆಯನ್ನು ಡಾಕ್ಟರ್ ಅವರಲ್ಲಿ ಹೇಳದೆ ಮುಚ್ಚಿಡಬೇಡಿ. ತಿಳಿಸಿ ಔಷಧ ಪಡೆಯಿರಿ.

ಅಪ್ಪಾ ಸೂತ್ರಧಾರ.....
ರೋಗಕ್ಯಾಕ ಹೆದರಬೇಕು?
ಔಷಧ ಸರಿಯಾಗ್ ತಗಾಬೇಕು

೩ - ೪ ವಷ್ಟೇ ತಾನೆ....?
ಆಮೇಲೆ ನಾನೇ ರಾಜ ತಾನೆ...?

ದೆವ್ವ-ಭೂತದ ಕಾಟ ಅಲ್ಲ.
ಇರೋಗಂಟ ಇರೋದಲ್ಲ.

ಈ ಕಥೆ ಹೇಳಿದವರಿಗೆ / ಕೇಳಿದವರಿಗೆ
ಆಡಿದವರಿಗೆ / ನೋಡಿದವರಿಗೆ
ಎಲ್ಲರಿಗೂ ಒಳ್ಳೇದು ಆಗುತ್ತೆ.

□

ಬ್ಯಾಂಕಾಕ್, ಥೈಲ್ಯಾಂಡ್‌ನಲ್ಲಿ ಜುಲೈ ೧೬, ೨೦೦೪ ರಂದು ನಡೆದ
೧೫ನೇ ಅಂತರರಾಷ್ಟ್ರೀಯ ಏಡ್ಸ್ ಸಮ್ಮೇಳನದಲ್ಲಿ ಪ್ರಾರಂಭಗೊಂಡ

## ಜನಾರೋಗ್ಯ ಚಳವಳಿ

# ಹೆಚ್.ಐ.ವಿ. ಮತ್ತು ಏಡ್ಸ್ ಬಗ್ಗೆ ಪ್ರಜಾಸನ್ನದು

**ಪೀಠಿಕೆ**

ಆರೋಗ್ಯ ಎನ್ನುವುದು ಒಂದು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವಿಷಯ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಒಂದು ಮೂಲಭೂತ ಮಾನವ ಹಕ್ಕು. ಅಸಮಾನತೆ, ಬಡತನ, ಶೋಷಣೆ, ಹಿಂಸೆ ಮತ್ತು ಅನ್ಯಾಯಗಳು ಅನಾರೋಗ್ಯದ ಮೂಲ ಬೇರುಗಳು. ಸರ್ವರಿಗೂ ಉತ್ತಮ ಆರೋಗ್ಯ ಎಂದರೆ ಜನರ ಸೌಖ್ಯದ ವಿರುದ್ಧ ಕೆಲಸ ಮಾಡುವ ಬಲಿಷ್ಠ ಶಕ್ತಿಗಳಿಗೆ ಸವಾಲು ಹಾಕಿ ನಿಲ್ಲಬೇಕು. ನಿಗಮಗಳ ಜಾಗತೀಕರಣವನ್ನು ವಿರೋಧಿಸಬೇಕು ಹಾಗೂ ರಾಜಕೀಯ ಮತ್ತು ಆರ್ಥಿಕ ಪ್ರಾಮುಖ್ಯಗಳಲ್ಲಿ ಚುರುಕಾದ ಬದಲಾವಣೆ ಕಾಣಬೇಕು.

ಹೆಚ್‌ಐವಿ ಮತ್ತು ಏಡ್ಸ್ ಒಂದು ಅಭಿವೃದ್ಧಿ ವಿಷಯವಾಗಿದ್ದು, ಇದಕ್ಕೆ ಸಾಮಾಜಿಕ ಹಾಗೂ ರಾಜಕೀಯ ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ. ಇದು ಒಂದು ಸಾರ್ವಜನಿಕ ಸಮಸ್ಯೆಯೂ ಆಗಿದ್ದು ಜನಾಧಾರಿತ ಆರೋಗ್ಯ ಹಾಗೂ ವೈದ್ಯಕೀಯ ಪ್ರವೇಶಿಕೆಯ ಅಗತ್ಯವಿದೆ. ಇಂತಹ ಪ್ರತಿಕ್ರಿಯೆಗಳಿಗೆ ಪ್ರಜಾಸತ್ತೆ ಜನಪರ ಅಂತರ್ ವಿಭಾಗೀಯ ನೀತಿರಚನೆ, ಉತ್ತಮ ಆಡಳಿತ, ಜನರ ಭಾಗವಹಿಸುವಿಕೆ ಮತ್ತು ಕಾರ್ಯಶೀಲ ಸಂವಹನಗಳ ಅಗತ್ಯವಿದೆ. ಇವುಗಳು ಅಂತರರಾಷ್ಟ್ರೀಯವಾಗಿ ಸಮ್ಮತವಾದ ಮಾನವ ಹಕ್ಕುಗಳು ಹಾಗೂ ಮಾನವೀಯ ಸೂತ್ರಗಳಲ್ಲಿ ಬೇರುಬಿಟ್ಟಿರಬೇಕು.

**ದೂರದೃಷ್ಟಿ**

ಆರೋಗ್ಯ ಕುರಿತು ಜನರ ಶಾಸನದಲ್ಲಿ ಹೇಳಿರುವಂತೆ : "ಒಂದು

ಉತ್ತಮ ಜಗತ್ತಿನ - ಅಂದರೆ ಎಲ್ಲರಿಗೂ ಉತ್ತಮ ಆರೋಗ್ಯಪೂರ್ಣ ಜೀವನ ವಾಸ್ತವಿಕವಾದ ಜಗತ್ತು; ಎಲ್ಲಾ ಜೀವಿಗಳನ್ನು ಹಾಗೂ ವೈವಿಧ್ಯ ಗಳನ್ನು ಗೌರವಿಸುವ, ಗುಣಗ್ರಹಣೆ ಮಾಡುವ ಮತ್ತು ಆಚರಿಸುವ ಒಂದು ಜಗತ್ತು; ಪರಸ್ಪರರ ಅಭಿವರ್ಧನೆಗೆ, ಜನರ ಪ್ರತಿಭೆ ಹಾಗೂ ಸಾಮರ್ಥ್ಯಗಳು ಅರಳಲು ಅವಕಾಶ ಮಾಡಿಕೊಡುವಂತಹ ಜಗತ್ತು; ನಮ್ಮ ಜೀವನವನ್ನು ರೂಪಿಸುವ ನಿರ್ಧಾರಗಳನ್ನು ಜನದನಿಯಿಂದಲೇ ಮಾರ್ಗದರ್ಶನ ಹೊಂದಿರುವ ಒಂದು ಜಗತ್ತು - ಇಂತಹ ನಮ್ಮ ಕಲ್ಪನೆಯ ಅಂತರಾಳದಲ್ಲಿ ಸಮಾನತೆ, ಸ್ಥಿರಣೀಯ ಜೈವಿಕ ಅಭಿವೃದ್ಧಿ, ಸಾಮಾಜಿಕ ನ್ಯಾಯ ಹಾಗೂ ಶಾಂತಿ ನೆಲೆಸಿರಬೇಕು."

**ಯಥಾರ್ಥ ನೋಟ**

ದೇಶದಲ್ಲೆಲ್ಲಾ ವ್ಯಾಪಿಸಿಕೊಂಡಿರುವ ಏಡ್ಸ್, ಸಾರ್ವಕಾಲಿಕವಾದ ಒಂದು ಅತಿದೊಡ್ಡ ಮಾನವೀಯ ಪಿಡುಗು. ಅದರಿಂದಾಗಿ ಅನೇಕ ಸಾವುನೋವುಗಳುಂಟಾಗಿವೆ, ಅನೇಕ ಕುಟುಂಬಗಳು ಹಾಗೂ ಸಮುದಾಯಗಳೇ ನಾಶವಾಗಿವೆ, ಅಭಿವೃದ್ಧಿ ಹಳಿತಪ್ಪಿ ಹೋಗಿದೆ ಮತ್ತು ದಶಕಗಳ ಪರಿಶ್ರಮದಿಂದ ಗಳಿಸಿದ್ದ ಆರೋಗ್ಯ ಸುಧಾರಣೆಗಳನ್ನು ಒಂದೇ ಏಟಿಗೆ ಹಿಂದಕ್ಕೆ ತಳ್ಳಿದೆ. ಈಗಾಗಲೇ ಆಫ್ರಿಕಾದಲ್ಲಿ ಹೆಚ್‌ಐವಿ ಮತ್ತು ಏಡ್ಸ್‌ಗಳು ಒಂದು ಸಂತತಿಯನ್ನೇ ಅಳಿಸಿಹಾಕಿವೆ. ತನ್ನ ಧಾಳಿ ಯನ್ನು ಆರಂಭಿಸಿದ ಎರಡು ದಶಕಗಳ ನಂತರ ಈ ರೋಗವು ಮತ್ತಷ್ಟು ವೇಗವಾಗಿ ಹರಡುತ್ತಿದೆಯಷ್ಟೇ ಅಲ್ಲ, ಪ್ರಪಂಚದ ಮೂಲೆಮೂಲೆ ಗಳಲ್ಲೂ ತನ್ನ ಕಬಂಧ ಬಾಹುಗಳಿಂದ ಆವರಿಸಿಕೊಳ್ಳುತ್ತಿದೆ.

ಜಾಗತೀಕರಣ ವ್ಯಾಪಾರದಿಂದ ಏರ್ಪಟ್ಟ ವಲಸೆ ಮಾರ್ಗ ಗಳುದ್ದಕ್ಕೂ ಹೆಚ್‌ಐವಿ ಮತ್ತು ಏಡ್ಸ್ ಹರಡುತ್ತಿದೆ. ಘರ್ಷಣೆ, ಯುದ್ಧ, ದುರಂತಗಳು, ಅಂಕುಡೊಂಕಾದ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಅನ್ಯಾಯದ ಆರ್ಥಿಕ ನೀತಿಗಳಿಂದ ಉದ್ಭವಿಸಿದ ಸಾಮಾಜಿಕ ಹಾಗೂ ಆರ್ಥಿಕ ಸಂಕಟಗಳು, ಈ ರೋಗಕ್ಕೆ ಹೆಚ್ಚು ಹೆಚ್ಚು ಜನರು ತುತ್ತಾಗು ವಂತೆ ಮಾಡಿವೆ.

ಪ್ರಾಥಮಿಕ ಆರೋಗ್ಯ ಶುಶ್ರೂಷೆಯ ಮೂಲಕ ೨೦೦೦ ಇಸವಿ ಯೊಳಗೆ ಸರ್ವರಿಗೂ ಆರೋಗ್ಯ ಎಂದು 'ಆಲ್ಮಾ ಅಟ' ಘೋಷಣೆ ಆಶ್ವಾಸನೆ ನೀಡಿತ್ತು. ೧೯೮೦ ಹಾಗೂ ೧೯೯೦ರ ನಡುವಿನ



ಅವಧಿಯಲ್ಲಿ ಏಕಮುಖ ಚಲನೆ, ಬದಲಾದ ಆರ್ಥಿಕ ಪ್ರಾಧಾನ್ಯಗಳು, ರಾಜಕೀಯ ನಿರ್ಧಾರಗಳಲ್ಲಿ ಖಾಸಗಿ ಹಿತಾಸಕ್ತಿಗಳ ಕೈವಾಡಗಳಿಂದಾಗಿ ಸಾರ್ವಜನಿಕ ಆರೋಗ್ಯ ಮತ್ತು ಪ್ರಾಥಮಿಕ ಆರೋಗ್ಯ ಶುಶ್ರೂಷೆಯ ವ್ಯವಸ್ಥೆ ಕುಸಿಯಿತು. ಹೆಚ್‌ಐವಿ ಮತ್ತು ಏಡ್ಸ್ ರೋಗಗಳ ಹರಡುವಿಕೆ ಯಿಂದಾಗಿ ಈ ಗುರಿಗಳನ್ನು ಸಾಧಿಸಲು ಆಗಲೇ ಇಲ್ಲ.

ನೂತನ ಮುಕ್ತ ಆರ್ಥಿಕ ನೀತಿಗಳಿಂದಾಗಿ ಬಡತನ, ಹಸಿವು ಮತ್ತು ಅನಾರೋಗ್ಯಗಳು ದಿನೇ ದಿನೇ ಹೆಚ್ಚುತ್ತಿವೆ. ಈ ಸನ್ನಿವೇಶದಲ್ಲಿ, ಪ್ರಾಥಮಿಕ ಆರೋಗ್ಯ ಶುಶ್ರೂಷೆ ಹಾಗೂ ಸಾರ್ವಜನಿಕ ಆರೋಗ್ಯಗಳ ಮೇಲೆ ಆಧಾರಗೊಂಡ ಒಂದು ಸಂಯುಕ್ತ, ಸೂಕ್ತ ಸಂಪನ್ಮೂಲವುಳ್ಳ ಆರೋಗ್ಯ ವ್ಯವಸ್ಥೆಗಳು ತುರ್ತಾಗಿ ಬೇಕಾಗಿವೆ.

ಸೂಕ್ಷ್ಮ ಸಂವೇದನೆ ಹಾಗೂ ಆರೋಗ್ಯ ಸಿಬ್ಬಂದಿಗಳ ತರಬೇತಿಯ ಕೊರತೆಯಿಂದಾಗಿ ಹೆಚ್‌ಐವಿ ಮತ್ತು ಏಡ್ಸ್‌ನೊಂದಿಗೆ ಬದುಕುತ್ತಿರುವ ವ್ಯಕ್ತಿಗಳ ಬಗ್ಗೆ ನಿಷೇಧಾತ್ಮಕ ಮನೋಭಾವನೆ ಬೆಳೆಯುತ್ತಿದೆ. ಇಂತಹ ಮನೋಭಾವನೆಗಳು ಮತ್ತು ರೂಢಿಗಳು, ಸುಧಾರಣೆಗೆ ಅಡ್ಡಿಯುಂಟು ಮಾಡುವ ಕಳಂಕ ಹಾಗೂ ಭೇದಗಳಿಗೆ ಎಡೆ ಮಾಡಿಕೊಡುತ್ತದೆ.

ಆರೋಗ್ಯಶುಶ್ರೂಷೆಯು ಸುರಕ್ಷಿತವಾಗಿದೆ ಮತ್ತು ಆರೋಗ್ಯ ಶುಶ್ರೂಷೆ ಘಟಕಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಜನರು ಹೆಚ್‌ಐವಿ ಅಥವಾ ಇತರ ಸಂಸರ್ಗ ರೋಗಗಳಿಗೆ ಬಲಿಯಾಗುತ್ತಿಲ್ಲ ಎನ್ನುವ ಅಂಶವನ್ನು ಖಚಿತಪಡಿಸಬೇಕಾಗಿದೆ.

**ಜನತಾ ಹಾಗೂ ಸಾಮಾಜಿಕ ಚಳವಳಿಗಳ ಮೂಲಕ ಕ್ರಮಕೈಗೊಳ್ಳಲು ಕರೆ**

- ಆರೋಗ್ಯ ಸುಧಾರಣೆ, ರೋಗ ತಡೆಗಟ್ಟುವಿಕೆ ಹಾಗೂ ಆರೈಕೆ ಗಳಲ್ಲಿ ಸಮುದಾಯಗಳ ಸಾಮರ್ಥ್ಯಗಳನ್ನು ಚಲನಶೀಲ ಗೊಳಿಸಬೇಕು ಹಾಗೂ ಬಲಪಡಿಸಬೇಕು.
- ಹೆಚ್‌ಐವಿ ತಡೆಗಟ್ಟುವಿಕೆಯಲ್ಲಿ ಮಹಿಳೆಯರಿಗೆ ಹಾಗೂ ಯುವಜನರಿಗೆ ಹೆಚ್ಚಿನ ಅಧಿಕಾರ ವಹಿಸಿಕೊಡಬೇಕು.
- ಸಕಾರಾತ್ಮಕ ಜನರ ಜಾಲಗಳು, ಮಹಿಳಾ ಚಳವಳಿಗಳು, ಆರೋಗ್ಯ ಹಾಗೂ ಸಾಮಾಜಿಕ ಕ್ರಿಯಾಶೀಲರು, ಕಾರ್ಮಿಕ



ಸಂಘಟನೆಗಳು, ವಿದ್ಯಾರ್ಥಿ ಸಮೂಹಗಳು, ವಿದ್ಯಾ ಸಂಸ್ಥೆಗಳು ಹಾಗೂ ಇತರ ಪ್ರಗತಿಶೀಲ ಪ್ರತಿನಿಧಿಗಳ ನಡುವೆ ಮೈತ್ರಿ ಏರ್ಪಡಿಸಬೇಕು.

- ವ್ಯಾಪಕವಾದ ಪ್ರಾಥಮಿಕ ಆರೋಗ್ಯ ಶುಶ್ರೂಷೆ ಮೂಲಕ ಎಆರ್‌ವಿ ಚಿಕಿತ್ಸೆ ಸಮಾನವಾಗಿ ಮತ್ತು ವಿಶ್ವದಾದ್ಯಂತ ದೊರಕುವಂತಾಗಿಸಲು ಜನಜಾಗೃತಿ ಕಾರ್ಯಕ್ರಮವನ್ನು ತೀವ್ರಗೊಳಿಸಬೇಕು.
- ಔಷಧ ಬೆಲೆಗಳನ್ನು ಮೇಲೇರಿಸುವ ಭೌತಿಕ ಆಸ್ತಿ ಹಕ್ಕು ಆಳ್ವಿಕೆಯನ್ನು ಬದಲಾಯಿಸಲು ಕಾನೂನು ಕ್ರಮ ಹಾಗೂ ಸಮೂಹ ಚಳವಳಿಗಳಿಗೆ ಅವಕಾಶ ಮಾಡಿಕೊಡಬೇಕು.
- ಆರೋಗ್ಯ ಹಾಗೂ ಆರೋಗ್ಯ ಶುಶ್ರೂಷೆಗೆ ಜನರ ಹಕ್ಕುಗಳನ್ನು ನಿರ್ಲಕ್ಷಿಸುವ ಆರ್ಥಿಕ ಹಾಗೂ ವ್ಯಾಪಾರಿ ಸಂಸ್ಥೆಗಳ ಆಜ್ಞೆಗಳಿಗೆ ಒಳಪಟ್ಟ ನೀತಿರಚನೆಗಳನ್ನು ವಿರೋಧಿಸಿ.
- ಹೆಚ್‌ಐವಿ ಹರಡುವಿಕೆ ಮತ್ತು ಬಡತನ, ಯುದ್ಧ ಹಾಗೂ ಸ್ಥಳಾಂತರಗಳಂತಹ ಸಾಮಾಜಿಕ ಪಿಡುಗುಗಳ ನಡುವಿನ ಸಂಬಂಧವನ್ನು ಬಹಿರಂಗಪಡಿಸಿ, ಮತ್ತು ಈ ಅನ್ಯಾಯಗಳನ್ನು ಸರಿಪಡಿಸುವ ಪ್ರಯತ್ನಗಳಲ್ಲಿ ಭಾಗವಹಿಸಿ.

ಆರೋಗ್ಯ ತಜ್ಞರಿಂದ ಮತ್ತು ಆರೋಗ್ಯ ಕಾರ್ಮಿಕರಿಂದ

- ಹೆಚ್‌ಐವಿ ಮತ್ತು ಏಡ್ಸ್‌ನೊಂದಿಗೆ ಬದುಕುತ್ತಿರುವ ವ್ಯಕ್ತಿಗಳಿಗೆ ಜವಾಬ್ದಾರಿಯುತ ಆರೈಕೆ ಹಾಗೂ ಗುಣಮಟ್ಟದ ಚಿಕಿತ್ಸೆ ಒದಗಿಸಿ.
- ಆರೈಕೆ ಮತ್ತು ಚಿಕಿತ್ಸಾ ಕೇಂದ್ರಗಳಲ್ಲಿ ಕಳಂಕ ಮತ್ತು ಭೇದ ಭಾವನೆಯನ್ನು ನಿಲ್ಲಿಸಿ.
- ರೋಗಿಗಳ ಘನತೆ ಮತ್ತು ಏಕಾಂತದ ಹಕ್ಕನ್ನು ಗೌರವಿಸಿ.
- ಔಷಧ ಪ್ರಯೋಗಗಳಲ್ಲಿ ನೀತಿಯುಕ್ತ ಹಾಗೂ ಕ್ರಮಬದ್ಧ ನಿಯಮಗಳನ್ನು ಅನುಸರಿಸಿ.
- ಆರೋಗ್ಯ ಶುಶ್ರೂಷೆ ಕೇಂದ್ರಗಳಲ್ಲಿ ರೋಗ ಹರಡುವಿಕೆಯನ್ನು ತಡೆಗಟ್ಟಲು ಸೂಕ್ತ ಪ್ರತಿಬಂಧಕ ವ್ಯವಸ್ಥೆ ಒದಗಿಸಿ.



- ಬೃಹತ್ತಾದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳನ್ನು ಉದ್ದೇಶಿಸಿ ನಡೆಯುವ ಜನತಾ ಆರೋಗ್ಯ ಚಳವಳಿ ಪ್ರಯತ್ನಗಳನ್ನು ಬೆಂಬಲಿಸಿ.

ಸರ್ಕಾರಗಳಿಂದ

- ಹೆಚ್‌ಐವಿ ಮತ್ತು ಏಡ್ಸ್ ಪರಿಹಾರ ಒಳಗೊಳ್ಳುವಂತೆ ಪ್ರಾಥಮಿಕ ಆರೋಗ್ಯ ಶುಶ್ರೂಷೆಯಲ್ಲಿ ವ್ಯಾಪಕ ಪರಿಹಾರ ಕ್ರಮಗಳನ್ನು ಅಭಿವೃದ್ಧಿಪಡಿಸಿ ಬಲಿಷ್ಠಗೊಳಿಸಿ.
- ಯೋಜನೆ ಹಾಗೂ ಅನುಷ್ಠಾನ ಕಾರ್ಯಗಳಲ್ಲಿ ಜನರ ಹಾಗೂ ಪೌರ ಸಮಾಜದ ಭಾಗವಹಿಸುವಿಕೆಯನ್ನು ಹೆಚ್ಚಿಸಿ.
- ಹೆಚ್‌ಐವಿ ಮತ್ತು ಏಡ್ಸ್‌ನೊಂದಿಗೆ ಬದುಕುತ್ತಿರುವ ವ್ಯಕ್ತಿಗಳು ಎಲ್ಲಾ ಮಟ್ಟಗಳಲ್ಲೂ ಪಾಲ್ಗೊಳ್ಳುವುದನ್ನು ಖಚಿತಪಡಿಸಿ.
- ಹೆಚ್‌ಐವಿ ಮತ್ತು ಏಡ್ಸ್‌ನೊಂದಿಗೆ ಬದುಕುತ್ತಿರುವ ವ್ಯಕ್ತಿಗಳಿಗೆ ಮೂಲಭೂತ ಸೇವೆಗಳು ಲಭ್ಯವಾಗುವುದನ್ನು ಹೆಚ್ಚಿಸಿ.
- ಉತ್ತಮ ಗುಣಮಟ್ಟದ ಎಆರ್‌ವಿ ಹಾಗೂ ಇತರ ಆವಶ್ಯಕ ಔಷಧಗಳು ಸುಲಭವಾಗಿ ಕೈಗೆಟುಕುವ ಬೆಲೆಗಳಲ್ಲಿ ಲಭ್ಯವಾಗುವುದನ್ನು ಖಚಿತಪಡಿಸಿ.
- ಸಾರ್ವಜನಿಕ ಆರೋಗ್ಯಕ್ಕೆ ಸೂಕ್ತ ಸಂಪನ್ಮೂಲಗಳನ್ನು ಗೊತ್ತುಮಾಡಿ.
- ಪೌಷ್ಠಿಕ ಆಹಾರ ಹಾಗೂ ಮಾನಸಿಕ-ಸಾಮಾಜಿಕ ಬೆಂಬಲ ಹೆಚ್‌ಐವಿ ಮತ್ತು ಏಡ್ಸ್ ಆರೈಕೆಯ ಒಂದು ಭಾಗವಾಗಿಸಿ.
- ಜೀವನ ಕೌಶಲ್ಯ ಶಿಕ್ಷಣ ಹಾಗೂ ಮಹಿಳಾ ಆರೋಗ್ಯ ಅಧಿಕಾರ ನೀಡುವಿಕೆ ಕುರಿತು ಕಾರ್ಯಕ್ರಮಗಳನ್ನು ರೂಪಿಸಿ.
- ಸಾಕಷ್ಟು ಸಂಪನ್ಮೂಲಗಳೊಂದಿಗಿನ ಸಾಂಪ್ರದಾಯಿಕ ಔಷಧ ವ್ಯವಸ್ಥೆಯನ್ನು ಉತ್ತೇಜಿಸಿ.
- ವೇಶ್ಯಾವಾಟಿಕೆ ಕಾರ್ಮಿಕರು, ಔಷಧ ಬಳಕೆದಾರರು, ಲಿಂಗ ಅಲ್ಪಸಂಖ್ಯಾತರು ಹಾಗೂ ಬೀದಿ ಮಕ್ಕಳೂ ಸೇರಿದಂತೆ ಎಲ್ಲಾ ದುರ್ಬಲ ವರ್ಗದವರಿಗಾಗಿ ಹಾನಿ ಕಡಿಮೆ ಮಾಡುವ ನೀತಿ ರಚನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿ.



ನಿಗಮಗಳಿಂದ

- ಲಾಭ ಗಳಿಕೆಗಿಂತ ಜನರಿಗೆ ಪ್ರಾಮುಖ್ಯತೆ ನೀಡಿ.
- ಬೆಲೆ ಕೈಗೆಟುಕುವಂತಹ ರೋಗಲಕ್ಷಣ ಪತ್ತೆಹಚ್ಚುವಿಕೆ ಪರಿಣಾಮ ಪರೀಕ್ಷೆಗಳು ಲಭ್ಯವಾಗುವಂತೆ ಮಾಡಿ.
- ಎಆರ್‌ವಿ ಹಾಗೂ ಆವಶ್ಯಕ ಔಷಧಗಳು ಸುಲಭ ಬೆಲೆಯಲ್ಲಿ ಲಭ್ಯವಾಗುವುದನ್ನು ಖಚಿತಪಡಿಸಿ.

ವಿಶ್ವ ಆರೋಗ್ಯ ಸಂಸ್ಥೆ ಮತ್ತು ಸಂಯುಕ್ತ ರಾಷ್ಟ್ರಗಳ .......... (ಆನ್‌ಏಡ್ಸ್)

- ಪ್ರಗತಿ ಸೂಚಕಗಳನ್ನೊಳಗೊಂಡ ಪ್ರಾಥಮಿಕ ಆರೋಗ್ಯ ಶುಶ್ರೂಷೆ ಹಾಗೂ ಆರೋಗ್ಯ ವ್ಯವಸ್ಥೆಗಳನ್ನು ಬಲಪಡಿಸುವಂತಹ ವ್ಯಾಪಕ ಕ್ರಮ ರೂಪಿಸಿ.
- ಸಂಕುಚಿತ ದೃಷ್ಟಿಯ ಏಕಮುಖ ಕಾರ್ಯಕ್ರಮಗಳನ್ನು ನಿಲ್ಲಿಸಿ.
- ಹೆಚ್‌ಐವಿ ಹರಡುವಿಕೆ ಮತ್ತು ಏಡ್ಸ್ ಹಾಗೂ ಮಾನವ ಹಕ್ಕುಗಳ ಬಗೆಗಿನ ಯು.ಎನ್. ಅಂತರರಾಷ್ಟ್ರೀಯ ಮಾರ್ಗಸೂಚಿಗಳನ್ನು ಎಲ್ಲಾ ಸರ್ಕಾರಗಳೂ ಅನುಸರಿಸುವಂತೆ ಒತ್ತಾಯಿಸಿ.
- ೩ - ೫ ಕಾರ್ಯಕ್ರಮಗಳಲ್ಲಿ ಪ್ರಾಮುಖ್ಯ ಪಡೆದಿರುವ ರಾಷ್ಟ್ರಗಳನ್ನು ಸೇರಿಸಿ.
- ಕಡಿಮೆ ಪ್ರಚಲಿತ ದೇಶಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಿ.
- ಉಪ ಸಹರಾ ಆಫ್ರಿಕನ್ ದೇಶಗಳಲ್ಲಿ ಕೂಡಲೆ ಕಾರ್ಯಾಚರಣೆ ಪ್ರಾರಂಭಿಸಿ.

ವಿಶ್ವ ಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತು ವಿಶ್ವವ್ಯಾಪಾರ ಸಂಸ್ಥೆಗಳಿಂದ

- ಬಡತನ ವಿರೋಧಿ ವಿಶ್ವವ್ಯಾಪಿ ಆರ್ಥಿಕ ನೀತಿಗಳಿಂದ ಉಂಟಾದ ಸಾಮಾಜಿಕ ದುರಂತಗಳಿಗೆ ಹೊಣೆಯಾಗಿರಿ.
- ಎಲ್ಲಾ ಬಡ ರಾಷ್ಟ್ರಗಳ ಸಾಲಗಳನ್ನು ಮನ್ನಾ ಮಾಡಿ, ವಿಶೇಷವಾಗಿ ಹೆಚ್‌ಐವಿ ಮತ್ತು ಏಡ್ಸ್‌ಗೆ ತುತ್ತಾಗುವುದೆಂದು ಗುರುತಿಸಲಾದ ದೇಶಗಳು.



- ಮುಕ್ತ ವ್ಯಾಪಾರ ಒಡಂಬಡಿಕೆಗಳು, ಅಗತ್ಯ ಸೇವೆಗಳ ಖಾಸಗೀಕರಣ ಮತ್ತು ಆರೋಗ್ಯ ಶುಶ್ರೂಷೆಯ ವ್ಯಾಪಾರೀಕರಣವನ್ನು ನಿಲ್ಲಿಸಿ.
- ಹೆಚ್‌ಐವಿ ಮತ್ತು ಏಡ್ಸ್ ತಡೆಗಟ್ಟುವಿಕೆಗೆ ಸಾಲದ ಬದಲಿಗೆ ಅನುದಾನದ ಮೂಲಕ ಆರ್ಥಿಕ ನೆರವು ನೀಡಿ.
- ತಳಿ ಔಷಧಗಳ ಲಭ್ಯತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಔಷಧ ಏಕಸ್ವಾಮ್ಯತೆಯನ್ನು ತೆಗೆಯಿರಿ.

ಹೆಚ್‌ಐವಿ ಮತ್ತು ಏಡ್ಸ್ ಬಗೆಗಿನ ಜನತಾ ಶಾಸನವನ್ನು ಬೆಂಬಲಿಸಲು ಹಾಗೂ ಅನುಷ್ಠಾನಕ್ಕೆ ತರಲು ಮತ್ತು ಜನತಾ ಆರೋಗ್ಯ ಚಳವಳಿಯನ್ನು ಸೇರಲು ನಾವು ಎಲ್ಲಾ ವ್ಯಕ್ತಿಗಳಿಗೆ ಹಾಗೂ ಸಂಸ್ಥೆಗಳಿಗೆ ಕರೆ ನೀಡುತ್ತೇವೆ.

ಸುಮಾರು ೧೦೦ ರಾಷ್ಟ್ರಗಳಲ್ಲಿ ಪಿಹೆಚ್‌ಎಮ್ ಸಕ್ರಿಯವಾಗಿ ಕಾರ್ಯನಿರತವಾಗಿದೆ.

ಜನತಾ ಆರೋಗ್ಯ ಚಳವಳಿಯು ಆರೋಗ್ಯಕ್ಕೆ ಜನರ ಶಾಸನಗಳ ಮೇಲೆ ಆಧಾರಿತವಾಗಿದೆ ಮತ್ತು ಹೆಚ್‌ಐವಿ ಮತ್ತು ಏಡ್ಸ್‌ನೊಂದಿಗೆ ಬದುಕುತ್ತಿರುವ ಜನರನ್ನೂ ಒಳಗೊಂಡಂತೆ ವಿವಿಧ ವರ್ಗಗಳ ಜನರ ಪಾಲ್ಗೊಳ್ಳುವಿಕೆ ಪ್ರಕ್ರಿಯೆಯಿಂದ ಅಭಿವೃದ್ಧಿಪಡಿಸಲಾಗಿದೆ.

*ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ :*

ಜನಾರೋಗ್ಯ ಚಳವಳಿ ಕಾರ್ಯಾಲಯ

ಸಿಹೆಚ್‌ಸಿ, ೩೬೭, ಜಕ್ಕಸಂದ್ರ ೧ನೇ ಮುಖ್ಯರಸ್ತೆ, ೧ನೇ ಬ್ಲಾಕ್

ಕೋರಮಂಗಲ, ಬೆಂಗಳೂರು - ೫೬೦ ೦೩೪, ಭಾರತ

ದೂರವಾಣಿ : +91 80 5128 0009, ಫ್ಯಾಕ್ಸ್ : +91 80 25525372

E-mail : secretariat@phmovement.org



- ಭಾರತದಲ್ಲಿ ಜನಾರೋಗ್ಯ ಸನ್ನದನ್ನು ಹತ್ತು ಪ್ರಾಂತೀಯ ಭಾಷೆಗಳಿಗೆ ಭಾಷಾಂತರಿಸಲಾಗಿದೆ.
- ಭಾರತದ ಇಪ್ಪತ್ತೊಂದು ರಾಷ್ಟ್ರೀಯ ಸಂಘಟನೆಗಳು ಈ ಆಂದೋಲನದಲ್ಲಿ ಭಾಗವಹಿಸುತ್ತಿವೆ.
- ಜನಸ್ವಾಸ್ಥ್ಯ ಅಭಿಯಾನ ಹಾಗೂ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (NHRC) ಸಹಭಾಗಿತ್ವದೊಂದಿಗೆ ಭಾರತದ ಐದು ವಲಯಗಳಲ್ಲಿ - ಉತ್ತರ (ಲಕ್ನೊ); ದಕ್ಷಿಣ (ಚೆನ್ನೈ); ಪಶ್ಚಿಮ (ಭೂಪಾಲ್); ಪೂರ್ವ (ಕೊಲ್ಕತ್ತಾ); ಉತ್ತರ ಪೂರ್ವ (ಗೌಹಾತಿ) ಇಲ್ಲಿ ಜನಸುನವಾಯಿಗಳನ್ನು ಆಯೋಜಿಸಲಾಗಿದೆ.
- ದಶಲಕ್ಷ ಸಹಿ ಸಂಗ್ರಹದಲ್ಲಿ ಕನ್ನಡದ ಅವತರಣಿಕೆಯನ್ನು ಬಿಡುಗಡೆ ಮಾಡಲಾಗಿದೆ.

*(ಆಗಸ್ಟ್ ೨೦೦೪ರವರೆಗೆ)*

*ಸಂಗ್ರಹ : ವಿಶ್ವ ಜನಾರೋಗ್ಯ ಆಂದೋಲನ ಕಾರ್ಯಾಲಯ, ಬೆಂಗಳೂರು*



"ನಿಮಗೆ ಸಂದೇಹವಾದಾಗ,
ನೀವು ಕಂಡಿರುವ ಅತ್ಯಂತ ಬಡವನ,
ಅಸಹಾಯಕನ ಮುಖವನ್ನು ಸ್ಮರಿಸಿಕೊಂಡು
ಒಂದು ಪ್ರಶ್ನೆಯನ್ನು ಕೇಳಿಕೊಳ್ಳಿ -
ನೀವು ಯೋಚಿಸಿರುವ ಕಾರ್ಯವು
ಆತನಿಗೆ ಉಪಯುಕ್ತವಾಗಬಹುದೇ-
ತನ್ನ ಗುರಿಯ ಮೇಲಿನ ನಿಯಂತ್ರಣ
ಆತನಿಗೆ ದೊರಕಿಸಿಕೊಡಬಹುದೇ ?"

–ಎಂ.ಕೆ. ಗಾಂಧಿ

